UNIVERSAL LIBRARY
OU_200180
UNIVERSAL LIBRARY

# ದರ್ಪಚೂರ್ಣ

ಮೂಲ ಲೇಖಕರು :
**ದಿವಂಗತ ಡಾ|| ಶರಚ್ಚಂದ್ರ ಚಟ್ಟೋಪಾಧ್ಯಾಯರು**

ಅನುವಾದಕರು :
**ಸಿ. ಕೆ. ನಾಗರಾಜರಾವ್**

ಗ್ರಂಥದ ಹಕ್ಕುಗಳು ಕಾದಿದಲ್ಪಟ್ಟಿವೆ

ಪ್ರಥಮ ಮುದ್ರಣ : ೧೯೪೧
ದ್ವಿತೀಯ ಮುದ್ರಣ : ೧೯೪೩

ಬೆಲೆ : ಎಂಟಾಣೆ.

**ಶರತ್ ಏಜನ್ಸೀಸ್, ಬೆಂಗಳೂರು ನಗರ**

# ಅರಿಕೆ

ಡಾ|| ಶರತ್‌ಬಾಬುಗಳಂತಹ ಅತ್ಯುತ್ತಮ ವಂಗ ಸಾಹಿತಿಗಳ ಬರವಣಿಗೆಯ ವಿಚಾರವಾಗಿ ಬರೆಯಹೋಗುವುದು ಅಷ್ಟೇನೂ ಪ್ರಯೋಜನಕಾರಿಯಲ್ಲ. ಏಕೆಂದರೆ ಅವರ ಬರವಣಿಗೆಯ ಪರಿಚಯವಿಲ್ಲದ ಸಾಹಿತ್ಯ ಪ್ರೇಮಿಯು ಯಾರೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಅವರ ಲೇಖನಿಯಲ್ಲಿನ ಶಕ್ತಿ, ಕಲೆಗಾರಿಕೆ ಯಾರಿಗೂ ಅಜ್ಞಾತವಾದದ್ದಲ್ಲ.

ಆದರೂ ಸಹ, ಅವರಿಗೆ ಸ್ತ್ರೀಯರ ವಿಚಾರದಲ್ಲಿ ಅತ್ಯಂತ ಆದರ ಭಾವವಿದೆ, ಗೌರವವಿದೆ ಎಂಬುದನ್ನು ಒತ್ತಿ ಹೇಳಬೇಕಾಗಿದೆ. ಆ ಆದರ ಭಾವವನ್ನು ಅವರ ಗ್ರಂಥಗಳೇ ಎತ್ತಿ ಸಾರುತ್ತಿವೆ. ಯಾವ ಪುಸ್ತಕದಲ್ಲಿಯೂ ಅವರು ಸ್ತ್ರೀಯರ ಬಾಹ್ಯ ಸೌಂದರ್ಯದ ಕಡೆ ಲಕ್ಷ್ಯಕೊಟ್ಟಿಲ್ಲ; ಅವರ ದೀರ್ಘವರ್ಣನೆಯಲ್ಲಿ ವೃಥಾ ಕಾಲಹರಣಮಾಡಿಲ್ಲ. ಅವರು ಚಿತ್ರಿಸುವ ಪ್ರೇಮವು ಯಾವಾಗಲೂ ತ್ಯಾಗಮಯವಾಗಿರುತ್ತದೆ. ಯಾವಾಗಲೂ ಅವರು ನೋಡುವುದು, ಚಿತ್ರಿಸುವುದು ಹೃದಯವನ್ನು; ದೇಹವನ್ನಲ್ಲ. ಈ "ದರ್ಪಚೂರ್ಣ"ದ ಪಾತ್ರಗಳಾದರೂ ಅದೇ ತಳಹದಿಯ ಮೇಲೆ ಸೃಷ್ಟಿಸಲ್ಪಟ್ಟುವುಗಳು. ಅದೇ ಭಾವವನ್ನು ಎತ್ತಿತೋರುತ್ತದೆ.

'ಶರತ್ ಸಾಹಿತ್ಯ' ಮಾಲೆಯ ಮೊದಲನೆಯ ಕುಸುಮವಾದ 'ಪ್ರೇಮಯೋಗಿನಿ'ಗೆ ಕನ್ನಡಿಗರಿತ್ತ ಪ್ರೋತ್ಸಾಹವು ಈ ಎರಡನೆಯ ಕುಸುಮವು ಅರಳಲು ಕಾರಣವಾಯಿತು. ಅವರ ಪ್ರೋತ್ಸಾಹ, ಆದರಗಳು ಏಕರೀತಿಯಾಗಿದ್ದರೆ ಬಾಬುಗಳ ಇನ್ನೂ ಕೆಲವು ಗ್ರಂಥಗಳನ್ನು ಕನ್ನಡಿಸಬೇಕೆಂದಿರುವ ನನ್ನ ಬಯಕೆ ಪೂರ್ಣವಾದೀತು.

ಈ ಪುಸ್ತಕವು ಹೊರಬೀಳಲು ಕಾರಣರಾದ ನನ್ನೆಲ್ಲ ಮಾನ್ಯ ಮಿತ್ರರಿಗೂ ನಾನು ಕೃತಜ್ಞ.

128, ನರಸಿಂಹರಾಜ ಕಾಲೋನಿ,
ಬೆಂಗಳೂರು ನಗರ
3-1-1941

ಸಿ. ಕೆ. ನಾಗರಾಜರಾವ್

# ದರ್ಪಚೂರ್ಣ

## ೧

ಸಂಜೆಯಾಗುತ್ತಲೇ ಇಂದುಮತಿಯು ಕೊಂಚ ಅಲಂಕಾರ ಮಾಡಿಕೊಂಡು ತನ್ನ ಪತಿಯ ಕೊಠಡಿಯೊಳಕ್ಕೆ ಪ್ರವೇಶಿಸುತ್ತಾ, "ಏನು ನಡೀತಾ ಇದೆ ?" ಎಂದು ಕೇಳಿದಳು.

ನರೇಂದ್ರನು ಒಂದು ಮಾಸಪತ್ರಿಕೆಯನ್ನು ಓದುತ್ತಿದ್ದನು. ಅವನು ಮುಖವೆತ್ತಿ ಏನನ್ನೂ ಹೇಳದೆ ಕೊಂಚಹೊತ್ತು ಪತ್ನಿಯ ಮುಖಚಹರೆಯನ್ನು ಈಕ್ಷಿಸುತ್ತಿದ್ದು ಅನಂತರ, ಪತ್ರಿಕೆಯನ್ನು ಅವಳ ಕೈಯಲ್ಲಿಟ್ಟನು.

ತೆರೆದಿಟ್ಟಿದ್ದ ಹಾಳೆಯ ಕಡೆ ದೃಷ್ಟಿಸಿ, ಹುಬ್ಬುಗಳನ್ನು ಅರಳಿಸಿ, ಇಂದುಮತಿಯು, ಆಶ್ಚರ್ಯವನ್ನು ಪ್ರಕಟಿಸಿದಳು. "ಅರೆ, ಇದು ನಿಮ್ಮದೇ ಕವಿತೆ! ಚೆನ್ನಾಗಿದೆ – ಒಳ್ಳೆ ಬಿಟ್ಟಿ ಕೆಲಸ. ಎಲ್ಲಿ ನೋಡೋಣ, ಇದ್ಯಾವ ಪತ್ರಿಕೆ ? – 'ಸರಸ್ವತಿ ?' ಏಕೆ ? 'ಸ್ವಪ್ರಕಾಶ'ದವರು ಅಚ್ಚು ಹಾಕಲಿಲ್ಲವೇ ?"

ನರೇಂದ್ರನ ಶಾಂತದೃಷ್ಟಿಯು ವ್ಯಥೆಯಿಂದ ಮಲಿನವಾಯಿತು.

" 'ಸ್ವಪ್ರಕಾಶ'ದವರು ವಾಪಸ್ಸು ಮಾಡಿಬಿಟ್ಟರೆ ?" ಎಂದು ಇಂದುಮತಿಯು ಮತ್ತೆ ಪ್ರಶ್ನಿಸಿದಳು.

"ಅಲ್ಲಿಗೆ ಕಳುಹಿಸಲೇ ಇಲ್ಲ."

"ಒಂದು ಸಲ ಕಳುಹಿಸಿ ನೋಡಲಿಲ್ಲವೇಕೆ ? — 'ಸ್ವಪ್ರಕಾಶ'ವು 'ಸರಸ್ವತಿ' ಅಲ್ಲ. ಅದರ ದೊಡ್ಡಸ್ತಿಕೆ ಅದಕ್ಕೆ ಗೊತ್ತು. ಆದ್ದರಿಂದಲೇ ನಾನು ಅಂತಿಂತಹ ಪತ್ರಿಕೆಗಳನ್ನು ಯಾವಾಗಲೂ ಓದುವುದೇ ಇಲ್ಲ." ಇಂದುಮತಿಯು ಕೊಂಚ

ನಕ್ಕು, ಪುನಃ, "ಸರಿ, ನೀವು ಬರೆದದ್ದನ್ನ ನೀವೇ ಇಷ್ಟು ಮನಸ್ಸಿಟ್ಟು ಓದುತ್ತೀರಾ! ಚೆನ್ನಾಗಿದೆ....ಇವೊತ್ತು ಶನಿವಾರ, ನಾನು ವಿಮಲಾನ ಕರೆದುಕೊಂಡು ಬಯಾಸ್ಕೋಪಿಗೆ ಹೋಗುತ್ತೇನೆ. ಕಮಲು ನಿದ್ದೆಮಾಡುತ್ತಿದ್ದಾಳೆ. ನಿಮ್ಮ ಕಾವ್ಯದಿಂದ ಕೊಂಚ ಬಿಡುವು ಮಾಡಿಕೊಂಡು ಅವಳ ಮೇಲೂ ಒಂದು ದೃಷ್ಟಿ ಇಟ್ಟಿರಿ. ನಾನು ಹೋಗುತ್ತೇನೆ" ಎಂದಳು.

ನರೇಂದ್ರನು ಪತ್ರಿಕೆಯನ್ನು ಮುಚ್ಚಿ ಮೇಜಿನ ಒಂದು ಕೊನೆಯಲ್ಲಿಡುತ್ತಾ, "ಹೋಗು" ಎಂದನು.

ಇಂದುಮತಿಯು ಹೋಗುತ್ತಿದ್ದಳು. ಕೂಡಲೇ ಅವಳ ಕಿವಿಯಲ್ಲಿ ಒಂದು ದೀರ್ಘನಿಶ್ವಾಸದ ಶಬ್ದ ಬಿತ್ತು. ಆಕ್ಷಣವೇ ಅವಳು ಹಿಂತಿರುಗಿ ಬಂದು ಒದರಲು ಮೊದಲು ಮಾಡಿದಳು—"ಸರಿ, ಯಾವಾಗಲಾದರೂ ಸರಿಯೆ ನಾನು ಏನಾದರೂ ಕೆಲಸ ಮಾಡಬೇಕೂಂತ ಇಷ್ಟಪಟ್ಟರೆ, ನೀವು ಹೀಗೇಕೆ ಸುಮ್ಮನೆ ನಿಟ್ಟುಸಿರು ಬಿಡುತ್ತೀರಿ. ಹೇಳಬಾರದೆ? ಇದಿಷ್ಟೇ ನಿಮ್ಮ ದುಃಖದ ಉದ್ವೇಗಕ್ಕೆ ಕಾರಣವಾದರೆ, ಬಾಯಿಬಿಟ್ಟು ಇದ್ದದ್ದು ಇದ್ದಹಾಗೆ ಏಕೆ ಹೇಳುವುದಿಲ್ಲ? ಹೇಳಿದರೆ ನಮ್ಮಪ್ಪನಿಗಾದರೂ ಕಾಗದ ಬರೆದು ಏನಾದರೂ ದಾರಿ ಹುಡುಕೇನು!"

ನರೇಂದ್ರನು ಮುಖವೆತ್ತಿ ಕೊಂಚ ಹೊತ್ತು ಇಂದುಮತಿಯ ಕಡೆ ನೋಡುತ್ತಿದ್ದ. ಏನೋ ಹೇಳುವಂತೆ ಕಂಡು ಬಂತು. ಆದರೆ ಏನನ್ನೂ ಹೇಳದೆ ತಲೆತಗ್ಗಿಸಿ ಸುಮ್ಮನಿದ್ದುಬಿಟ್ಟನು.

ನರೇಂದ್ರನ ಚಿಕ್ಕಮ್ಮನ ಮಗಳು, ವಿಮಲಾ, ಇಂದುಮತಿಯ ಜೊತೆಗಾತಿ. ಇಂದುಮತಿಯ ಮನೆಯ ಮುಂದಿನ ರಸ್ತೆಯು ತಿರುಗುವೆಡೆಯಲ್ಲಿಯೇ ವಿಮಲಾ ಮನೆ ಇದೆ. ರಸ್ತೆಯಲ್ಲಿ ಗಾಡಿ ನಿಲ್ಲಿಸಿ ಒಳಗೆ ಪ್ರವೇಶಿಸುತ್ತಿದ್ದ ಹಾಗೆಯೇ ಇಂದುಮತಿಯು ವಿಸ್ಮಯ ಕೋಪಗಳಿಂದ, "ಇದೇನಮ್ಮ ಇದು. ಇನ್ನೂ ಸೀರೆ

ಕೂಡ ಉಟ್ಟುಕೊಂಡಿಲ್ಲ. ನಿನಗೆ ಸಮಾಚಾರ ಗೊತ್ತಿರಲಿಲ್ಲವೇ ?'' ಎಂದಳು.

ವಿಮಲೆಯು ನಾಚಿಕೆಯಿಂದೊಡಗೂಡಿದ ಮುಗುಳುನಗೆಯಿಂದ, ''ಗೊತ್ತಾಗಿತ್ತು. ಆದರೂ ಕೊಂಚ ಹೊತ್ತಾಗುತ್ತೆ ಅತ್ತಿಗೆ. ಅವರು ಈಗ ತಾನೆ ತಿರುಗಾಡಿಕೊಂಡು ಬರುವುದಕ್ಕೆ ಹೋಗಿದಾರೆ. ಅವರು ಬಂದ ಹೊರತು ನಾನು ಹೊರಡುವುದಕ್ಕೆ ಸಾಧ್ಯವಿಲ್ಲ'' ಎಂದಳು.

ಇಂದುಮತಿಗೆ ಒಳಗೊಳಗೇ ಕೋಪವು ಉತ್ಪನ್ನವಾಯಿತು. ''ಯಜಮಾನರ ಅಪ್ಪಣೆಯಾಗಲಿಲ್ಲಾಂತ ಕಾಣುತ್ತೆ!'' ಎಂದು ಕೊಂಚ ವ್ಯಂಗ್ಯವಾಗಿ ಹೇಳಿದಳು.

ವಿಮಲೆಯ ಸುಂದರಮುಖವು ಸ್ನಿಗ್ಧ, ಮಧುರ, ಮಂದಹಾಸದಿಂದೊಡಗೂಡಿತು. ಅವಳು ಈ ವ್ಯಂಗ್ಯ ಮಾತನ್ನು ಸಮರ್ಪಕವಾದ ರೀತಿಯಲ್ಲಿ ಉಪಯೋಗಿಸಿಕೊಂಡಳು. "ಇಲ್ಲ. ದಾಸಿಯು ಇನ್ನೂ ಅರ್ಜಿಯನ್ನೇ ಹಾಕಿಕೊಂಡಿಲ್ಲ. ಆದರೆ ಅರ್ಜಿಹಾಕಿಕೊಂಡ ಮೇಲೆ ಮಂಜೂರಾಗದೆ ಇರುವುದಿಲ್ಲ ಎನ್ನುವಷ್ಟು ಭರವಸೆ ಮಾತ್ರ ನನಗೆ ಇದೆ."

ಇಂದುಮತಿಯ ಕೋಪವು ಇಮ್ಮಡಿಯಾಯಿತು. ''ಹಾಗಾದರೆ ಅರ್ಜಿಯನ್ನೇಕೆ ಹಾಕಲಿಲ್ಲ? ಸಮಾಚಾರವನ್ನು ನಾನು ನಿನಗೆ ಬಹಳ ಮುಂಚೆಯೇ ಹೇಳಿ ಕಳುಹಿಸಿದ್ದೆ!"

"ಆಗ ಕೇಳಲು ಧೈರ್ಯವಾಗಲಿಲ್ಲ ಅತ್ತಿಗೆ. ಆಫೀಸಿನಿಂದ ಬರುತ್ತಿರುವ ಹಾಗೆಯೇ ತಲೆನೋಯುತ್ತಾ ಇದೇಂತ ಹೇಳಿದರು. ಅದಕ್ಕೇ ಯೋಚಿಸಿದೆ — ಕೊಂಚ ನೀರುಗೀರು ಕುಡಿದು ಹಾಗೆಯೇ ಸ್ವಲ್ಪ ಅಡ್ಡಾಡಿಕೊಂಡು ಬಂದರೆ ಮನಸ್ಸು, ದೇಹಗಳಿಗೆ ಸ್ವಲ್ಪ ಹಾಯೆನಿಸಿರುತ್ತೆ. ಆಗ ಕೇಳಿದರಾಯಿತು ಎಂದು. ಇನ್ನೂ ಹೊತ್ತಿದೆಯಲ್ಲಾ. ಕೊಂಚ ಕುಳಿತುಕೋಬಾರದೆ? ಅವರೂ ಬರುತ್ತಲೇ ಇರಬಹುದು!''

"ನಿನಗೆ ನಗು ಹ್ಯಾಗೆ ಬರುತ್ತದೆಯೋ ನನಗಂತೂ ಗೊತ್ತಾಗುವುದಿಲ್ಲ ವಿಮಲ? ನನಗೇನಾದರೂ ಹೀಗಾಗಿದ್ದಿದ್ದರೆ ನಾಚಿಕೆಯಿಂದ ಪ್ರಾಣ ಬಿಡುತ್ತಿದ್ದೆ. ಅದು ಸರಿ. ಒಕ್ಕಲಗಿತ್ತಿಗೋ ಅಥವಾ ಜವಾನನಿಗೋ ಹೇಳಿಬರುವುದಕ್ಕೆ ಆಗುವುದಿಲ್ಲವೆ?"

"ಅಬ್ಬಬ್ಬ! ಆಮೇಲೆ ಅವರು ಮನೆಯಿಂದ ಅಟ್ಟಿಬಿಡುತ್ತಾರೆ—ಈ ಜನ್ಮದಲ್ಲಿ ಮತ್ತೆ ಮುಖ ಕೂಡ ನೋಡುವುದಿಲ್ಲ" ಎಂದು ವಿಮಲೆಯು ಭಯದಿಂದ ಹೇಳಿದಳು.

ಇಂದುಮತಿಯು ಕೋಪ ಆಶ್ಚರ್ಯಗಳಿಂದ ಅವಾಕ್ಕಾದಳು. ಆದರೂ ಆಮೇಲೆ, "ಅಟ್ಟಿಬಿಡುತ್ತಾರೆ! ಯಾವ ಕಾನೂನಿನ ಪ್ರಕಾರ? ಯಾವ ಅಧಿಕಾರದಿಂದ? ಹೇಳು ಕೇಳೋಣ" ಎಂದಳು.

ವಿಮಲೆಯು ತನ್ನ ಸ್ವಾಭಾವಿಕ ಗಂಭೀರತೆಯಿಂದ ಉತ್ತರ ಕೊಟ್ಟಳು. "ಇದರಲ್ಲಿ ಅಡ್ಡಿಯಾದರೂ ಏನಿದೆ? ಅವರು ಯಜಮಾನರು – ನಾನು ದಾಸಿ. ಒಂದುವೇಳೆ ಅಟ್ಟಿಬಿಟ್ಟರೆ ಅವರನ್ನು ಯಾರು ತಡೆಯುತ್ತಾರೆ? ಹೇಳು."

"ರಾಜನು ತಡೆಯುತ್ತಾನೆ. ಕಾನೂನು ತಡೆಯುತ್ತದೆ. – ಹೋಗಲಿ ಅದೆಲ್ಲ ಬೆಂಕಿಬಿದ್ದು ಹೋಗಲಿ—ಆದರೆ ನೀನಾಗಿಯೇ ನಿನ್ನನ್ನು ದಾಸಿಯೆಂದು ಒಪ್ಪಿಕೊಳ್ಳುವುದಕ್ಕೆ ನಾಚಿಕೆಯಾಗುವುದಿಲ್ಲವೇ?—ಪತಿಯಾದವನು ಮೊಘಲ್ ಚಕ್ರವರ್ತಿ—ಅವನ ಹೆಂಡತಿಯು ಮಾತ್ರ ಕೊಂಡು ತಂದ ದಾಸಿಯೇನು?—ಗುಲಾಮಳೇನು? ನಿನ್ನನ್ನು ನೀನೇ ದೀನಳೆಂದು ತಿಳಿದುಕೊಂಡು, ಅದೇ ಒಂದು ಗೌರವವೆಂದು ಭಾವಿಸಿ, ಆ ಗೌರವದ ಅನುಭವ ಪಡೆಯುತ್ತಿರುವೆಯೋ?"

ಇಂದುಮತಿಯ ಈ ಕೋಪೋದ್ರೇಕವನ್ನು ನೋಡಿ ವಿಮಲಾಗೆ ಬಹಳ ನಗು ಬಂತು. "ಅತ್ತಿಗೆ, ನಿನ್ನ ನಾದಿನಿಯಂತೂ ಒಬ್ಬ ಮೂರ್ಖ ಹೆಂಗಸು. ಆದುದರಿಂದ ಅವಳು ತಾನು ತನ್ನ

ಪತಿಯ ದಾಸಿಯೆಂದು ಹೇಳಿಕೊಳ್ಳುವುದೇ ಗೌರವವೆಂದು ತಿಳಿಯುತ್ತಾಳೆ. ಆದರೆ ನಾನು ನಿನ್ನನ್ನೇ ಕೇಳುತ್ತೇನೆ—ಇಷ್ಟೊಂದು ಮಾತನಾಡುತ್ತಿರುವೆಯಲ್ಲಾ ನೀನು ಅಣ್ಣನ ಅಪ್ಪಣೆಯಿಲ್ಲದೆ ಮನೆಯಿಂದ ಹೊರಟು ಬಂದಿರುವೆಯಾ?"

"ಅಪ್ಪಣೆ? ಏತಕ್ಕೆ? ಅವರೇ ಸ್ವತಃ ಹೋಗುವಾಗ ನಮ್ಮ ಅಪ್ಪಣೆಯನ್ನು ಅಪೇಕ್ಷಿಸುತ್ತಾರೇನು? 'ನಾನು ಹೋಗುತ್ತೇನೆ' —ಎಂದಿಷ್ಟೆನಾನವರಿಗೆ ತಿಳಿಸಿ ಬಂದಿರುವುದು" ಕೊಂಚ ಹೊತ್ತು ಸುಮ್ಮನಿದ್ದು ಅಕಸ್ಮಾತ್ ಉದ್ದೀಪ್ತಳಾಗಿ ಇಂದುಮತಿಯು ಪುನಃ ಹೇಳಿದಳು—"ನನ್ನ ಪತಿಯಂತಹ, ಗಣ್ಯ ಗುಣವಂತ ಪತಿಯು ಕೇವಲ ಕೆಲವು ಹೆಂಗಸರಿಗೆ, ಅವರ ಭಾಗ್ಯದಿಂದ ಸಿಕ್ಕುತ್ತಾರೆಂದು ನಾನು ಒಪ್ಪಿಕೊಳ್ಳುತ್ತೇನೆ. ಅವರು ನನ್ನ ಯಾವ ಇಚ್ಛೆಗೂ ಅಡ್ಡಿಬರುವುದಿಲ್ಲ. ಆದರೆ ಒಂದು ವೇಳೆ ಅವರು ಹಾಗೆ ಇಲ್ಲದಿದ್ದರೂ, ಒಂದು ಸಮಯ ವಿವೇಚನೆ ಇಲ್ಲದವರಾಗಿದ್ದಿದ್ದರೂ ಸಹ ನಾನು ನನ್ನ ಆತ್ಮಗೌರವದ ರಕ್ಷಣೆಯನ್ನು ಬೇಕಾದದ್ದಾಗಲಿ ಸಂಪೂರ್ಣವಾಗಿ ಮಾಡಿಕೊಳ್ಳಬಲ್ಲೆ ಎಂದು ಹೇಳುತ್ತೇನೆ. ನಾನು ಅವರ ಸಂಗಾತಿ, ಸಹಧರ್ಮಿಣಿ —ಕೊಂಡು ತಂದ ದಾಸಿಯಲ್ಲ ಎಂಬುದನ್ನು ಮಾತ್ರ ನಿನ್ನಂತೆ ಎಂದಿಗೂ ಮರೆಯುವುದಿಲ್ಲ. ಈ ರೀತಿ ನಮ್ಮ ದೇಶದ ಹೆಂಗಸರೆಲ್ಲಾ ತಮ್ಮ ತಲೆಗಳನ್ನು ಗಂಡಸರ ಕಾಲುಗಳ ಮೇಲೆ ಇಟ್ಟು ತಮ್ಮನ್ನು ತಾವೇ ತುಚ್ಛಮಾಡಿಕೊಂಡಿದ್ದಾರೆ. ಗೊತ್ತೆ? ಅದರಿಂದ ಈಗ ಹೆಂಗಸರು ಅವರ ಕೈಗೊಂಬೆಗಳಾಗಿದ್ದಾರೆ. ತಮ್ಮ ಆತ್ಮಗೌರವವನ್ನು ತಾವೇ ರಕ್ಷಿಸಿಕೊಳ್ಳದಿದ್ದರೆ, ತಾವಾಗಿಯೇ ಬೇರೆ ಯಾರು ಗೌರವಿಸುತ್ತಾರೆ? ಯಾರೂ ಇಲ್ಲ. ನನ್ನ ಪತಿಯು ಎಷ್ಟೋ ಒಳ್ಳೆಯವರು. ಆದರೂ ಸಹ ಅವರೇ ಯಜಮಾನರು, ಹೆಂಗಸಾದುದರಿಂದ ನಾನು ಅವರ ದಾಸಿ ಎಂದು ಯೋಚಿಸಲು ಕೂಡ ಅವರಿಗೆ ಸ್ವಲ್ಪ ಅವಕಾಶವನ್ನು

ನಾನು ಕೊಡುವುದಿಲ್ಲ. ಹೆಂಗಸರ ದೇಹದಲ್ಲಿಯೂ ದೇವರಿದ್ದಾ ನೆನ್ನುವುದನ್ನು ನಾನೂ ಮರೆಯುವುದಿಲ್ಲ—ಅವರಿಗೂ ಮರೆಯಲು ಅವಕಾಶ ಕೊಡುವುದಿಲ್ಲ.''

ಇದನ್ನು ಕೇಳಿ ವಿಮಲೆಯು ಒಂದು ದೀರ್ಘಶ್ವಾಸವನ್ನು ಎಳೆದಳು. ಆದರೆ ಅದರಲ್ಲಿ ನಾಚಿಕೆಯಾಗಲಿ ಅನುಶೋಚನೆ ಯಾಗಲಿ ಮೂಡಿರಲಿಲ್ಲ. ''ಆತ್ಮಗೌರವವನ್ನು ವಸೂಲು ಮಾಡುವುದು ಆಗುವುದೇ ಇಲ್ಲವೇ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ಅವರ ಪಾದಗಳಲ್ಲಿ ಆತ್ಮವಿಸರ್ಜನೆ ಮಾಡುವುದೊಂ ದನ್ನು ನಾನು ತಿಳಿದಿದ್ದೇನೆ. ನೋಡು, ಅವರು ಬಂದು ಬಿಟ್ಟರು—ಕೊಂಚ ಕುಳಿತುಕೋ. ಜಾಗ್ರತೆ ಅಪ್ಪಣೆ ಪಡೆದು ಬಂದುಬಿಡುತ್ತೇನೆ" ಎಂದು ಹೇಳಿ, ಕೊಂಚ ಮುಗುಳುನಗೆ ನಕ್ಕು ಜಾಗ್ರತೆ ಹೊರಟುಹೋದಳು.

ಇಂದುಮತಿಯು ಅವಳ ಮುಗುಳ ನಗೆಯನ್ನು ನೋಡಿ ಬಿಟ್ಟಳು. ಅವಳ ಶರೀರವೆಲ್ಲ ಕ್ರೋಧದಿಂದ ಕಿಡಿಕಿಡಿಯಾಯಿತು.

* * *

ಬಯೊಸ್ಕೋಪಿನಿಂದ ಗಾಡಿಯಲ್ಲಿ ಹಿಂದಿರುಗಿ ಬರುವಾಗ, ದಾರಿಯಲ್ಲಿ, ಇದ್ದಕ್ಕಿದ್ದಂತೆಯೇ ಇಂದುಮತಿಯು ಮಾತಿಗೆ ಮೊದಲುಮಾಡಿದಳು. ''ಅಪ್ಪಣೆ ಸಿಕ್ಕದಿದ್ದಿದ್ದರೆ ನಿನಗೆ ಬರು ವುದಕ್ಕೆ ಆಗುತ್ತಲೇ ಇರಲಿಲ್ಲ. ಅಲ್ಲವೇ ?"

ವಿಮಲೆಯು ಏನು ಯೋಚಿಸುತ್ತಿದ್ದಳೋ ಗೊತ್ತಿಲ್ಲ. ರಸ್ತೆಯ ಕಡೆ ನೋಡುತ್ತಾ, ಅನ್ಯಮನಸ್ಕಳಾಗಿ, ''ಇಲ್ಲ'' ಎಂದಳು.

"ನಿನ್ನನ್ನು ನಾನು ಆಗಾಗ್ಗೆ ಬಂದು ಹೀಗೆ ಎಳೆದುಕೊಂಡು ಹೋಗುವುದರಿಂದ ನಿನ್ನ ಗಂಡ ಕೋಪ ಮಾಡಿಕೊಳ್ಳುತ್ತಾರೆ ಅಂತ ನನಗೆ ಇದರಿಂದ ಅನ್ನಿಸುತ್ತೆ.''

ವಿಮಲೆಯು ಮುಖ ತಿರುಗಿಸಿ, ''ಹಾಗಾದರೆ ನಿನ್ನ ಜೊತೆಗೆ ನಾನೇಕೆ ಬರಲಾರಂಭ ಮಾಡಿದೆ? ನೀನು ಹೀಗೆ ಬಂದು

ಹೋಗುತ್ತಾ ಇರುವುದರಿಂದ ಅಣ್ಣನಿಗೆ ಒಳಗೊಳಗೇ ನನ್ನ ಮೇಲೆ ಕೋಪ ಇರಬಹುದೂಂತ ನನಗೆ ಭಯವಾಗುತ್ತೆ" ಎಂದು ಹೇಳಿದಳು.

ಇಂದುಮತಿಯು ಹೆಮ್ಮೆಯಿಂದ, "ನಿಮ್ಮಣ್ಣನವರ ಸ್ವಭಾವವು ಹಾಗಿಲ್ಲವೇ ಇಲ್ಲ. ಮೊದಲನೆಯದು, ಅವರು ತಮ್ಮ ಹಕ್ಕುಬಾಧ್ಯತೆ ಬಿಟ್ಟು ಒಂದು ಹೆಜ್ಜೆಯನ್ನೂ ಸಹ ಮುಂದಿಡುವುದಿಲ್ಲ. ಎರಡನೆಯದು, ನನ್ನ ಕೆಲಸಗಳ ವಿಚಾರದಲ್ಲಿ ಎಲ್ಲಿಯಾದರೂ ಕೋಪಿಸಿಕೊಳ್ಳುತ್ತಾರೆಯೇ? ಅವರು ಸ್ವಪ್ನದಲ್ಲಿ ಸಹ ಅಂತಹ ಒರಟುತನ ಮಾಡುವುದಿಲ್ಲಾಂತ ನನಗೆ ಚೆನ್ನಾಗಿ ಗೊತ್ತು" ಎಂದಳು.

ವಿಮಲೆಯು ಒಂದೆರಡು ನಿಮಿಷಗಳು ಸ್ಥಿರವಾಗಿ ಕುಳಿತಿದ್ದಳು. ಮತ್ತೆ ದೀರ್ಘವಾಗಿ ಉಸಿರೆಳೆದು ಮೃದುಸ್ವರದಲ್ಲಿ ಹೇಳತೊಡಗಿದಳು—"ಅತ್ತಿಗೆ, ಅಣ್ಣ ನಿನ್ನನ್ನು ಎಷ್ಟು ಪ್ರೀತಿಸುತ್ತಾನೆ. ಆದರೆ ನೀನು—"

ಇಂದುಮತಿಯ ಮುಖದ ಮೇಲೆ ಈಗ ಎಲ್ಲಿಂದಲೋ ನಗು ಬಂತು. "ಅವರ ಪ್ರೀತಿಯ ಸಂಬಂಧವಾದ ಮಾತನ್ನು ನಾನು ಒಪ್ಪಿಕೊಳ್ಳದೇ ಇರುವುದಿಲ್ಲ. ಆದರೆ ನನ್ನ ವಿಚಾರದಲ್ಲಿ ನಿನಗೆ ಹೇಗೆ ಸಂದೇಹವಾಯಿತು?"

"ನನಗೆ ಅದು ಗೊತ್ತಿಲ್ಲ ಅತ್ತಿಗೆ. ಆದರೂ ಹಾಗನ್ನಿಸುತ್ತೆ. ಹೇಗೆಂದರೆ—"

"ಅದೇಕೆ ಹಾಗಾಗುತ್ತೆ—ಹಾಗನ್ನಿಸುತ್ತೆ ಗೊತ್ತೆ? ಕಾಲುಗಳ ಮೇಲೆ ಬಿದ್ದು ಹೊರಳಾಡುವ ನಿಮ್ಮಗಳಂತೆ ಅಲ್ಲ, ನನ್ನ ಪ್ರೇಮ, ಅದಕ್ಕೆ! ನನ್ನ ಆತ್ಮಗೌರವವನ್ನು ತ್ಯಜಿಸಿ ತೋರಬೇಕಾಗುವಂತಹ ಪ್ರೇಮವು ಯಾವತ್ತಿಗೂ ತಲೆಯೆತ್ತದಂತೆ ದೇವರು ಮಾಡಲಿ. ನನ್ನ ಸ್ವಾಧೀನ, ಸ್ವಾತಂತ್ರ್ಯವನ್ನು ತ್ಯಜಿ

ಸಲು ಕಾರಣವಾಗುವಂತಹ ಪ್ರೇಮವನ್ನು ನಾನು ಮನಸಾ ತುಚ್ಛವೆಂದು ಭಾವಿಸುತ್ತೇನೆ.''

ವಿಮಲೆಯು ಒಳಗೊಳಗೆ ನಡುಗಿದಳು.

ಒಂದು ನಿಮಿಷ ಸುಮ್ಮನಿದ್ದು ಇಂದುಮತಿಯು, ''ನೀನಂತೂ ಏನೋ ಮಾತನ್ನೇ ಆಡುತ್ತಿಲ್ಲ. ಏನು ಯೋಚಿಸುತ್ತಾ ಇದ್ದೀಯೆ?'' ಎಂದು ಕೇಳಿದಳು.

''ಏನೂ ಇಲ್ಲ. ಅಣ್ಣ ನಿನ್ನನ್ನು ಇದೇ ರೀತಿ ಪ್ರೀತಿಸುತ್ತಾ ಇರಲೀಂತ ಪ್ರಾರ್ಥಿಸುತ್ತೇನೆ. ನೀನು ಬೇಕಾದಷ್ಟು ಕಾರಣ ಗಳನ್ನು ಹೇಳು ಅತ್ತಿಗೆ. ಹೆಂಗಸರಿಗೆ ಪತಿಯ ಪ್ರೇಮಕ್ಕಿಂತ ದೊಡ್ಡದು ಯಾವುದೂ ಇಲ್ಲ. ಇಡೀ ಬ್ರಹ್ಮಾಂಡವೂ ಕೂಡ ಅದಕ್ಕಿಂತ ದೊಡ್ಡದಲ್ಲ!''

ಒಂದು ಕ್ಷಣ ಸುಮ್ಮನಿದ್ದು ವಿಮಲೆಯು ಪುನಃ ಹೇಳತೊಡಗಿ ದಳು—''ನಿನ್ನ ನಾರೀಮರ್ಯಾದೆ ಏನು? ಆತ್ಮಗೌರವವೇನು? ಸ್ವಾಧೀನ, ಸ್ವಾತಂತ್ರ್ಯವೇನೆಂಬುದು ನನಗೇನು ಗೊತ್ತು! ನಾನಂತೂ ನನ್ನ ಸರ್ವಸ್ವವನ್ನೂ ಅವರ ಪದತಲದಲ್ಲಿ ಸಮ ರ್ಪಿಸಿ ಗೆದ್ದುಬಿಟ್ಟಿದ್ದೇನೆ. ನಿಜ ಹೇಳುತ್ತೇನೆ ಅತ್ತಿಗೆ! ನನ್ನ ಇಚ್ಛೆ ಮತ್ತು ಶರೀರಸ್ಥಿತಿ ನನ್ನದೇ ಹೌದೋ ಅಲ್ಲವೋ ಎನ್ನು ವಂತೆ ಆಗಿಹೋಗಿದೆ. ಅವರ ಇಚ್ಛೆಯೇ—''

''ರಾಮ, ರಾಮ, ಸುಮ್ಮನಿರು—ಸುಮ್ಮನಿರು''

ವಿಮಲೆಯು ಗಾಬರಿಯಿಂದ ಸುಮ್ಮನಾದಳು. ಇಂದು ಮತಿಯು ಅವಹೇಳನ ಮಾಡಲು ಮೊದಲುಮಾಡಿದಳು—''ನಮ್ಮ ದೇಶದ ಸ್ತ್ರೀಯರು ಖಂಡಿತ ಮಣ್ಣಿನ ಗೊಂಬೆಗಳಾಗಿ ದ್ದಾರೆ. ಜೀವವಿಲ್ಲ, ಆತ್ಮವಿಲ್ಲ—ಯಾವುದೂ ಇಲ್ಲ! ಇಷ್ಟು ಮಾಡಿ ನೀನೇನನ್ನು ಪಡೆದಿದ್ದೀಯೆ ಎಂದು ನಿನ್ನನ್ನು ಕೇಳು ತ್ತೇನೆ. ನನಗಿಂತ ನೀನು ಇನ್ನೂ ಹೆಚ್ಚು ಪ್ರೀತಿಯನ್ನು ಕೂಡಿ ಹಾಕಿದ್ದೀಯೇನು? ಪ್ರೇಮವು ಅಳೆಯುವ ಯಂತ್ರವಲ್ಲ. ಇಲ್ಲ

ದಿದ್ದರೆ ಅಳೆದು ತೋರಿಸುತ್ತಿದ್ದೆ. ಹೋಗಲಿ ಆ ಮಾತುಗಳನ್ನು ಬಿಟ್ಟುಬಿಡು. ನನ್ನ ಅಪೇಕ್ಷೆಯು ನನ್ನ ಪ್ರೀತಿಯನ್ನೇನಾದರೂ ಅರ್ಥಕ್ಕಿಳಿಸಿದೆಯೇನು?–ಇಲ್ಲ–ಏತಕ್ಕೆ ಗೊತ್ತೆ? ನಿಮ್ಮಗಳ ಹಾಗೆ ನನ್ನನ್ನು ನಾನು ಸಣ್ಣವಳನ್ನಾಗಿ ಮಾಡಿಕೊಳ್ಳಲಿಲ್ಲ, ಅದಕ್ಕೆ! ನಿಮ್ಮಗಳ ಹಾಗೆ ಈ ಕಂಗಾಲ ವೃತ್ತಿಗಳನ್ನು ನನ್ನ ತಲೆಯ ಮೇಲೇರಿಸಿಕೊಳ್ಳಲಿಲ್ಲ ; ಅದಕ್ಕೆ! ಅವರೇಕೆ ಇಷ್ಟೊಂದು ಶಾಂತ ರಾಗಿದ್ದಾರೆ; ಏತಕ್ಕೆ ಇಷ್ಟೊಂದು ನಿರೀಹರಾಗಿದ್ದಾರೆ ಎಂದು ನನಗೆ ಬಹಳ ದುಃಖವಾಗುತ್ತದೆ. ಅವರು ಯಾವಾಗಲೂ ಏನೊಂದು ಮಾತನ್ನೂ ಆಡುವುದಿಲ್ಲ – ಇಲ್ಲದಿದ್ದರೆ, ಅವರು ಯಾರನ್ನು ಲಕ್ಷ್ಯಕ್ಕೆ ತಂದುಕೊಳ್ಳುವುದಿಲ್ಲವೋ ಅವಳೂ ಒಬ್ಬ ಮನುಷ್ಯಳು ಅವಳಿಗೂ ಅಲಕ್ಷ್ಯಮಾಡುವುದು ಬರುವುದು ಎಂದು ತೋರಿಸಿ ಬಿಡುತ್ತಿದ್ದೆ— ಇದೇನು ? ಮುಖ ತಿರುಗಿಸಿಕೊಂಡು ನಗುತ್ತಿರುವೆಯಾ!"

ವಿಮಲೆಯು ಬಲವಂತದಿಂದ ನಗು ನುಂಗಿಕೊಂಡು, "ಎಲ್ಲಿ, ಇಲ್ಲವಲ್ಲ" ಎಂದಳು.

"ಏಕಿಲ್ಲ. ಇನ್ನೂ ನಿನ್ನ ತುಟಿಮೇಲೆ ನಗು ಕಾಣಿಸುತ್ತಾ ಇದೆ."

ವಿಮಲಾ ನಕ್ಕುಬಿಟ್ಟಳು. "ಕಾಣಿಸುತ್ತಾ ಇದೆ—ನಿನ್ನ ಮಾತು ಗಳನ್ನು ಕೇಳಿದ್ದರಿಂದ. ಅಲ್ಲದೆ, ಅತ್ತಿಗೆ, ಬಹಳ ಪ್ರೇಮ ಸಿಕ್ಕಿದೆಯಲ್ಲವೇ ನಿನಗೆ? ಅದಕ್ಕೆ ಇಷ್ಟೊಂದು ಮಾತುಗಳು ಹೊರಬೀಳುತ್ತಾ ಇವೆ."

ಇಂದುಮತಿಯು ಕೋಪೋದ್ದೀಪ್ತ ಮುಖದಿಂದ, "ಸಿಕ್ಕ ದಿದ್ದಿದ್ದರೆ?" ಎಂದು ಕೇಳಿದಳು.

"ಹೊರಬೀಳುತ್ತಲೇ ಇರಲಿಲ್ಲ."

"ನಿನ್ನ ತಿಳುವಳಿಕೆ ತಪ್ಪು– ಖಂಡಿತ ತಪ್ಪು! ಎಲ್ಲರೂ ನಿನ್ನಂತೆ ಇಲ್ಲ— ಎಲ್ಲರೂ ಯಾವಾಗಲೂ ಭಿಕ್ಷೆ ಬೇಡುತ್ತ ಅಲೆ

ಯುವುದಿಲ್ಲ. ಆತ್ಮಗೌರವವೇನೆಂಬುದನ್ನು ತಿಳಿದುಕೊಂಡಿರುವ ಹೆಂಗಸರೂ ಈ ಪ್ರಪಂಚದಲ್ಲಿ ಇದ್ದಾರೆ.''

ಈಗ ಮಾತ್ರ ವಿಮಲೆಯ ಮುಖದ ಮೇಲಿನ ನಗುವು ನಿಧಾನವಾಗಿ ವಿಲೀನವಾಯಿತು. ಅದು ''ನನಗೆ ಗೊತ್ತು'' ಎಂದಳು.

''ಗೊತ್ತಿದ್ದಿದ್ದರೆ ಹೀಗೆ ಹೇಳುತ್ತಿರಲಿಲ್ಲ. ಏನಾದರೂ ಆಗಲಿ ಇನ್ನು ಮೇಲಾದರೂ ತಿಳಿದುಕೋ, ಪ್ರಪಂಚದಲ್ಲಿ ಭಿಕ್ಷೆಯನ್ನು ಬೇಡದೆ ತಮ್ಮ ಜೋರಿನಿಂದ ವಸೂಲು ಮಾಡುವಂತಹ ಹೆಂಗಸರೂ ಇದ್ದಾರೆಂದು!''

ವಿಮಲೆಯು ದುಃಖದಿಂದ ಕೂಡಿದ ಸ್ವರದಲ್ಲಿ, ''ಸರಿ!— ನೋಡು ಮನೆ ಬಂದುಬಿಟ್ಟಿತು. ಇಲ್ಲಿ ಇಳಿಯುವೆಯೋ ಇಲ್ಲವೋ?'' ಎಂದಳು.

''ಇಲ್ಲ—ನಾನೂ ಈಗಲೇ ಮನೆಗೆ ಹೋಗುತ್ತೇನೆ—ಗಾಡಿ ವಾಲಾ! ಆ ರಸ್ತೆಯಲ್ಲಿ—ಗಾಡಿ ಹೊಡಿ!''

''ಅಣ್ಣನಿಗೆ ನನ್ನ ನಮಸ್ಕಾರಗಳನ್ನು ಹೇಳಿಬಿಡು, ಅತ್ತಿಗೆ''

''ಹೇಳಿಬಿಡುತ್ತೇನೆ-ಹೂಂ! ಹೂಂ ಹೊಡೆಯಪ್ಪ-ಗಾಡೀನ.''

* * *

## ೨

''ಇನ್ನು ನಡೆಯುವ ಹಾಗಿಲ್ಲ – ಮನೆಯ ಖರ್ಚಿಗೆ ಇನ್ನು ಕೊಂಚ ರೂಪಾಯಿಗಳನ್ನು ಕೊಡಬೇಕಾಗುತ್ತೆ.'' ತನ್ನ ಹೆಂಡತಿಯ ಈ ಪ್ರಾರ್ಥನೆಯಿಂದ ನರೇಂದ್ರನಿಗೆ ಆಶ್ಚರ್ಯವಾಯಿತು. ಅವನು, ''ಇಷ್ಟರಲ್ಲಾಗಲೆ ಇನ್ನೂರು ರೂಪಾಯಿಗಳು ಮುಗಿದುಹೋದವೆ?'' ಎಂದನು.

''ಮುಗಿಯದೆ ನಾನೇನು ಸುಳ್ಳು ಹೇಳುತ್ತಿದ್ದೀನೇನು? ಅಥವಾ ಮುಚ್ಚಿಟ್ಟಿರುವೆನೋ?''

ನರೇಂದ್ರನ ಮುಖ, ಕಣ್ಣುಗಳನ್ನು, ಭಯದ ನೆರಳು ಆವರಿಸಿತು. "ಈಗ ದುಡ್ಡೆಲ್ಲಿದೆ? ಹೇಗೆ ತಾನೆ ಹೊಂದಿಸಲಾದೀತು?"

ಅವನ ಮುಖಭಾವವನ್ನು ನೋಡಿ ಇಂದುಮತಿಯು ತಪ್ಪು ಅರ್ಥಮಾಡಿಕೊಂಡಳು. "ನಿಮಗೆ ನಂಬಿಕೆ ಇಲ್ಲದಿದ್ದರೆ ಒಂದು ಲೆಕ್ಕದ ಪುಸ್ತಕ ತಂದುಕೊಡಿ. ಅದರಲ್ಲಿ ಇವತ್ತಿನಿಂದ ಲೆಕ್ಕ ಬರೆದಿಡುತ್ತೇನೆ. ಅಥವಾ ನೀವೇ ಏಕೆ ಈ ಕೆಲಸ ಮಾಡಬಾರದು – ಖರ್ಚಿಗೆ ಬೇಕಾಗುವ ದುಡ್ಡನ್ನು ನಿಮ್ಮ ಹತ್ತಿರವೇ ಇಟ್ಟುಕೊಳ್ಳಿ—ಇದರಿಂದ ನಿಮಗೆ ಭಯವೂ ಇಲ್ಲ. ನನಗೆ ನಿಮ್ಮ ಈ ಅವಿಶ್ವಾಸದಿಂದುಂಟಾಗುವ ಲಜ್ಜೆಗೂ ಕಾರಣ ತಪ್ಪಿದಂತಾಗುತ್ತದೆ" ಎಂದು ಇಷ್ಟನ್ನು ಹೇಳಿ, ಅವನ ಮುಖದ ಮೇಲಿದ್ದ ಗಾಢಭಾವವು ವೇದನೆಯಿಂದ ಇನ್ನೂ ಗಾಢತರವಾಗಿರುವುದನ್ನು ಅವಳು ತೀವ್ರದೃಷ್ಟಿಯಿಂದ ನೋಡಿದಳು.

ನರೇಂದ್ರನು ಮೆಲ್ಲಗೆ ಹೇಳಿದ, — "ಅವಿಶ್ವಾಸವಲ್ಲ—ಆದರೆ—"

"ಆದರೇನು? ವಿಶ್ವಾಸವೂ ಇಲ್ಲ. ಇದೇ ತಾನೆ? ಸರಿ ಹೋಗುತ್ತೇನೆ. ಎಷ್ಟು ಜ್ಞಾಪಕಕ್ಕೆ ಬರುತ್ತದೆಯೋ ಅಷ್ಟು ಲೆಕ್ಕವನ್ನೂ ಬರೆದು ತರುತ್ತೇನೆ. ಅಯ್ಯೋ! ಏನು ಹಾಳಾದ ಸಂಸಾರ ಸುಖವಪ್ಪ ನನ್ನದು!" ಎನ್ನುತ್ತಾ ಕೋಪದಿಂದ ಕೊಠಡಿಯಿಂದ ಹೊರಕ್ಕೆ ಹೋದಳು. ಮತ್ತೆ ಮರುಕ್ಷಣದಲ್ಲಿಯೇ ಹಿಂತಿರುಗಿ ಬಂದು, "ಆದರೆ ಏತಕ್ಕೆ—ನಾನೇತಕ್ಕೆ ಲೆಕ್ಕ ಬರೆಯುತ್ತಾ ಅಲೆಯಲಿ? ನಾನೇನು ಸುಳ್ಳು ಹೇಳುತ್ತೇನೇನು? ನನ್ನ ಸೋದರಮಾವನ ಮಗಳ ಮದುವೆಗೆ ಬಟ್ಟೆ ಬರೇಂತ ಐವತ್ತು ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚಾದವು; ಕಮಲೂಗೆ ಎರಡು ಫ್ರಾಕ್‌ಗಳಿಗೆ ಸುಮಾರು ಹತ್ತುಹನ್ನೆರಡು ರೂಪಾಯಿ; ಅಲ್ಲದೆ ಆ ಹೊತ್ತು ಬಯಾಸ್ಕೋಪಿಗೆ ಹೋಗಿ ಬಂದದ್ದಕ್ಕೆ ಹತ್ತುಹನ್ನೆರಡು ರೂಪಾಯಿಗಳು ಖರ್ಚಾದವು–

ಸರಿ, ಲೆಕ್ಕಹಾಕಿ ನೋಡಿ ಎಷ್ಟು ಬಾಕಿ ಉಳಿಯುತ್ತದೆಯೋ? ಉಳಿದದ್ದರಲ್ಲಿ ಈ ಹತ್ತು ಹದಿನೈದು ದಿವಸಗಳ ಮನೆ ಖರ್ಚು. ಅದೇನು ಅಷ್ಟು ಹೆಚ್ಚಾಗಿ ಹೋಯಿತೆ ನೀವು ಹೀಗೆ ಕಣ್ಣು ಕೆಂಪಗೆ ಮಾಡುವುದಕ್ಕೆ. ನಮ್ಮಣ್ಣನ ಮನೆಗೆ ತಿಂಗಳಿಗೆ ಎಂಟು ನೂರು ರೂಪಾಯಿಯಾದರೂ ಸಾಲದು. ನಿಜ ಹೇಳುತ್ತೇನೆ ನೋಡಿ, ಹೀಗೆ ಮಾಡುವುದರಿಂದ ನಾನೀ ಮನೆಯಲ್ಲಿ ಇರ ಲಾರೆ—ಇದಕ್ಕಿಂತ ಬಾಯಿಬಿಟ್ಟು ಹೇಳಿಬಿಡಿ. ಹೇಗೂ ನಮ್ಮಣ್ಣನಿಗೆ ಮೇದಿನೀಪುರಕ್ಕೆ ವರ್ಗವಾಗಿದೆ. ನಾನೂ ನನ್ನ ಮಗಳನ್ನು ಕರೆದುಕೊಂಡು ಅಲ್ಲಿಗೇ ಹೋಗಿಬಿಡುತ್ತೇನೆ. ಆಗ ನನ್ನ ಮನಸ್ಸಿಗೂ ಶಾಂತಿಯುಂಟಾದೀತು; ನಿಮ್ಮ ಪ್ರಾಣವೂ ಉಳಿದೀತು” ಎಂದು ಹೇಳಿದಳು.

ನರೇಂದ್ರನು ಬಹಳ ಹೊತ್ತು ತಲೆತಗ್ಗಿಸಿ ಸುಮ್ಮನಿದ್ದು ಆಮೇಲೆ ಮುಖವೆತ್ತಿ, “ಈಗಲೇ ಸಾಧ್ಯವಿಲ್ಲ. ನೋಡೋಣ ಸಾಯಂಕಾಲದ ಹೊತ್ತಿಗೆ ಏನಾದರೂ ಏರ್ಪಾಡು ಮಾಡಲು ಸಾಧ್ಯವೇನೋ'' ಎಂದ.

''ಅಂದರೆ? ಏರ್ಪಾಡುಮಾಡಲು ಸಾಧ್ಯವಾಗದಿದ್ದರೆ ಉಪ ವಾಸ ಇರಬೇಕೇನು? ಇಲ್ಲಿ ಕೇಳಿ. ನಾನು ನಾಳೆಯೇ ಮೇದಿನೀಪುರಕ್ಕೆ ಹೊರಟು ಹೋಗುತ್ತೇನೆ. ನೀವೂ ಒಂದು ಕೆಲಸಮಾಡಿ. ಈ ದಳ್ಳಾಳಿ ಕೆಲಸ ಬಿಟ್ಟುಬಿಟ್ಟು ನಮ್ಮ ಅಣ್ಣನ ಹತ್ತಿರ ಹೇಳಿ ಯಾವುದಾದರೂ ಒಂದು ಕೆಲಸ ಹುಡುಕಿಕೊಳ್ಳಿ. ಆಮೇಲೆ ಎಂದಾದರೂ ಚೆನ್ನಾಗಿರಬಹುದು—ಆದರೆ ನಿಮ್ಮ ಕೈಯಲ್ಲಿ ಹರಿಯದೆ ಇದ್ದ ಕೆಲಸಕ್ಕೆ ಕೈಹಾಕಿ ನೀವೂ ಹಾಳಾಗ ಬೇಡಿ. ನನ್ನನ್ನೂ ಹಾಳುಮಾಡಬೇಡಿ.''

ನರೇಂದ್ರನು ಏನೊಂದು ಉತ್ತರವನ್ನೂ ಕೊಡಲಿಲ್ಲ. ಇಂದು ಮತಿಯು ಇನ್ನೂ ಏನನ್ನೋ ಹೇಳಬೇಕೆಂದಿದ್ದಳು. ಆದರೆ ಅಷ್ಟರಲ್ಲೀ ಜವಾನನು ಬಂದು ಶಂಭುಬಾಬುಗಳು ಬಂದಿದ್ದಾ

ರೆಂದು ತಿಳಿಸಿದ. ಮರುಕ್ಷಣವೇ ಬಾಗಿಲಿನ ಹೊರಗೆ ಚಡಾವಿನ ಶಬ್ದ ಕೇಳಿಸಿತು. ಇಂದುಮತಿಯು ಪಕ್ಕದ ಬಾಗಿಲಿಂದ ಪರದೆಯ ಮರೆಹೊಕ್ಕು ನಿಂತಳು.

ಶಂಭುಬಾಬುಗಳು ದೊಡ್ಡಮನುಷ್ಯರು. ನರೇಂದ್ರನ ತಂದೆಯವರು ಬೇಕಾದಷ್ಟು ಸಾಲವನ್ನು ಬಿಟ್ಟು ಸ್ವರ್ಗಸ್ಥರಾಗಿದ್ದರು. ಮಗನ ಹತ್ತಿರ ಹಣ ವಸೂಲು ಮಾಡುವುದಕ್ಕಾಗಿ ಆಗಾಗ ಶಂಭುಬಾಬುಗಳ ಶುಭಾಗಮನವಾಗುತ್ತಿರುತ್ತದೆ. ಇಂದೂ ಅದೇ ಉದ್ದಿಶ್ಯದಿಂದಲೇ ದಯಮಾಡಿಸಿದ್ದಾರೆ. ಒಳ್ಳೆ ಮೃದು ಭಾಷಿಗಳು. ಆಸನವನ್ನು ಸ್ವೀಕರಿಸಿ ಸಹಜವಾಗಿ ಕೆಲವು ಮಾತುಗಳನ್ನು ಮೆಲ್ಲಗೆ ಹೇಳಿದರು. ಆ ಮಾತುಗಳನ್ನು ಇನ್ನೊಂದು ಸಲ ಕೇಳುವುದಕ್ಕೆ ಮುಂಚೆಯೇ, ಮೊದಲೇ ನಾಚಿಕೆ ಇಲ್ಲದವರಲ್ಲಿ ಅಗ್ರೇಸರನಾದವನೂ ಕೂಡ ತಲೆಮಾರಿಕೊಳ್ಳುವುದಕ್ಕೆ ಹಿಂದು ಮುಂದು ಯೋಚಿಸಲಾರ. ಶಂಭುಬಾಬುಗಳು ಹೊರಟು ಹೋದಮೇಲೆ ಇಂದುಮತಿಯು ಪುನಃ ನರೇಂದ್ರನ ಮುಂದೆ ಬಂದು ನಿಂತು, "ಇವರಾರು?" ಎಂದು ಪ್ರಶ್ನಿಸಿದಳು.

"ಶಂಭುಬಾಬುಗಳು"

"ಆಮೇಲೆ"

"ಅವರಿಗೆ ಕೊಂಚ ಬಾಕಿ ಕೊಡಬೇಕು. ತಗಾದೆ ಮಾಡುವುದಕ್ಕೆ ಬಂದಿದ್ದರು."

"ಅದು ನನಗೆ ಗೊತ್ತಾಯಿತು. ಆದರೆ ಏತಕ್ಕೆ ಸಾಲ ತೆಗೆದುಕೊಂಡಿದ್ದಿರಿ?"

ಈ ಪ್ರಶ್ನೆಗೆ ನರೇಂದ್ರನು ಯೋಚಿಸಿ ಉತ್ತರಕೊಟ್ಟ. "ನಮ್ಮ ತಂದೆಯವರು ಅಕಸ್ಮಾತ್ ಮರಣಹೊಂದಿದರು. ಅದಕ್ಕೆ—"

ಇಂದುಮತಿಯು, "ನಿಮ್ಮ ತಂದೆಯವರು ಊರು ತುಂಬ ಬಾಕಿ ಬಿಟ್ಟು ಹೋಗಿದ್ದಾರೆಯೆ? ಅದನ್ನು ತೀರಿಸುವವರಾರು? ನೀವೇ? ಹೇಗೆ ತೀರಿಸುತ್ತೀರಿ? ಹೇಳಿ ನೋಡೋಣ?" ಎಂದು ಅತ್ಯಂತ ಗಡುಸಾಗಿ ಒಮ್ಮೆಲೇ ಹಲವು ಪ್ರಶ್ನೆಗಳನ್ನು ಕೇಳಿದಳು.

ಆದರೆ ಈ ಎಲ್ಲ ಪ್ರಶ್ನೆಗಳಿಗೂ ಒಂದೇ ಉಸಿರಿನಲ್ಲಿ ಉತ್ತರ ವನ್ನೀಯುವುದು ಸಾಧ್ಯವಿರಲಿಲ್ಲ! ಇಂದುಮತಿಯೂ ಸಹ ಉತ್ತರಕ್ಕಾಗಿ ಕಾಯಲಿಲ್ಲ—ಉತ್ತರ ಕ್ಷಣದಲ್ಲಿಯೇ, "ನಿಮ್ಮ ತಂದೆಯವರೇನೋ ಅಕಸ್ಮಾತ್ ಮರಣಹೊಂದಿದರು ನಿಜ. ಆದರೆ ನೀವು ಮದುವೆಯನ್ನು ಅಕಸ್ಮಾತ್ತಾಗೇನೂಮಾಡಿಕೊಳ್ಳ ಲಿಲ್ಲವಲ್ಲ. ಈ ಎಲ್ಲ ಸಮಾಚಾರಗಳನ್ನೂ ನಮ್ಮ ತಂದೆಯವ ರಿಗೆ ತಿಳಿಸಬೇಕಾದುದು ಉಚಿತವಾಗಿತ್ತು. ಅಲ್ಲದೆ ನನ್ನಿಂದ ಈ ವಿಚಾರಗಳನ್ನು ಮುಚ್ಚಿಡುವ ಕಾರಣವೂ ಇರಲಿಲ್ಲ. ಜನ ಗಳ ಬಾಯಿಂದ ನೀವು ದೊಡ್ಡ ಧರ್ಮಭೀರುವೆಂದು ಕೇಳಿ ದ್ದೇನೆ—ಇವೆಲ್ಲವೂ ನಿಮ್ಮ ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿಲ್ಲ ವೇನು?" ಎಂದು ಯುದ್ಧ ಘರ್ಷಣೆಗೆ ಸಮನಾದ ಮಾತುಗಳನ್ನು ಹೊರಹೊಮ್ಮಿಸಿ ಪತಿಯ ಮುಖದ ಕಡೆಗೆ ನೋಡತೊಡಗಿದಳು.

ಆದರೆ ಯಾವಾತನಮೇಲೆ ಇಷ್ಟು ತೀಕ್ಷ್ಣಬಾಣಗಳನ್ನು, ಇಷ್ಟೊಂದು ನಿಷ್ಠುರತೆಯಿಂದ ಮಳೆಗರೆಯಲಾಗಿದೆಯೋ ಆತ ನನ್ನು, ಅಯ್ಯೋ! ಭಗವಂತನು ಎಷ್ಟು ನಿರುಪಾಯ ಹಾಗು ನಿರಸ್ತ್ರನನ್ನಾಗಿಮಾಡಿ ಈ ಪ್ರಪಂಚದಲ್ಲಿ ತಳ್ಳಿದ್ದಾನೆ! ಯಾವ ಕಾರಣದಿಂದಲೂ ಯಾರಿಗೂ ಬದಲು ಕೇಡುಮಾಡಲು ಸಹ ಶಕ್ತಿ ಅವನಲ್ಲಿಲ್ಲ! ಶಕ್ತಿಯೆಂಬುದೇನಾದರೂ ಇದ್ದರೆ ಅದು ಅವನಲ್ಲಿರುವ ಸಹನೆಯೊಂದು ಮಾತ್ರ. ಆಘಾತದ ಪೂರ್ಣ ವೇದನೆಯು ಮನಸ್ಸಿನೊಳಗೇ ಪೆಟ್ಟುತಿಂದು ಅತ್ಯಲ್ಪ ಸಮಯ ದಲ್ಲಿಯೇ ಸಾಮಾನ್ಯವಾಗಿ ಸ್ತಬ್ಧವಾಗಿ ಬಿಡುತ್ತಿತ್ತು. ಆದರೆ

ಇಂದು ಅವನಿಗೆ ಆ ಅಲ್ಪ ಸಮಯ ಕೂಡ ದೊರೆಯಲಿಲ್ಲ. ಶಂಭುಬಾಬುಗಳ ಅತ್ಯುಗ್ರವ್ರಾತುಗಳ ಕಿಡಿಯು ಕೊಂಚ ಕೂಡ ಆರಿರಲಿಲ್ಲ. ಮತ್ತು ಉತ್ತರ ಕ್ಷಣದಲ್ಲಿಯೇ ಇಂದುಮತಿಯು ಅವನಲ್ಲಿ ಇಷ್ಟು ಭೀಷಣವಾದ ಮತ್ತು ತೀವ್ರವಾದ ಬೆಂಕಿಯನ್ನು ಹೊತ್ತಿಸಿದಳು. ಇದರಿಂದುತ್ಪನ್ನವಾದ ಸಹಿಸಲಸಾಧ್ಯವಾದ ಉರಿಯಪರಿಣಾಮವಾಗಿ ಇಂದು ಅವನೂ ಕೂಡ ಪ್ರತ್ಯುತ್ತರ ವಾಗಿ ಒಂದು ಕಠೋರ ನುಡಿಯನ್ನು ಆಡಲು ಸಿದ್ಧನಾದ. ಆದರೆ ಮನಸ್ಸಿನಲ್ಲಿ ಮೂಡಿದ್ದನ್ನು ಬಾಯಿಂದ ಹೇಳಲು ಅವ ನಿಗೆ ಸಾಧ್ಯವಾಗಲಿಲ್ಲ. ಇಂದುಮತಿಯ ವರ್ತನೆಯು ಅಕ್ಷಮ್ಯ, ಎಂಬ ನಿಷ್ಫಲ ಆಡಂಬರವು ಅವನಲ್ಲಿ ಮೂಡಿತು, ಅಷ್ಟೆ! ಆದರೆ ಅದು ತಲೆಯೆತ್ತುತ್ತಲೆ ಫಠಾರೆಂದು ಮುರಿದು ಬಿತ್ತು. ಅವನ ಕ್ಷೀಣವಾಣಿಯಿಂದ, "ತಂದೆಯವರ ವಿಷಯವಾಗಿ ನೀನು ಹೀಗೆ ಹೇಳುವುದು ಉಚಿತವೇ" ಎಂದಿಷ್ಟು ಮಾತ್ರ ಹೊರಬಿತ್ತು.

"ಅಲ್ಲ, ಉಚಿತವಲ್ಲ. ಆದರೆ ನಾನು ನಿಮ್ಮ ಹತ್ತಿರ ನನ್ನ ಉಚಿತ ಅನುಚಿತ ಕಾರ್ಯಗಳ ಇತ್ಯರ್ಥಕ್ಕಾಗಿ ಹೇಳಲಿಲ್ಲ. ನಿಮ್ಮ ಮನೆಯ ಎಲ್ಲಾ ವಿಷಯಗಳನ್ನೂ ನಮ್ಮ ತಂದೆಯವ ರೆದುರಿಗೆ ಬಾಯಿಬಿಟ್ಟು ಹೇಳಲಿಲ್ಲವೇಕೆ?"

"ನಾನೇನನ್ನೂ ಮುಚ್ಚಿಟ್ಟಿಲ್ಲ ಇಂದೂ. ಅದೂ ಅಲ್ಲದೆ ಮಾವನವರು ತಂದೆಯವರ ಬಾಲ್ಯಬಂಧುಗಳು. ಸ್ವತಃ ಅವ ರಿಗೇ ಎಲ್ಲ ವಿಚಾರಗಳೂ ಗೊತ್ತು."

"ಹಾಗಾದರೆ ಎಲ್ಲವನ್ನೂ ಮರೆತುಬಿಟ್ಟೇ ನಮ್ಮ ತಂದೆಯ ವರು ನನ್ನನ್ನು ಹಳ್ಳಕ್ಕೆ ತಳ್ಳಿದರೆಂದು ಹೇಳುತ್ತೀರೇನು?"

ಅಸಹ್ಯವೇದನೆ, ವಿಸ್ಮಯಗಳಿಂದ ಸ್ತಂಭಿತನಾಗಿ ನರೇಂದ್ರನು ಸುಮ್ಮನೆ ನೋಡುತ್ತಿದ್ದು, ಕಡೆಗೆ ತಲೆ ತಗ್ಗಿಸಿದನು. ಹೆಂಡ ತಿಯ ಈ ಕ್ರೋಧವು ವಾಸ್ತವವಾಗಿಯೂ ನಿಜವೇ ಅಥವಾ

ಕೇವಲ ಕಲಹದ ಫಲವೇ ಎಂಬುದಾವುದನ್ನೂ ಅವನು ಕೂಡಲೇ ನಿಶ್ಚಯಿಸಲಾರದೆ ಹೋದ.

ಇಲ್ಲಿ ಕೊಂಚ ಹಳೆಯ ವಿಚಾರಗಳನ್ನು ತಿಳಿಸಬೇಕಾದ್ದು ಅವಶ್ಯಕವಾಗಿದೆ. ಹಿಂದೆ ಯಾವಾಗಲೋ ಒಮ್ಮೆ ಬಹಳ ದಿವಸ ಗಳವರೆಗೆ ಎರಡು ಮನೆಯವರೂ ನೆರೆಹೊರಯವರಾಗಿಯೇ ವಾಸವಾಗಿದ್ದರು. ಮತ್ತು ಆಗಲೇ ಇವರಿಬ್ಬರ ವಿವಾಹದ ವಿಷಯವು ಹತ್ತಿರ ಹತ್ತಿರ ನಿಶ್ಚಯವಾದಂತೆಯೇ ಆಗಿತ್ತು. ಆದರೆ ಇದ್ದಕ್ಕಿದ್ದ ಹಾಗೆಯೇ ಇಂದುಮತಿಯ ತಂದೆಯವರು ಮನಸ್ಸನ್ನು ಬದಲಾಯಿಸಿ ಇನ್ನೂ ಹೆಚ್ಚು ವಯಸ್ಸಾಗುವ ವರೆಗೂ ಮದುವೆಮಾಡದೆ, ಅವಳನ್ನು ಸುಶಿಕ್ಷಿತಳನ್ನಾಗಿ ಮಾಡ ಬೇಕೆಂದು ನಿಶ್ಚಯಿಸಿದರು. ಇದರಿಂದ ಹೆಚ್ಚುಕಡಿಮೆ ನಿಶ್ಚ ಯವಾಗಿದ್ದ ವಿವಾಹದ ಸಂಬಂಧವು ಹರಿದುಹೋಯಿತು. ಕೆಲವು ವರುಷಗಳು ಕಳೆದ ಮೇಲೆ, ಅಂದರೆ ಇಂದುಮತಿಗೆ ಹದಿನೆಂಟು ವರುಷವಾಗಿದ್ದಾಗ ಪುನಃ ವಿವಾಹದ ಮಾತುಕತೆ ಗಳು ನಡೆದವು. ಆಗ ಇಂದುಮತಿಯ ತಂದೆಯು ಕಲ್ಕತ್ತೆಗೆ ಬಂದು ನರೇಂದ್ರನ ತಂದೆಯವರು ಸ್ವರ್ಗಸ್ಥರಾದರೆಂದು ಕೇಳಿ ದರು. ಆ ಸಮಯದಲ್ಲಿ ಇಂದುಮತಿಯ ತಾಯಿತಂದೆಗಳು ನರೇಂದ್ರನ ಆರ್ಥಿಕ ಸ್ಥಿತಿಯ ವಿಚಾರವಾಗಿ ಬಹಳವಾಗಿ ಪರ್ಯಾಲೋಚಿಸಿದರು. ಎಲ್ಲಿಯವರೆಗೆ? ಅವರುಗಳ ಮನಸ್ಸು ಈ ವಿವಾಹಕ್ಕೆ ಇಷ್ಟಪಡದವರೆಗೆ! ಆದರೆ ವಯಸ್ಕಳಾದ, ಹಾಗು ಸುಶಿಕ್ಷಿತಳಾದ ಮಗಳ ಪ್ರಬಲ ಅನುರಾಗದ ಉಪೇಕ್ಷೆ ಮಾಡಲು ಸಾಧ್ಯವಿಲ್ಲದುದೇ ಕಾರಣವಾಗಿ ಕಡೆಯಲ್ಲಿ ಅವರು ಸಮ್ಮತಿಸಲೇ ಬೇಕಾಯಿತು.

ಇಂದುಮತಿಯು ಇದನ್ನೆಲ್ಲ ಇಷ್ಟು ಜಾಗ್ರತೆ ವಾಸ್ತವ ವಾಗಿಯೂ ಮರೆತಿರುವಳೆ? ಅಥವಾ ಸುಳ್ಳುಮೋಹದಿಂದ ಅಂಧ ಳಾಗಿ ತನ್ನನ್ನು ತಾನ ಹಾಳುಮಾಡಿಕೊಂಡದ್ದಲ್ಲದೆ, ಅದರ

ಆಶ್ಚರ್ಯಕರವು ಅಲ್ಲವೆ? ಆಗ ಈ ಒಂದು ಹಗಲು ರಾತ್ರಿ ಬೇರುಸತ್ತಿದೆಯೋ? ನರೇಂದ್ರನು ಈ ಮಾತುಗಳ ವಿಷಯದಲ್ಲಿ ಯಾವ ನಿರ್ಣಯಕ್ಕೂ ಬರಲು ಸಾಧ್ಯವಾಗದೆ ದಿಗ್ಭ್ರಾಂತನಾಗಿ ತಲೆತಗ್ಗಿಸಿ ಸುಮ್ಮನೆ ಕುಳಿತಿದ್ದನು.

ಮಾತು ಹೊರಬೀಳದ ಪತಿಯು ಆ ದೀನಮುಖದ ಕಡೆ ಒಂದು ಸುತ್ತು ನೋಡಿ, ಇಂದುಮತಿಯು, ಆಮೇಲೆ ಏನನ್ನೂ ಹೇಳದೆ ಕೊಠಡಿಯಿಂದ ಹೊರಕ್ಕೆ ಹೊರಟುಹೋದಳು. ಅವಳೇನೋ ಸುಮ್ಮನೆ ಹೊರಟುಹೋದಳು. ಅಲ್ಲದೆ ಹಿಂದೆಯೂ ಸಲವೂ ಹೀಗೆಯೇ ಹೊರಟುಹೋಗಿದ್ದಾಳೆ. ಆದರೆ ಇಂದು ಮಾತ್ರ ಅವಳು ವೈಮನಸಿನಿಂದ ಅವನ ವೇದನಾಕ್ರಾಂತ ಹೃದಯವನ್ನು ರಭಸದಿಂದ ಮೆಟ್ಟಿ ಅಲ್ಲಿಂದ ಹೊರಟು ಹೋಗಿದ್ದಾಳೆಂದು ನರೇಂದ್ರನಿಗೆ ಅಕಸ್ಮಾತ್ ಅರಿವಾಯಿತು. ಒಂದುಸಲ ಅವನು ಕೊಂಚ ಮುಖವೆತ್ತಿ ಹೆಂಡತಿಯು ನಿಷ್ಕರುಣ ನಡಿಗೆಯ ಕಡೆ ನೋಡಿದ. ಯಾವಾಗ ಅವಳು ಕಣ್ಮರೆಯಾದಳೋ ಆಗ ಒಂದು ದೀರ್ಘ—ಬಹು ದೀರ್ಘಶ್ವಾಸವನ್ನು ಎಳೆದುಕೊಂಡು ಜೀವಚ್ಛವದಂತೆ ಅಲ್ಲಿಯೇ ಬಿದ್ದಿದ್ದ. ಇದ್ದಕ್ಕಿದ್ದಂತೆಯೇ ಈ ದಿವಸ ಅವನ ಮನಸ್ಸಿನಲ್ಲಿ, ಮೊದಲನೆಯ ಬಾರಿ ಎಲ್ಲವೂ ಸುಳ್ಳು—ಎಲ್ಲವೂ ಮೋಸ, ಎಂಬ ಭಾವನೆಯು ಹುಟ್ಟಿತು. ಮನೆ, ಬಾಗಿಲು, ಹೆಂಡತಿ, ಮಗಳು, ಸ್ನೇಹ, ಪ್ರೇಮ, ಅವನದೆಂದು ಏನೇನಿದ್ದವೋ ಅವೆಲ್ಲಾ ಇಂದು ಒಂದು ಕ್ಷಣದಲ್ಲಿ ಮರಳುಗಾಡಿನ ಮರೀಚಿಕೆಯಂತೆ ಹಾರಿಹೋಯಿತು.

೩

"ಅಣ್ಣಾ!"

"ಯಾರು? ವಿಮಲಾ! ಬಾರಮ್ಮ, ಬಾ, ಕುಳಿತುಕೋ!" ಎಂದು ಹೇಳುತ್ತಾ ನರೇಂದ್ರನು ಕಷ್ಟದಿಂದ ಎದ್ದು ಮಂಚದ

ಮೇಲೆ ಕುಳಿತುಕೊಂಡನು. ಅವನ ತುಟಿಯಮೇಲೆ ಪ್ರಕಟವಾದ ವ್ಯಥೆಯ ಚಿಹ್ನೆಯು ವಿಮಲೆಯ ದೃಷ್ಟಿಗೆ ಗೋಚರವಾಗದಿರ ಲಿಲ್ಲ. ಅವನು ಮತ್ತೆ, "ಬಹಳ ದಿವಸಗಳಿಂದ ನಿನ್ನನ್ನು ನೋಡಿರಲಿಲ್ಲ, ಚೆನ್ನಾಗಿದ್ದೀಯಾಮ್ಮ?" ಎಂದನು.

ವಿಮಲೆಯ ಕಣ್ಣುಗಳು ತುಂಬಿಬಂದವು. ಅವಳು ಮೆಲ್ಲನೆ ಮಂಚದ ಬಳಿ ಬಂದು, "ಅಣ್ಣಾ, ನಿನ್ನ ಖಾಯಿಲೆ ವಿಚಾರ ವನ್ನು ನನಗೆ ಇದುವರೆಗೇಕೆ ತಿಳಿಸಲಿಲ್ಲ?" ಎಂದು ಕೇಳಿದಳು.

"ಅಂತಹ ಖಾಯಿಲೆ ಏನೂ ಇರಲಿಲ್ಲವಮ್ಮ.—ಅದೇ ಕೊಂಚ ಎದೆನೋವು—"

ವಿಮಲೆಯು ಕೈಗಳಿಂದ ಕಣ್ಣೀರನ್ನೊರೆಸಿಕೊಳ್ಳುತ್ತಾ, "ಕೊಂಚ ನೋವು ಹೇಗಣ್ಣ? ಸುಮ್ಮನೆ ಎದ್ದು ಕುಳಿತರೆ ಅದೇನು ಹೋಗುವುದಿಲ್ಲ—ಡಾಕ್ಟರು ಏನು ಹೇಳುತ್ತಾರೆ?" ಎಂದಳು.

"ಡಾಕ್ಟರು? ಡಾಕ್ಟರೇಕೆ? ತಾನಾಗಿಯೇ ಸರಿಹೋಗು ತ್ತದೆ."

"ಆಂ! ಏನು ಡಾಕ್ಟರನ್ನು ಕೂಡ ಕರೆಸಲಿಲ್ಲವೆ? ತುಂಬ ದಿವಸ ಆಯಿತು."

ನರೇಂದ್ರನು ಕೊಂಚ ನಕ್ಕು, "ತುಂಬ ದಿವಸ? ಅದೆ, ಅವತ್ತಿನಿಂದ ಆಗಿದೆ—ಅಂದರೆ ಸುಮಾರು ಆರೇಳು ದಿವಸ ವಾಯಿತೆಂದು ಕಾಣುತ್ತದೆ."

"ಏಳು ದಿವಸ! ಹಾಗಾದರೆ ಇದೆಲ್ಲಾ ನೋಡಿಯೂ ಸಹ ಅತ್ತಿಗೆ ಊರಿಗೆ ಹೊರಟುಹೋದಳೆ?"

"ಇಲ್ಲ, ಇಲ್ಲ. ನೋಡಿಕೊಂಡು ಹೋಗಿಲ್ಲ. ನನಗೆ ಖಾಯಿಲೆಯಾಗಿದೆ ಎಂದು ಅವಳಿಗೆ ಖಂಡಿತ ಗೊತ್ತಾಗಲಿ ಲ್ಲಾಂತ ಕಾಣಿಸುತ್ತೆ. ಅವಳು ಹೊರಡುವ ದಿವಸ ಕೂಡ ನಾನು ಎದ್ದು ಹೊರಗಡೆ ಕುಳಿತಿದ್ದೆ. ಇಲ್ಲ, ಇಲ್ಲ! ಬೇಕಾ

ದಷ್ಟು ಕೋಪವಿರಲಿ, ಏನೇ ಇರಲಿ, ವಿಮಲಾ, ನಿಮ್ಮಿಂದ ಹೀಗೆಂದಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ ?''

"ಹಾಗಾದರೆ ಅತ್ತಿಗೆ ಕೋಪಿಸಿಕೊಂಡು ಹೋದಳೆ ? ಏಕೆ ?"

"ಇಲ್ಲ ಕೋಪವಿಲ್ಲ—ದುಃಖ, ಕಷ್ಟ, ಬಡತನ, ಎಷ್ಟು ಅನ್ನುವುದು ನಿನಗೆ ಗೊತ್ತೇ ಇದೆ! ಇದನ್ನೆಲ್ಲಾ ಸಹಿಸುವ ಶಕ್ತಿ ಅವಳಲ್ಲಿಲ್ಲ. ಅಲ್ಲದೆ, ಅವಳ ಶರೀರಸ್ಥಿತಿಯೂ ಬಹಳ ಕೆಟ್ಟುಹೋಗಿತ್ತು. ಇಲ್ಲದಿದ್ದರೆ ಖಾಯಿಲೆಯನ್ನು ಕಂಡು ಕೂಡ ನೀವು ಕೋಪಿಸಿಕೊಂಡು ಇರಬಲ್ಲಿರಾ ?"

ವಿಮಲೆಯ ಕಣ್ಣೀರನ್ನು ತಡೆಯುತ್ತ ಖಂಡಿತ ಸ್ವರದಲ್ಲಿ, "ಇಲ್ಲವೇಕೆ ? ಖಂಡಿತ ಇರಬಲ್ಲೆವು. ನಮಗೆ ಅಸಾಧ್ಯವಾದುದು ಯಾವುದೂ ಇಲ್ಲ. ಇಲ್ಲದಿದ್ದರೆ ನೀವು ಹಾಸಿಗೆ ಹಿಡಿದು ಮಲಗುವವರೆಗೆ ನಮಗೆ ಗೊತ್ತಾಗುವುದಿಲ್ಲವೇನು ? ಭೋಲಾ, ಪಲ್ಲಕ್ಕಿ ಬಂತೇನೋ" ಎಂದು ಕೇಳಿದಳು.

"ತರುವುದಕ್ಕೆ ಕಳುಹಿಸಿದೆರಮ್ಮ"

"ಈಗಲೇ ಹೊರಟುಬಿಡುತ್ತೀಯಾ ವಿಮಲಾ ? ಇನ್ನೂ ಸಂಜೆ ಕೂಡ ಆಗಿಲ್ಲ. ಇನ್ನೂ ಕೊಂಚ ಹೊತ್ತು ಕುಳಿತುಕೋ."

"ಇಲ್ಲ ಅಣ್ಣಾ ಕತ್ತಲಾಯಿತೆಂದರೆ ಮಂಜು ಬೀಳುತ್ತದೆ. ಭೋಲಾ ! ಪಲ್ಲಕ್ಕಿಯನ್ನು ಸೀದ ಒಳಕ್ಕೆ ತರಬೇಕು"

"ಒಳಕ್ಕೇಕೆ ವಿಮಲಾ ?"

"ಒಳಗೇ ಸರಿಹೋಗುತ್ತೆ ಅಣ್ಣಾ. ನೋವಿನ ಬಾಧೆಯಲ್ಲಿ ಹೊರಗೆ ಹೋಗಿ ಕುಳಿತುಕೊಳ್ಳುವುದಕ್ಕೆ ಬಹಳ ತೊಂದರೆ ಆಗುತ್ತದೆ."

"ನನ್ನನ್ನು ಕರೆದುಕೊಂಡು ಹೋಗುತ್ತೀಯಾ ? ಎಂತಹ ಹುಚ್ಚಿಯಮ್ಮ ನೀನು ? ನನಗೇನಾಗಿದೆಯೆಂದು ಇಷ್ಟೊಂದು ಗಾಬರಿ ಮಾಡಿಕೊಳ್ಳುತ್ತಿ ನೀನು? ನನಗೆ ಹೀಗೆ ಆಗಿಂದಾಗ್ಗೆ ಆಗುತ್ತಲೇ ಇರುತ್ತೆ ; ಮತ್ತು ಹಾಗೆ ತಾನೇ ಸರಿಹೋಗುತ್ತೆ.''

"ಹಾಗೆಯೇ ಆಗಲಿ ಅಣ್ಣ. ಆದರೆ ನೀನು ಆಗಲಿ ಹೋದ ಮೇಲೆ ನನಗೆ ಕರೆಯಲು ಬೇರೊಬ್ಬ ಅಣ್ಣನಿಲ್ಲ. ನೋಡು ಪಲ್ಲಕ್ಕಿ ಬಂತು—ಈ ರಗ್ಗನ್ನು ಚೆನ್ನಾಗಿ ಹೊದ್ದುಕೋ. ಭೋಲಾ, ಇನ್ನು ಸ್ವಲ್ಪ ಇಲ್ಲಿಗೆ ತರುವುದಕ್ಕೆ ಹೇಳು—ಇಲ್ಲ ಅಣ್ಣ, ಈ ಸಮಯದಲ್ಲಿ ನೀನು ಕಣ್ಣೆದುರಿಗೆ ಇದ್ದ ವಿನಹ ನನಗೆ ಕೊಂಚವೂ ನೆಮ್ಮದಿ ಇರುವುದಿಲ್ಲ."

"ನೀನು ನನ್ನನ್ನು ಕರೆದುಕೊಂಡು ಹೋಗುವುದಕ್ಕೆ ಇಷ್ಟು ಪಡುತ್ತಿ ಎಂಬುದು ನನಗೆ ಗೊತ್ತಿದ್ದರೆ ನಾನು ನಿನಗೆ ಈ ಸಮಾಚಾರವನ್ನು ಕೂಡ ಕೊಡುತ್ತಿರಲಿಲ್ಲ."

ವಿಮಲೆಯು ತನ್ನ ಅಣ್ಣನ ಮುಖದ ಕಡೆ ಕೊಂಚ ಹೊತ್ತು ನೋಡುತ್ತಿದ್ದು, "ಗೊತ್ತಾಗುವುದು, ಗಿತ್ತಾಗುವುದು ಎಲ್ಲಾ ನಿನ್ನ ಹತ್ತಿರವೇ ಇರಲಿ. ನನಗೇನು ಅವರ ವಿಚಾರ ಹೇಳಬೇಕಾಗಿಲ್ಲ. ಅಲ್ಲ! ನಿನ್ನ ಬಾಯಲ್ಲಿ ಈ ಮಾತುಗಳು ಹೇಗೆ ಬಂದವು ಹೇಳು? ಈ ಸ್ಥಿತಿಯಲ್ಲಿ ನಿನ್ನನ್ನೊಬ್ಬನನ್ನೇ ಇಲ್ಲಿ ಬಿಟ್ಟು ಬಿಟ್ಟು ಹೋಗುವುದಕ್ಕೆ ಮನಸ್ಸು ಬರುತ್ತದೆಯೆ, ನಿಜ ಹೇಳು" ಎಂದಳು.

ನರೇಂದ್ರನು ಗಾಢವಾಗಿ ನಿಶ್ವಾಸಿಸಿ,—"ಸರಿ, ನಡೆಯಮ್ಮ, ಬರುತ್ತೇನೆ" ಎಂದನು.

"ಅಣ್ಣಾ!"

"ಏನಮ್ಮ?"

"ಇವತ್ತು ರಾತ್ರಿ ಅತ್ತಿಗೆಗೆ ಒಂದು ತಂತಿ ಕೊಡುತ್ತೇನೆ. ನಾಳೆ ಬೆಳಗ್ಗೆ ಹೊತ್ತಿಗೆ ಬಂದುಬಿಡಲಿ."

ನರೇಂದ್ರನು ವ್ಯಾಕುಲನಾದನು. "ಬೇಡ, ಬೇಡ, ತಂತಿ ಕೊಡಬೇಕಾದ ಅವಶ್ಯಕತೆ ಏನೂ ಇಲ್ಲ."

"ಏಕೆ ಇಲ್ಲ? ಮೇದಿನಿಪುರವೇನು ಇಲ್ಲಿಂದ ದೂರವಿಲ್ಲ.

ಒಂದು ಸಲ ಬರಲಿ. ಒಂದು ವೇಳೆ ಇರುವುದು ಬೇಕಾಗದಿದ್ದರೆ ಮತ್ತೆ ವಾಪಸ್ಸು ಹೊರಟುಹೋಗಲಿ.''

''ಬೇಡ, ವಿಮಲಾ, ಬೇಡ. ಅವಳ ಶರೀರಸ್ಥಿತಿ ಖಂಡಿತ ಚೆನ್ನಾಗಿಲ್ಲ—ಕೆಲವು ದಿವಸಗಳ ವಿಶ್ರಾಂತಿ ತೆಗೆದುಕೊಳ್ಳಲಿ" ಎಂದು ಕೊಂಚ ಹೊತ್ತು ನಿದಾನಿಸಿ, "ವಿಮಲಾ, ನಾನು ನಿನ್ನ ಬಳಿ ಇದ್ದೂ ಕೂಡ ಸರಿಹೋಗಲಿಲ್ಲ ಅಂದರೆ ಇನ್ನು ಮುಂದೆ ಯಾವ ರೀತಿಯಿಂದಲೂ ನನಗೆ ಸರಿಹೋಗುವುದೇ ಇಲ್ಲ. ಅದು ಸಗಿ ನಾನು ಬರುತ್ತೇನೆಂದು ಗಗನಬಾಬುವಿಗೆ ಗೊತ್ತು ತಾನೆ?'' ಎಂದು ನರೇಂದ್ರನು ಕೇಳಿದನು.

''ಇದೀಗ ಚೆನ್ನಾಗಿ ಕೇಳಿದೆ ಅಣ್ಣ. ಅವರು ಇನ್ನೂ ಆಫೀಸಿನಿಂದಲೇ ಬಂದಿಲ್ಲ.''

''ಹಾಗಾದರೆ!''

"ಹಾಗಾದರೇನು?—ನಿನಗೋಸ್ಕರ ಹೆದರಬೇಕಾದ ಕಾರಣ ವೇನೂ ಇಲ್ಲ. ಅಣ್ಣ—ಅವರಿಗೆ ಎರಡು ಕಣ್ಣುಗಳೂ ಚೆನ್ನಾಗಿವೆ ನೋಡುವುದಕ್ಕೆ—ನಾವು ಮನೆಗೆ ಹೋಗುವುದೇ ತಡ ನೋಡುತ್ತಾರೆ.''

ನರೇಂದ್ರನು ಮೆಲ್ಲಗೆ ಹಾಸಿಗೆಯ ಮೇಲೆ ಮಲಗುತ್ತಾ, "ವಿಮಲಾ, ಹಾಗಾದರೆ ನಾನು ಬರುವುದಕ್ಕೆ ಖಂಡಿತ ಸಾಧ್ಯವಿಲ್ಲಮ್ಮ'' ಎಂದು ಹೇಳಿದನು.

ವಿಮಲಾಗೆ ದಿಕ್ಕುತೋಚದಾಯಿತು. "ಏತಕ್ಕೆ?" ಎಂದು ಕೇಳಿದಳು.

"ಗಗನಬಾಬುವಿನ ಅಭಿಪ್ರಾಯ, ಒಪ್ಪಿಗೆ ಇಲ್ಲದೆ—"

''ಹಾಗೆ ಮಾಡಿದರೆ ನಾನಿಲ್ಲೇ ತಲೆ ಚಚ್ಚಿಕೊಂಡು ಪ್ರಾಣ ಬಿಟ್ಟುಬಿಡುತ್ತೇನೆ. ಒಂದೇ ಮನೆಯಲ್ಲಿ ಎಂದಾದರೂ ಭಿನ್ನಾಭಿಪ್ರಾಯಗಳಿಗೆಡೆ ಇರುತ್ತದೆಯೇನು? ನೀನೇ ಹೀಗೆ ನನಗೆ ಅವಮಾನ ಮಾಡುತ್ತಿದ್ದೀಯಲ್ಲ?''

"ಅವಮಾನ ಮಾಡುತ್ತಾ ಇದ್ದೇನೆಯೆ!—ವಿಮಲ! ಭಿನ್ನಾಭಿಪ್ರಾಯ ಇಲ್ಲಾಂತ ನಿನಗೆ ಚೆನ್ನಾಗಿ ಗೊತ್ತೆ?"

ವಿಮಲೆಯು ಅವಶ್ಯಕವಾದ ಬಟ್ಟೆ ಬರೆ ಮುಂತಾದುವುಗಳನ್ನು ಜೋಡಿಸುತ್ತಿದ್ದಳು. ಅವಳು ನಾಚಿಕೆಯಿಂದ ತಲೆಯಲ್ಲಾಡಿಸಿ, "ಇಲ್ಲ" ಎಂದಳು.

*   *   *

"ಇವತ್ತು ಅಷ್ಟೊಂದು ನೋವಿಲ್ಲಾಂತ ಕಾಣಿಸುತ್ತೆ, ಅಲ್ಲವೇ ನಣ್ಣ?"

"ಕೊಂಚ ಕೂಡ ಇಲ್ಲವಮ್ಮ ಈ ಎಂಟು ದಿವಸ ನಿಮ್ಮಗಳಿಗೆ ಎಷ್ಟು ತೊಂದರೆ ಕೊಟ್ಟೆ. ಈ ಸಲ ಇನ್ನು ಕಳುಹಿಸಿ ಕೊಟ್ಟು ಬಿಡಮ್ಮ."

"ಯಾರ ಹತ್ತಿರಕ್ಕೆ ಕಳುಹಿಸಿ ಬಿಡಲಣ್ಣ? ಅಲ್ಲ, ಈ ಹದಿನಾರು ಹದಿನೇಳು ದಿವಸಗಳಲ್ಲಿ ಅತ್ತಿಗೆಯು ಒಂದು ಕಾಗದವನ್ನಾದರೂ ಬರೆಯಲಿಲ್ಲವಲ್ಲ?"

"ಬರೆದಿಲ್ಲ?—ಅದೇಕೆ ಬರೆದಿಲ್ಲ? ಸೇರಿದವಳೇ ಕಾಗದ ಬರೆದಿದ್ದಾಳೆ—ನಿನ್ನೆ ಕೂಡ ಒಂದು ಕಾಗದ ಬಂದಿದೆ—ಆದರೆ ನನಗೇ ಉತ್ತರಕೊಡುವುದಕ್ಕೆ ಸಾಧ್ಯವಾಗಿಲ್ಲ."

ವಿಮಲೆಯ ಮುಖವು ಯೋಚನಾಪೂರ್ಣವಾಯಿತು. ಸುಮ್ಮನೆ ನೋಡುತ್ತಿದಳು. ನರೇಂದ್ರನು ನಾಚಿಕೆಯಿಂದ ಸಂಕುಚಿತನಾಗಿ ಹೇಳತೊಡಗಿದ—"ಅಲ್ಲಿಗೆ ಹೋಗಿ ತಲುಪಿದಂದಿನಿಂದ ಛಳಿ—ನೆಗಡಿ,—ಕೆಮ್ಮು ಏನಾದರೂ ಒಂದು ಇದ್ದೇ ಇದೆ—ಮೊನ್ನೆ ಕೊಂಚ ಜ್ವರ ಕೂಡ ಬಂದಿತ್ತಂತೆ; ಆದರೂ ಸಹ ಅವಳು ಕಾಗದವನ್ನು ಬರೆದಿದ್ದಾಳೆ. ........"

"ಅದೆ, ನಿನ್ನಿಂದ ರೂಪಾಯಿ ಅವಳಿಗೆ ಸೇರಿರಬಹುದೂಂತ ಕಾಣುತ್ತೆ, ಅದಕ್ಕೆ."

ನರೇಂದ್ರನು ಇನ್ನೂ ಹೆಚ್ಚು ಲಜ್ಜಾಯುತನಾದನು. "ಯಾವುದೂ ಅವಳ ಕೈಯಲ್ಲಿರಲಿಲ್ಲ—ಮನೆಯ ಹತ್ತಿರವೇ ಸಮ್ಮೇಳನವೊಂದು ನಡೆಯುವುದಿದೆಯಂತೆ—ಅದು ಮುಗಿ ದೊಡನೆಯೇ ಬಂದುಬಿಡುತ್ತೇನೆಂದು ಬರೆದಿದ್ದಾಳೆ. ನಿನಗೆ ಬರೆಯವುದಕ್ಕೆ ಅವಳಿಗೆ ಸಾಧ್ಯವಾಗಿಲ್ಲದಿದ್ದರೂ ಇರಬಹುದು."

"ಸಾಧ್ಯವಾಗಿಲ್ಲವೇಕೆ? ನನಗೂ ನಿನ್ನೆಯ ದಿವಸ ನಾಲ್ಕು ಪುಟಗಳ ಕಡತವೊಂದು ಬಂದಿದೆ."

"ಬಂದಿದೆಯೆ? ಅದೇಕೆ ಬರುವುದಿಲ್ಲ—ಅದಕ್ಕೆ ಉತ್ತರ ವಾಗಿ—"

"ನೀನೇನು ಹೆದರಬೇಡಣ್ಣ—ನಿನ್ನ ಖಾಯಿಲೆ ವಿಚಾರ ಬರೆಯುವುದಿಲ್ಲ. ಅದೂ ಅಲ್ಲದೆ ಹಾಳುಮಾಡುವುದಕ್ಕೆ ನನಗೆ ಅಷ್ಟೊಂದು ಹೊತ್ತೂ ಇಲ್ಲ." ಎಂದಿಷ್ಟು ಮಾತ್ರ ಹೇಳಿ ವಿಮಲೆಯು ಕೊಠಡಿಯಿಂದ ಹೊರಟು ಹೋದಳು.

ಸಂಜೆಗೆ ಕೊಂಚ ಮುಂಚೆ ನರೇಂದ್ರನೊಬ್ಬನೇ ಸುಮ್ಮನೆ ಕುಳಿತಿದ್ದ. ತೆರೆದಿದ್ದ ಕಿಟಕಿಯಿಂದ ಆಕಾಶದ ಕಡೆ ನೋಡು ತ್ತಿದ್ದ. ಅಷ್ಟರಲ್ಲಿ ವಿಮಲೆಯು ಬಂದು, "ಸುಮ್ಮನೆ ಕುಳಿತು ಅದೇನು ಯೋಚಿಸುತ್ತಾ ಇದ್ದೀಯಣ್ಣ?" ಎಂದು ಕೇಳಿದಳು.

ನರೇಂದ್ರನು ಅವಳ ಕಡೆ ಮುಖ ತಿರುಗಿಸಿ, - "ಇನ್ನೇನೂ ಯೋಚಿಸುತ್ತಾ ಇಲ್ಲವಮ್ಮ; ಮನಸ್ಸಿನಲ್ಲೇ ನಿನ್ನನ್ನು ಆಶೀ ರ್ವದಿಸುತ್ತಿದ್ದೆ. ಹೀಗೆಯೇ ನಿನ್ನ ಜೀವಮಾನವೆಲ್ಲ ಸುಖದಲ್ಲಿ ಕಳೆಯಲಿ ಎಂದು" ಎಂದು ಹೇಳಿದನು.

ವಿಮಲೆಯು ಹತ್ತಿರ ಬಂದು ಅವನ ಪಾದಧೂಳಿಯನ್ನು ತಲೆಯಲ್ಲಿ ಧರಿಸಿ, ಸ್ಟೂಲಿನ ಮೇಲೆ ಕುಳಿತುಕೊಂಡಳು.

"ಅದು ಸರಿ. ಮಧ್ಯಾಹ್ನ ಅದೇಕೆ ನೀನು ಅಷ್ಟೊಂದು ಕೋಪಿಸಿಕೊಂಡು ಹೊರಟು ಹೋದೆ. ಹೇಳು?"

"ಅನ್ಯಾಯ ಸಹಿಸುವುದಕ್ಕೆ ನನ್ನಿಂದ ಸಾಧ್ಯವಿಲ್ಲ ಅಣ್ಣ. ನೀನೇಕೆ ಇಷ್ಟು—"

"ಇಷ್ಟು—ಏನು ಹೇಳು ? ಇಂದುವಿನ ಕಡೆ ಒಂದು ಸಲ ನೋಡು. ನಾನವಳನ್ನು ಸುಖಿಯನ್ನಾಗಿ ಮಾಡಲು ಸಾಧ್ಯವಾಗಿಲ್ಲ."

"ಸುಖದಿಂದ ಇರುವುದಕ್ಕೆ ಸಾಧ್ಯವಾಗುವಷ್ಟು ಶಕ್ತಿ ಇರಬೇಕಣ್ಣ ! ಅವಳು ಎಷ್ಟು ಪಡೆದುಕೊಂಡು ಬಂದಿದ್ದಾಳೋ ಅಷ್ಟೊಂದು ಎಷ್ಟು ಜನಕ್ಕೆ ಈ ಪ್ರಪಂಚದಲ್ಲಿ ಸಿಕ್ಕುತ್ತದೆ ? ಸೌಭಾಗ್ಯವನ್ನು ಶಿರಸಾವಹಿಸಬೇಕು. ಇಲ್ಲದಿದ್ದರೆ—" ಮಾತು ಮುಗಿಸುವ ಮೊದಲೇ ವಿಮಲೆಯು ನಾಚಿಕೆಯಿಂದ ಮುಖ ತಗ್ಗಿಸಿದಳು.

ನರೇಂದ್ರನು ಸ್ನಿಗ್ಧ, ಸ್ನೇಹ, ನೀರವದೃಷ್ಟಿಯಿಂದ ತನ್ನ ತಂಗಿಯನ್ನು ಅಭಿಷೇಕಮಾಡಿದ. ಸ್ವಲ್ಪ ಹೊತ್ತಿನಮೇಲೆ, "ವಿಮಲಾ, ನಾಚಿಕೆಪಡಬೇಡಮ್ಮ, ನಿಜಹೇಳು, ನೀನು ಯಾವಾಗಲೂ ಜಗಳ ಕಾಯುವುದಿಲ್ಲವೆ ?" ಎಂದನು.

"ಅವರೇನೋ ಹೇಳಿರಬೇಕು, ಅಲ್ಲವೆ ?—ಅವರೇನು—ಹೇಳುವವರೆ !"

ನರೇಂದ್ರನು ಮಂದ ಮುಗುಳುನಗೆ ನಕ್ಕ. "ಇಲ್ಲ ಗಗನಬಾಬುವು ಏನೂ ಹೇಳಲಿಲ್ಲ—ನಾನು ನಿನ್ನನ್ನೇ ಕೇಳುತ್ತಾ ಇದ್ದೇನೆ."

ವಿಮಲೆಯು ತನ್ನ ಆರಕ್ತಮುಖವೆತ್ತಿ, "ನಿಮ್ಮಗಳೊಡನೆ ಜಗಳ ಆಡಿ ಯಾರು ಗೆದ್ದಾರು ಹೇಳು ? ಕೊನೆಯಲ್ಲಿ ಕೈಕಾಲು ಜೋಡಿಸಿಕೊಂಡು—ಯಾರು—ಯಾರು ಅಲ್ಲಿ ನಿಂತಿರುವರು ?" ಎಂದಳು.

"ನಾನು—ನಾನೇ—ಗಗನಬಾಬು. ಅದೇಕೆ ನಿಲ್ಲಿಸಿಬಿಟ್ಟೆ? ಹೇಳು, ಜಗಳ ಆಡಿ ಯಾರು ಯಾರ ಹತ್ತಿರ ಕೈಕಾಲು

ಜೋಡಿಸಿಕೊಂಡು ಬಿದ್ದಿರುತ್ತಾರೆ—ಮಾತನ್ನು ಪೂರೈಸಿ ಬಿಡು.''

''ಹೋಗಿ—ಬಚ್ಚಿಟ್ಟುಕೊಂಡು ಮಾತನ್ನು ಹೊಂಚಿಕೇಳುವ ಸಾಧುಪುರುಷರ ಮಾತಿಗೆ ನಾನು ಉತ್ತರ ಕೊಡುವುದಿಲ್ಲ'' ಎಂದು ಹೇಳಿ ವಿಮಲೆಯು ಒತ್ತರಿಸಿ ಬರುತ್ತಿದ್ದ ನಗುವನ್ನು ತಡೆಯುತ್ತಾ, ಕೃತ್ರಿಮಕೋಪದಿಂದ ಶೀಘ್ರವಾಗಿ ಹೊರಕ್ಕೆ ಹೊರಟುಹೋದಳು. ನರೇಂದ್ರನು ಎದ್ದು ಒಂದು ದೀರ್ಘ ಶ್ವಾಸವನ್ನು ತೆಗೆದುಕೊಂಡು ಅಲ್ಲಿದ್ದ ದಪ್ಪ ಒರಗುದಿಂಬಿಗೆ ಒರಗಿ ಕುಳಿತುಕೊಂಡುಬಿಟ್ಟನು. ಗಗನಬಾಬುವು, ''ಈಗ ಮೈಯಲ್ಲಿ ಹೇಗಿದೆ ನರೇಂದ್ರಬಾಬು ?'' ಎಂದು ಕೇಳಿದನು.

''ಎಲ್ಲಾ ಸರಿಹೋಗಿದೆ. ಈ ಸಲ ನನ್ನನ್ನು ಕಳುಹಿಸಿ ಕೊಟ್ಟುಬಿಡು.''

''ಕಳುಹಿಸಿಬಿಡು? ಘಾಬರಿಮಾಡಿಕೊಳ್ಳಬೇಡ. ಇನ್ನೊಂದು ನಾಲ್ಕಾರು ದಿವಸಗಳಿರು. ನಿನ್ನ ಈ ತಂಗಿಯ ಜೊತೆಯಲ್ಲಿ—ಆಶ್ರಯದಲ್ಲಿ, ಯಾರು ಎಷ್ಟು ದಿವಸ ಇರುತ್ತಾರೆಯೋ ಅವರಿಗೆ ಅಷ್ಟು ವರುಷ ಆಯಸ್ಸು ಹೆಚ್ಚಾಗುತ್ತದೆ. ಗೊತ್ತೆ ?"

''ಗೊತ್ತಿಲ್ಲ. ಆದರೆ ಈ ಮಾತಿನಲ್ಲಿ ಸಂಪೂರ್ಣ ವಿಶ್ವಾಸ ವಿಡುತ್ತೇನೆ.''

ಗಗನಬಾಬುವು ಕಣ್ಣುಗಳೆರಡನ್ನೂ ಅರಳಿಸಿ, ''ವಿಶ್ವಾಸ ವಿಡುವುದೆಂತಹುದು ? ಇದು ಪ್ರಮಾಣಸಿದ್ಧವಾದ ಮಾತು ! ನಾನು ಹೇಳುವುದು ನಿಜ, ನರೇಂದ್ರಬಾಬು. ಇಂತಹ ರತ್ನಗಳೂ ಪ್ರಪಂಚದಲ್ಲಿ ದೊರೆಯುತ್ತವೆ. 'ಭಾಗ್ಯ ! ಭಾಗ್ಯ ! ಭಾಗ್ಯಂ ಫಲತಿ !'—ಎಷ್ಟು ಚೆನ್ನಾಗಿದೆ ಆ ಶ್ಲೋಕ. ಇಲ್ಲದಿದ್ದರೆ ನನ್ನಂತಹ ನಿರ್ಭಾಗ್ಯನಿಗೆ ಇಂತಹ ವಸ್ತುವು ದೊರೆಯುತ್ತಿತ್ತೆ ? ಖಂಡಿತ ಇದು ಸ್ವಪ್ನದಲ್ಲಿಯೂ ಅಗೋಚರ. ಹೋಗಬೇಡ, ಇದ್ದುಬಿಡು ಇನ್ನೂ ನಾಲ್ಕಾರು ದಿವಸ— ಇಂತಹ ಮನೆಬಿಟ್ಟು

ಹೊರಟುಹೋದರೆ ಸ್ವರ್ಗದಲ್ಲಿಯೂ ಸಹ ನಿನಗೆ ನೆಮ್ಮದಿ ದೊರೆಯುವುದಿಲ್ಲವೆಂದು ನಾನು ಹೇಳುತ್ತೇನೆ" ಎಂದು ಹೇಳಿದನು.

ವಿಮಲೆಯು ಬಹಳ ದೂರ ಹೋಗಿರಲಿಲ್ಲ. ಪರದೆಯ ಹಿಂದೆ ನಿಂತು ಕಿವಿತೆರೆದು ಎಲ್ಲವನ್ನೂ ಕೇಳುತ್ತಿದ್ದಳು. ಕಣ್ಣೊರಸಿಕೊಂಡು ಇಣಿಕಿನೋಡಿ, ಪತಿಯ ಮಾತುಗಳನ್ನು ಕೇಳಿ, ತನ್ನ ಅಣ್ಣ ನರೇಂದ್ರನ ಚಹರೆಯು ಒಂದು ಸಲ ತಾಪದಿಂದ ಉರಿದು ಮರುಕ್ಷಣವೇ ಬೂದಿಯಂತೆ ಆದದ್ದನ್ನು ಆ ಕತ್ತಲೆಯಲ್ಲಿಯೂ ಅವಳು ಸ್ಪಷ್ಟವಾಗಿ ನೋಡಿದಳು.

೪

ಸುಮಾರು ಹದಿನೈದು ದಿವಸಗಳನಂತರ ಮಧ್ಯಾಹ್ನ ಗಾಡಿಯಲ್ಲಿ ತನ್ನ ಮಗಳೊಡನೆ ಇಂದುಮತಿಯು ಮೇದಿನೀಪುರದಿಂದ ಬಂದಳು. ಹೆಂಡತಿ, ಮಗಳು ಚೆನ್ನಾಗಿರುವುದನ್ನು ನೋಡಿ, ಒಣಗಿ ಕಳೆಗುಂದಿ ಬಿಳುಪೇರಿದ ನರೇಂದ್ರನ ಮುಖವು ಒಂದು ಕ್ಷಣದವರೆಗೆ ಪ್ರಜ್ವಲಿಸಿತು. ಮಲಗಿ ನಿದ್ರಿಸುತ್ತಿದ್ದ ಮಗಳನ್ನು ಬಲವಂತದಿಂದ ಬಳಿಗೆಳೆದು ಎದೆಗಪ್ಪಿಕೊಂಡು, ''ಹೇಗಿದ್ದಿ ಇಂದೂ ?'' ಎಂದು ಕೇಳಿದನು.

"ಚೆನ್ನಾಗಿದ್ದೇನೆ. ಏತಕ್ಕೆ ? ''

''ನಿನಗೆ ಜ್ವರ ಬಂದಿತ್ತಲ್ಲ. ಅದರಿಂದ ನನಗೆ ತುಂಬ ಭಯವಾಗಿತ್ತು. ಖಾಯಿಲೆ ಚೆನ್ನಾಗಿ ವಾಸಿಯಾಯಿತು ತಾನೆ ?"

''ವಾಸಿಯಾಗದೆ ಇದ್ದರೆ ಡಾಕ್ಟರನ್ನು ಕರೆಸುತ್ತೀರೇನು ?''

ನಗುವಿನಿಂದ ತುಂಬಿದ್ದ ನರೇಂದ್ರನ ಮುಖವು ಮಲಿನವಾಯಿತು. ''ಕರೆಸದೇ ಇದ್ದರೆ—ಕೇಳಿ ಬಿಟ್ಟಿದ್ದೇನೆ ''

''ಸುಮ್ಮನೆ ಕೇಳಿ ಪ್ರಯೋಜನವೇನು ? ಅಲ್ಲಿ ನೋಡಿದರೆ ಒಂಬೈವತ್ತು ರೂಪಾಯಿ ಕಳುಹಿಸಿಬಿಟ್ಟು ಕಾಗದದ ಮೇಲೆ

ಕಾಗದ ಬರೆಯುತ್ತಿದ್ದಿರಿ—ಹೇಗಿದ್ದೀಯೇ—ದೇಹಸ್ಥಿತಿ ಹೇಗಿದೆ—ಪಥ್ಯದಲ್ಲಿ ಇರು—ಪಥ್ಯದಲ್ಲಿ ಇರು ಎಂದು. ನಾನೇನು ಏನೂ ಅರಿಯದ ಎಳೆಕೂಸೆ; ಅಥವಾ ನನ್ನ ಅಣ್ಣ ನನಗೆ ಐವತ್ತು ರೂಪಾಯಿ ಕೊಡಲಾರದೆ ಹೋಗುತ್ತಿದ್ದನೋ? ಆ ರೂಪಾಯಿಗಳನ್ನು ಕಳುಹಿಸಿ ಎಲ್ಲರ ಮುಂದೆ ನಾನು ತಲೆತಗ್ಗಿಸುವ ಹಾಗೆ ಮಾಡುವುದಕ್ಕೆ ಅವಶ್ಯಕತೆ ಏನುಇತ್ತು? ಅವತ್ತಿನ ದಿವಸ ಮನೆತುಂಬ ಎಲ್ಲಿ ನೋಡಲಿ ಇದರ ಹಾಸ್ಯವೇ ಹಾಸ್ಯ!''

ನರೇಂದ್ರನ ಮಲಿನ ಮುಖವು ಇನ್ನೂ ಮಲಿನವಾಯಿತು. ಅವನು ಅಸ್ಪಷ್ಟಸ್ವರದಲ್ಲಿ, ''ಅದಕ್ಕಿಂತ ಇನ್ನೂ ಹೆಚ್ಚಾಗಿ ಹೊಂದಿಸಲು ಯಾವರೀತಿಯಿಂದಲೂ ಸಾಧ್ಯವಾಗಲಿಲ್ಲ" ಎಂದು ಹೇಳಿದನು.

''ರೂಪಾಯಿ ಕಳುಹಿಸದೆ ನೇರವಾಗಿ ಇಲ್ಲವೆಂದೇಕೆ ಬರೆಯಲಿಲ್ಲ? ಛು—ಮತ್ತೆ ಅದೇ ದಿನವಹಿ ಸಂಗೀತ—ಇಲ್ಲ, ಇಲ್ಲ—ಕೊಡಿ, ಕೊಡಿ—ಇಷ್ಟು ದಿವಸ ಹಾಯಾಗಿ ಸಂತೋಷವಾಗಿದ್ದೆ. ವಾಸ್ತವವಾಗಿ, ಹಣವಂತರ ಹುಡುಗಿ ಬಡವರಮನೆ ಸೇರುವುದಕ್ಕಿಂತ ದೊಡ್ಡ ಪಾಪ ಈ ಪ್ರಪಂಚದಲ್ಲಿ ಬೇರೊಂದು ಖಂಡಿತ ಇಲ್ಲ'' ಎಂದು ಹೇಳುತ್ತಾ ತನ್ನದೇ ಆದ ಈ ನಿತ್ಯ ಸತ್ಯದಿಂದ, ತನ್ನ ಪತಿಯ ಹೃದಯ ಕಲಶವನ್ನು ತುಂಬಿ, ಇಂದುಮತಿಯು ಅಲ್ಲಿಂದ ಬೇರೆ ಕಡೆಗೆ ಹೊರಟುಹೋದಳು.

ಹೆಚ್ಚುಕಡಿಮೆ ಒಂದು ತಿಂಗಳ ಅನಂತರ ಸತಿಪತಿಯರದು ಇದೇ ಪ್ರಥಮ ಸಮ್ಮಿಲನ!

ಹೊರಗೈತಂದು ಇಂದುಮತಿಯು ಅಲ್ಲಿ ಇಲ್ಲಿ ಈಕ್ಷಿಸಿ ತನ್ನ ಕೊಠಡಿಯನ್ನು ಸಹ ಹೊಕ್ಕು ನೋಡಿ ಆಶ್ಚರ್ಯಚಕಿತಳಾದಳು—ಮನೆಯ ಇನ್ನಿತರ ಜಾಗಗಳಂತೆಯೇ ಇಲ್ಲಿಯೂ ಸಹ ಎಲ್ಲಾ ಸಾಮಾನು ಸರಂಜಾಮುಗಳು ಸುವ್ಯವಸ್ಥಿತ ರೀತಿಯಲ್ಲಿ ಇಡಲ್ಪಡುತ್ತಿವೆ.

"ಇಷ್ಟೆಲ್ಲ ಚೊಕ್ಕಟ ಏಕೆ ಮಾಡುತ್ತಿರಲಾಗಿದೆ?" ಎಂದು ಇಂದುಮತಿಯು ಕೆಲಸದವಳನ್ನು ಕೇಳಿದಳು.

"ನೀವು ಬರುವಿರಿ ಎಂದು" ಎಂದು ಆ ಹೊಸ ಕೆಲಸದವಳು ಉತ್ತರವಿತ್ತಳು.

"ನಾನು ಬರುತ್ತೇನೆಂದೆ?"

"ಹೌದು ತಾಯಿ. ಯಜಮಾನರು ಹಾಗೆಂದು ಹೇಳಿದ್ದರು. ನಿಮಗೆ ಕೊಳೆ–ಕಚಡ ಒಂದು ಸೈರಿಸುವುದಿಲ್ಲ–ಅದಕ್ಕೆ ಈಗ ಮೂರು ದಿವಸಗಳಿಂದ—"

ಇಂದುಮತಿಗೆ ಒಳಗೊಳಗೇ ಒಂದು ಭಾರಿ ಗೌರವದ ಅನುಭವವಾಯಿತು. ಮೇಲೆ ಸ್ವಾಭಾವಿಕರೀತಿಯಲ್ಲಿ ಹೇಳಿದಳು—"ಕೊಳೆ–ಕಚಡವನ್ನು ಇನ್ನಾರುತಾನೆ ಸಹಿಸುತ್ತಾರೆ? ಆದರೂ ಒಟ್ಟಿನಲ್ಲಿ ಚೆನ್ನಾಗಿಯೇ–"

"ಹೌದು ತಾಯಿ. ಜನಗಳನ್ನು ಬಿಟ್ಟು, ಮೇಲೆ–ಕೆಳಗೆ ಎಲ್ಲಾ ಕಡೆಯೂ ಚೆನ್ನಾಗಿ ಸ್ವಚ್ಛಮಾಡಿಸಲ್ಪಟ್ಟಿದೆ."

"ಹೋಗು, ರಾಮುಟಹಲನನ್ನು ಸ್ವಲ್ಪ ಕರೆದುಕೊಂಡು ಬಾ; ಪೇಟೆಯಿಂದ ಕೊಂಚ ಹಣ್ಣುಹಂಪಲು ತರಬೇಕು."

"ಹಣ್ಣು ಹಂಪಲು ಎಲ್ಲಾ ತಂದಿದೆ ತಾಯಿ. ಯಜಮಾನರು ಇವತ್ತು ಬೆಳಗ್ಗೆ ತಾವೇ ಸ್ವತಃ ಪೇಟೆಗೆ ಹೋಗಿ ಚೆನ್ನಾಗಿ ನೋಡಿ, ಕೊಂಡುಕೊಂಡು ಬಂದಿದ್ದಾರೆ"

"ತೆಂಗಿನಕಾಯಿ ಇದೆಯೋ? ದ್ರಾಕ್ಷಿ—"

"ಅದೇಕಿಲ್ಲ. ಇಗೊ ಈಗಲೇ ತರುತ್ತೇನೆ" ಎಂದು ಕೆಲಸದವಳು ಹೊರಟುಹೋದಳು. ಇಂದುಮತಿಯ ಮುಖದಮೇಲೆ ಆವರಿಸಿದ್ದ ವಿರಕ್ತಿಯ ಮೋಡವು ಮಾಯವಾಯಿತು. ಅಲ್ಲದೆ ಇದೇ ಈಗ ಕೊಂಚ ಹೊತ್ತಿಗೆ ಮುಂಚೆ ತನ್ನ ಪತಿಯ ಮ್ಲಾನವದನವನ್ನು ನೋಡಿದ್ದಳಲ್ಲಾ ಅದು ಈಗ ಅವಳ ಎದೆಯಲ್ಲಿ ಎಲ್ಲೋ ಮುಳ್ಳಿನಂತೆ ಚುಚ್ಚತೊಡಗಿತು.

ಸ್ವಲ್ಪ ವಿಶ್ರಾಂತಿ ಹೊಂದಿದಮೇಲೆ—ಘಂಟೆ ಎರಡು ಘಂಟೆಗಳು ಕಳೆದಮೇಲೆ ಅವಳು ಪ್ರಸನ್ನ ಮುಖಮುದ್ರೆಯಿಂದ ತನ್ನ ಪತಿಯ ಆಫೀಸ್ ರೂಮನ್ನು ಪ್ರವೇಶಿಸಿದಳು.

ನರೇಂದ್ರನು ಕನ್ನಡಕವನ್ನು ತೆಗೆದಿಟ್ಟು ಮೇಜಿನ ಮೇಲೆ ಬಹಳ ಬಗ್ಗಿ ಅದೇನನ್ನೋ ಬರೆಯುತ್ತಿರುವುದನ್ನು ಅವಳು ನೋಡಿ, "ಇಷ್ಟೊಂದು ಮನಸ್ಸಿಟ್ಟು ಏನು ಬರೆಯೋಣವಾಗಿದೆ —ಕವಿತೆಯೇ ?" ಎಂದು ಕೇಳಿದಳು.

ನರೇಂದ್ರನು ಮುಖವೆತ್ತಿ, "ಅಲ್ಲ" ಎಂದನು.

"ಹಾಗಾದರೆ ಅದಿನ್ನೇನು ?"

"ಏನೂ ಇಲ್ಲ" ಎಂದು ಅವನು ಆ ಕಾಗದವನ್ನು ಮುಚ್ಚಿಟ್ಟನು.

ಇಂದುಮತಿಯ ಪ್ರಸನ್ನ ಮುಖಮಂಡಲವು ಮೋಡದಿಂದ ಮುಚ್ಚಲ್ಪಟ್ಟಿತು. "ಹಾಗಾದರೆ ಇನ್ನು, 'ಏನೂ ಇಲ್ಲ' ಎಂದು ಸುಮ್ಮನಾಗದೆ ನಮ್ಮ ದುಃಖ ದಾರಿದ್ರ್ಯಗಳು ಕಳೆಯುವಂತಹ ಯಾವುದಾದರೂ ಒಂದು ಕೆಲಸದಲ್ಲಿ ಮನಸ್ಸನ್ನು ಓಡಿಸಿ. ನಮ್ಮಣ್ಣನ ಕೈಕೆಳಗೆ ಕೆಲವು ಕೆಲಸಗಳು ಖಾಲಿ ಇವೆ ಎಂದು ಕೇಳಿದ್ದೇನೆ" ಎಂದು ಹೇಳಿ ಪತಿಯ ಮುಖಭಾವವನ್ನು ಪರೀಕ್ಷಿಸುವಂತೆ ಈಕ್ಷಿಸತೊಡಗಿದಳು. ಈ ಕೆಲಸದ ವಿಚಾರವೆತ್ತುವುದರಿಂದ ಅವನಿಗೆ ಸದಾ ನೋವಾಗುವುದೆಂದು ಅವಳಿಗೆ ಖಂಡಿತವಾಗಿ ಗೊತ್ತಿತ್ತು. ಆದರೆ ಇಂದು ಅವನ ಮುಖದ ಮೇಲೆ ಆ ವೇದನೆಯ ಯಾವ ಸುಳಿವೂ ಕಂಡುಬಾರದಿದ್ದುದನ್ನು ನೋಡಿ ಅವಳಿಗೆ ಅತ್ಯಾಶ್ಚರ್ಯವಾಯಿತು.

ನರೇಂದ್ರನು ಶಾಂತತೆಯಿಂದ, "ಕೆಲಸವಿದ್ದರೆ, ಕೆಲಸಮಾಡುವಂತಹ ಜನಗಳು ಕೂಡ ಅಲ್ಲಿ ಸಿದ್ಧರಾಗಿಯೇ ಇದ್ದಾರೆ" ಎಂದನು.

ಈ ತರಹದ ಉತ್ತರವನ್ನು ಅವಳು ಖಂಡಿತ ನಿರೀಕ್ಷಿಸಿರಲಿಲ್ಲ. ಈ ಉತ್ತರದಿಂದ ಅವಳು ನಿಜವಾಗಿಯೂ ಕೋಪೋದ್ದೀಪಿತ ಳಾದಳು. ಕೊಂಚಹೊತ್ತು ಸುಮ್ಮನಿದ್ದು, "ಹೌದೆಂದು ನನಗೂ ಗೊತ್ತಿದೆ. ಅಲ್ಲಿದ್ದಾರೆ—ಆದರೆ ಇಲ್ಲಿಲ್ಲವೇನು ? ಈಚೆಗೆ ನಿಮಗೆ ಒಳ್ಳೆಯಮಾತು ಹೇಳಿದರೂ ಅದು ಕೆಟ್ಟದ್ದೇ ಅನ್ನಿಸು ತ್ತದೆ. ಮನೆಯ ಕೊಠಡಿಯಲ್ಲಿ ಸುಮ್ಮನೆ ಕುಳಿತುಕೊಂಡು ಕವಿತೆಗಳನ್ನು ಬರೆಯುವುದಕ್ಕೆ ನಾಚಿಕೆಯಾದರೂ ಆಗುವು ದಿಲ್ಲವೆ ?" ಎಂದು ಒದರಿ ಮುಖ ಕಣ್ಣುಗಳನ್ನು ಕೆಂಪಗೆ ಮಾಡಿ ಕೊಂಡು ಅಲ್ಲಿಂದ ಹೊರಟುಹೋದಳು.

ಆಯಿತು—ಇದೇ ದ್ವಿತೀಯ ಸಮ್ಮಿಲನ !

* * *

"ಓಹೋ—ಅತ್ತಿಗೆ ! ಯಾವಾಗ ಬಂದೆ ಅತ್ತಿಗೆ ?"

"ಮೊನ್ನೆ ಮಧ್ಯಾಹ್ನ"

"ಮೊನ್ನೆ—ಮಧ್ಯಾಹ್ನ ? ಸರಿ, ಅದರಿಂದಲೇ ಇವತ್ತು ಸಂಜೆ ಇಷ್ಟೊಂದು ಜಾಗ್ರತೆ ಸಂದರ್ಶನ ಕೊಡುವುದಕ್ಕೆ ಬಂದಿದ್ದೀಯೆ. ಅತ್ತಿಗೆ ಇಂತಹ ಪ್ರೇಮದ ಸೆಳೆತವನ್ನು ಕೊಂಚ ಕಡಿಮೆಮಾಡು."

ಇಂದುಮತಿಯು ತಲೆಯಾಡಿಸಿ, "ಕಾಗದ ಬರೆದರೆ ಉತ್ತರ ಕೂಡ ಕಾಣುವ ಹಾಗಿಲ್ಲ. ನಾನೊಬ್ಬಳೇ ಎಲ್ಲಿಯವರೆಗೆ ಸೆಳೆಯಲೀಮ್ಮ ?" ಎಂದು ಹೇಳಿದಳು.

"ಉತ್ತರ ಸೇರಲಿಲ್ಲವೇ ?" ವಿಮಲೆಯು ಆಶ್ಚರ್ಯದಿಂದ ಕೇಳಿದಳು.

"ಅದು ಸೇರಿದರೂ ಸೇರದೇ ಇರುವುದಕ್ಕೆ ಸರಿಸಮಾನವೇ ! ನಾಲ್ಕು ಪುಟಗಳ ಕಾಗದಕ್ಕೆ ನಾಲ್ಕು ಪಙ್ಕ್ತಿ ಉತ್ತರ ?"

"ಆವಾಗ ಕೊಂಚಕೂಡ ಬಿಡುವಿರಲಿಲ್ಲ ಅತ್ತಿಗೆ. ಇತ್ತ ಖಾಯಿಲೆ ಬಿದ್ದು ಇಲ್ಲಿಗೆ ಬಂದಿದ್ದ ಅಣ್ಣನ ಶರೀರಸ್ಥಿತಿ ಕೊಂಚ

ಸುಧಾರಣೆಯಾಗುವುದಕ್ಕೆ ಬಂದಿತ್ತೂ ಅಂದರೆ, ಅತ್ತ ನಮ್ಮ ಮನೆಗೆ ಹೊಸದಾಗಿ ಬಾಡಿಗೆಗೆ ಬಂದಾತನಸ್ಥಿತಿ ಈಗಲೋ ಆಗಲೋ ಎನ್ನುವಹಾಗೆ ಆಗಿಹೋಗಿತ್ತು" ಎಂದು ವಿಮಲೆಯು ಹೇಳಿದಳು.

ಇಂದುಮತಿಗೆ ಇದರ ಒಂದಕ್ಷರವೂ ಗೊತ್ತಾಗಲಿಲ್ಲ. ಅವಳು ಬೆಪ್ಪಾಗಿ ನೋಡುತ್ತಿದ್ದಳು.

ವಿಮಲೆಯು ಅತ್ತಕಡೆ ಗಮನಿಸದೆ ಮುಂದುವರಿಸಿದಳು. "ಆ ಮಂಗಳವಾರದ ವಿಷಯಮಾತ್ರ ಯಾವತ್ತಿಗೂ ಮರೆಯುವ ಹಾಗೆಯೇ ಇಲ್ಲ. ಏಳುದಿವಸ ಆದಮೇಲೆ ನನಗೆ ಸಮಾಚಾರ ಗೊತ್ತಾಗಿ, ಹೋಗಿ ಅಣ್ಣನನ್ನ ಕರೆದುಕೊಂಡು ಬಂದೆ. ಆಮೇಲೆರಡು ದಿವಸಕ್ಕೆ ನಮಗೆಲ್ಲಾ ಗಾಬರಿಯಾಗುವಷ್ಟು ಎದೆನೋವು ಅಣ್ಣನಿಗೆ ಹೆಚ್ಚಾಗಿಬಿಟ್ಟಿತು. ಅತ್ತಕಡೆ ಅಂಬಿಕಾಬಾಬುಗಳ ಖಾಯಿಲೆಯು ಕೂಡ ಅಸಾಧ್ಯವಾಗಿ ಹೆಚ್ಚಾಗಿಬಿಟ್ಟಿತು—ಏನು ಹೇಳಲಿ, ಅತ್ತಿಗೆ, ಅವತ್ತೆಲ್ಲಾ ಶಾಖಕೊಟ್ಟು ಕೊಟ್ಟು, ಮುಲಾಮು ತಿಕ್ಕಿ ತಿಕ್ಕಿ ಮನೆಯಲ್ಲಿ ಎಲ್ಲರ ಕೈಯೂ ಬೊಬ್ಬೆಬಂದು ಹೋಯಿತು. ಅವತ್ತು ಹಗಲು ರಾತ್ರಿಯೆಲ್ಲಾ ಯಾರಿಗೂ ಸ್ನಾನ, ಊಟ, ಯಾವುದೂ ಇಲ್ಲ. ನಿಜವಾಗಿ ಅಂಬಿಕಾಬಾಬುಗಳ ಪತ್ನಿ ಮಾತ್ರ ಸತಿ ಸಾಧ್ವಿನೋಡು. ಇನ್ನೂ ಚಿಕ್ಕಹುಡುಗಿಯೇ ಆದರೂ ಬವಳ ಹುಷಾರು. ಅವಳ ಆ ಪತಿ ಸೇವೆ ಎಂತಹುದು! ಅವಳ ಪುಣ್ಯದಿಂದಲೇ ಆತ ಈಸಲ ಬದುಕಿದರು—ಇಲ್ಲದಿದ್ದರೆ ಯಾವ ಡಾಕ್ಟರು, ವೈದ್ಯರು ಏನು ಮಾಡಿದ್ದರೂ ಪ್ರಯೋಜನವೇನೂ ಆಗುತ್ತಿರಲಿಲ್ಲ."

"ಅಂಬಿಕಾಬಾಬುಯಾರು?"

"ಗೊತ್ತಿಲ್ಲ. ಅಂತೂ ಗಂಗಾನದೀ ತೀರದಲ್ಲಿಯ ಯಾವುದೋ ಗ್ರಾಮವಾಸಿಗಳು. ಈಗ ಇಲ್ಲಿಗೆ ಬಂದಿದ್ದಾರೆ. ಪಕ್ಕದಲ್ಲಿರುವ ನಮ್ಮ ಮನೆಯಲ್ಲಿಯೇ ಬಾಡಿಗೆಗೆ ಇದ್ದಾರೆ.

ಮನೆಯಲ್ಲಿ ಇನ್ನು ಬೇರೆ ಯಾರೂ ಇಲ್ಲ—ಹತ್ತಿರ ದುಡ್ಡು ಕಾಸೂ ಇಲ್ಲ—ಇರುವುದೊಂದೇ—ಅಂದರೆ ಬರೀ ಹೆಂಡತಿ–”

ಇಂದುಮತಿಯು, “ನಿಮ್ಮಣ್ಣನವರ ಶರೀರಸ್ಥಿತಿ ಬಹಳ ಕೆಟ್ಟುಹೋಗಿತ್ತೆ ?” ಎಂದು ಮಧ್ಯದಲ್ಲೇ ಪ್ರಶ್ನಿಸಿದಳು.

“ಹು. ಅವತ್ತಿನ ದಿವಸ ರಾತ್ರಿಯಂತೂ ನಾನು ನಿಜ ವಾಗಿಯೂ ಹೆದರಿಬಿಟ್ಟಿದ್ದೆ. ಒಂದು ಸಲ ಅತ್ತಕಡೆ ತಿರುಗಿ ನೋಡು, ಆ ಬಡುವಿನ ಮೇಲೆ ಔಷಧಿ ಸೀಸೆಗಳ ರಾಶಿ ಹೇಗಿದೆ ಎಂದು. ಮೂರು ಮೂರು ಜನ ಡಾಕ್ಟರು—ಅಲ್ಲ ಅತ್ತಿಗೆ, ಅಣ್ಣ ಇದನ್ನೆಲ್ಲಾ ನಿನಗೆ ಕಾಗದದಲ್ಲಿ ಬರೆಯಲಿಲ್ಲವೇ ?” ಎಂದು ವಿಮಲೆಯು ತುಟಿ ಕಚ್ಚಿಕೊಂಡು ಹೇಳಿದಳು.

ಇಂದುಮತಿಯು ಅನ್ಯಮನಸ್ಕಳಂತೆ, “ಇಲ್ಲ” ಎಂದುತ್ತರ ವಿತ್ತಳು.

“ಇಲ್ಲಿಗೆ ಬಂದ ಮೇಲೆ ಕೇಳಿರಬಹುದಲ್ಲವೆ ?”

ಇಂದುಮತಿಯು ಮೊದಲಿನಂತೆಯೇ ಉತ್ತರಕೊಟ್ಟಳು. “ಹೌದು.”

“ನಾನು ಮೊದಲನೆಯ ದಿವಸವೇ ನಿನಗೆ ತಂತಿ ಕೊಡ ಬೇಕೆಂದು ಇದ್ದೆ. ಇಲ್ಲಿಂದ ಮೇದಿನೀಪುರಕ್ಕೆ ಅಬ್ಬಬ್ಬ ಅಂದರೆ ಎರಡು ಮೂರು ಗಂಟೆಗಳ ಪ್ರಯಾಣ. ಸುಲಭವಾಗಿ ಬರ ಬಹುದಾಗಿತ್ತು. ಆದರೆ ಅಣ್ಣ ತಂತಿ ಕೊಡುವುದಕ್ಕೆ ಏನು ಮಾಡಿದರೂ ಒಪ್ಪಲಿಲ್ಲ.”. ಒಂದು ಸಲ ನಕ್ಕು ಪುನಃ ವಿಮ ಲೆಯು ಹೇಳತೊಡಗಿದಳು—“ನೀನು ಅವನನ್ನು ಏನುಮಾಡಿ ದ್ದೀಯೋ ಅದು ನಿನಗೇ ಗೊತ್ತು ; ನನಗೆ ಗೊತ್ತಿಲ್ಲ. ಇಂತಹ ಖಾಯಿಲೆ ಪರಿಸ್ಥಿತಿಯಲ್ಲಿ ನೀನೆಲ್ಲಿ ಹೆದರಿಕೊಂಡುಬಿಡುವೆಯೋ ಅನ್ನುವ ಭಯದಿಂದ ನಿನಗೆ ಈ ಸಮಾಚಾರವನ್ನು ತಿಳಿಸು ವುದಕ್ಕೆ ಯಾವರೀತಿಯಿಂದಲೂ ಅಣ್ಣ ಒಪ್ಪಲಿಲ್ಲ. ಸಧ್ಯ ದೇವರದಯಿಂದ ಅಣ್ಣನಿಗೆ ವಾಸಿಯಾಯಿತು—ಇಲ್ಲದಿದ್ದರೆ–”

"ಇಲ್ಲದಿದ್ದರೆ ಆಗುತ್ತಿದ್ದುದಾದರೂ ಏನು, ವಿಮಲಾ? ಖಾಯಿಲೆ ವಾಸಿಯಾದಮೇಲೂ ಸಹ ನಾನು ಅವರಿಗೆ ಬೇಕಾಗಲಿಲ್ಲ—ಮತ್ತು ವಾಸಿಯಾಗದೇ ಇದ್ದಿದ್ದರೂ ಸಹ ಬೇಕಾಗುತ್ತಿರಲಿಲ್ಲಾಂತ ಕಾಣಿಸುತ್ತೆ" ಎಂದು ಹೇಳಿ, ಇಂದುಮತಿಯು ಆ ಬಡುವಿನ ಬಳಿಗೆ ಹೋಗಿ ಅಲ್ಲಿನ ಶೀಸೆಗಳನ್ನು ತೆಗೆದು ತೆಗೆದು ಅದರ ಮೇಲಿನ ಲೇಬಲ್ಲುಗಳನ್ನು ಓದತೊಡಗಿದಳು.

ಆದರೆ ಏತಕ್ಕೆ ಹೀಗಾಯಿತು? ಎಂದೂ ಇಲ್ಲದ್ದು ಅವಳ ನಯನಗಳು ಅಶ್ರುಪೂರಿತವಾದವು. "ಏಕೆ ನಾನು ಅವರಿಗೆ ಏನೂ ಆಗಬೇಕಾಗಿಲ್ಲವೆ? ಸಮಾಚಾರ ಕೂಡ ತಿಳಿಸಬಾರದಂತಹ ಅದ್ಯಾವ ದೊಡ್ಡ ವಿಚಾರ ನಡೆಯಿತು. ಅದೇಕೆ ನನಗೆ ಖಾಯಿಲೆ ಸಮಾಚಾರ ತಿಳಿಸುವುದು ಉಚಿತವಲ್ಲ ಎಂದು ತಿಳಿದುಕೊಂಡರು! ಹಾಗೆ ತಿಳಿದುಕೊಳ್ಳಲು ಕಾಗದದಲ್ಲಿ ಅದೇನು ಅಂತಹ ಹೆಚ್ಚಾದ ಕಷ್ಟನಿಷ್ಠೂರಗಳನ್ನು ನಾನು ಬರೆದಿದ್ದೆ? ಚೆನ್ನಾಗಿ ವಾಸಿಯಾದಮೇಲೆ ಸಹ ಎಷ್ಟೋ ಕಾಗದಗಳಲ್ಲಿ ಎಷ್ಟೋ ಸಮಾಚಾರಗಳನ್ನು ಬರೆದಿದ್ದರು. ಆದರೆ ಅವರ ವಿಚಾರವನ್ನು ಮಾತ್ರ ಬರೆಯಲು ಮರೆತರು—ಅಷ್ಟೇ ಅಲ್ಲ. ಇಲ್ಲಿಗೆ ಬಂದ ಮೂರು ದಿವಸಗಳಾದರೂ ಸಹ ಇನ್ನೂ ಹೇಳಬೇಕೆಂದು ಮನಸ್ಸಿಗೆ ಬರಲಿಲ್ಲವೇ?"

ಇಂದುಮತಿಯ ಗದ್ಗದ ಸ್ವರವು ವಿಮಲೆಯನ್ನು ಎಚ್ಚರಿಸಿತು—"ಈಗ ಬರೀ ಸೀಸೆಗಳನ್ನು ತೆಗೆದು ಲೇಬಲ್ಲುಗಳನ್ನು ನೋಡಿದರೆ ಪ್ರಯೋಜನವೇನು ಅತ್ತಿಗೆ? ನಾವೆಷ್ಟೇ ಒತ್ತಾಯಪಡಿಸಿದರೂ ಅವರು ಎಂದಿಗೂ ಸುಳ್ಳು ಔಷಧಿಕೊಡುವುದಿಲ್ಲ. ಬಾ, ನಿನಗೋಸ್ಕರ ಟೀ ಸಿದ್ಧವಾಗಿದೆ" ಎಂದಳು ವಿಮಲಾ.

"ನಡಿ" ಎಂದು ಇಂದುಮತಿಯು ಸುಮ್ಮನೆ ಕಣ್ಣೀರನ್ನೊರೆಸಿಕೊಂಡು ವಿಮಲೆಯ ಬಳಿ ಬಂದು ನಿಂತುಕೊಂಡಳು.

ಟೀ ಕುಡಿದಾದಮೇಲೆ, ಇಂದುಮತಿಗೆ ನೋವುಂಟುಮಾಡ ಲೆಂದೋ ಅಥವಾ ಬೇರೆ ಯಾವ ಉದ್ದೇಶದಿಂದಲೋ ಗೊತ್ತಿಲ್ಲ ವಿಮಲೆಯು ಹೇಳತೊಡಗಿದಳು—"ಅಂತೂ ಎಂತಹ ವಿಚಿತ್ರ ಸಮಾಚಾರ ಅತ್ತಿಗೆ! ಒಂದೇ ಮನೆಯಲ್ಲಿ ಇಬ್ಬರು ರೋಗಿಗಳು. ಆದರೆ ಆ ಇಬ್ಬರಲ್ಲಿ ಎಷ್ಟು ಅದ್ಭುತವಾದ ಭಿನ್ನ ಭಿನ್ನ ವ್ಯವಸ್ಥೆ. ಗಳು. ನಿನಗೆ ಹೆದರಿಕೆಯಾದೀತು, ನಿನ್ನ ಶರೀರಸ್ಥಿತಿ ಕೆಟ್ಟು ಹೋದೀತು ಎಂದು ಅಂತ್ಯಾವಸ್ಥೆಗೆ ಬಂದಿದ್ದರೂ ಕೂಡ ನಿನಗೆ ಸಮಾಚಾರ ತಿಳಿಸದೆ ಇರುವ ಅಣ್ಣ ಒಂದು ಕಡೆ—ಇನ್ನೊಂದು ಕಡೆ ಕಣ್ಣು ಮುಚ್ಚಿ ತೆರೆಯುವಷ್ಟು ಹೊತ್ತು ಕೂಡ ತನ್ನೆದುರಿ ನಿಂದ ಹೆಂಡತಿಯನ್ನು ಕದಲಲು ಬಿಡದಿದ್ದ ಅಂಬಿಕಾಬಾಬು! ತನ್ನ ಹೆಂಡತಿಯ ಕೈಯಿಂದಲ್ಲದೆ ಬೇರೆ ಯಾರ ಕೈಯಿಂದಲೂ ವಿಶ್ವಾಸದಿಂದ ಔಷಧಿಯನ್ನು ಕೂಡ ಕುಡಿಯಲೊಪ್ಪದಷ್ಟು ಭಯವಿತ್ತು ಆತನಿಗೆ. ಆಕೆಯು ಕಣ್ಮರೆಯಾದೆಳೆಂದರೆ ತಾನು ಸತ್ತೇಹೋಗುವೆನೆಂಬ ಭಯ ಆತನಿಗಿತ್ತು. ಹೀಗೆಲ್ಲಾದರೂ ನೀನು ಕೇಳಿದ್ದೀಯಾ? ನೀವೆಲ್ಲರೂ ನಮ್ಮವರನ್ನು ಹಾಸ್ಯ ಮಾಡುತ್ತೀರಿ. ಆದರೆ ಅಂಬಿಕಾಬಾಬುಗಳ ಪತ್ನಿಯು ಮಾತ್ರ ಎಲ್ಲರನ್ನೂ ಮೀರಿಸಿದ್ದಾರೆ. ಹಗಲು ರಾತ್ರಿ ದುಡಿದೂ ದುಡಿದೂ ಆಕೆಯ ಸ್ಥಿತಿ ಜೀವಚ್ಛವದಂತೆ ಆಗಿದೆ."

"ಹೂಂ" ಎಂದು ಇಂದುಮತಿಯು ಎದ್ದು ನಿಂತಳು. "ಇನ್ನೊಂದಾದರೂ ಒಂದು ದಿವಸ ಬಂದು ನಿನ್ನ ಸತಿ ಸಾಧ್ವಿಯ ಕೂಡ ಮಾತುಕತೆ ಆಡುತ್ತೇನೆ. ಇವೊತ್ತು ಹೊತ್ತಾಯಿತು. ಅಗೋ ಗಾಡಿ ಬಂತು; ಹೋಗುತ್ತೇನೆ."

"ಸರಿ. ಹಾಗಾದರೆ ನಾಳೆ ಒಂದು ಸಲ ಖಂಡಿತ ಬರ ಬೇಕು! ಆಕೆಯ ಸಂಗಡ ಮಾತುಕತೆಯಾಡಿದರೆ ನೀನು ನಿಜ ವಾಗಿಯೂ ಸುಖಿಯಾಗುತ್ತೀಯೆ."

"ಏನಾದರೂ ಕೊಂಚ ಕಲಿತುಕೊಳ್ಳಲು ಸಾಧ್ಯವೇನೋ

ನೋಡೋಣವಂತೆ” ಎಂದು ಹೇಳಿ ಇಂದುಮತಿಯು ಮುಖ ಊದಿಸಿಕೊಂಡು ಹೋಗಿ ಗಾಡಿಯಲ್ಲಿ ಕುಳಿತಳು. ಅವಳ ಮನಸ್ಸಿನಲ್ಲಿ ಪತಿಯ ಮಂಗಳಾಕಾಂಕ್ಷೆಯ ವಿಚಾರವಾಗಿ ಇದು ವರೆಗಿದ್ದುದನ್ನು ಎತ್ತಿ ಆಡುವಂತೆ ಅಂಬಿಕಾಬಾಬುಗಳ ಹುಚ್ಚು ತನವು ಅವಳನ್ನು ದಾರಿಯುದ್ದಕ್ಕೂ ಚುಚ್ಚುತ್ತಾ ನಾಚಿಸುತ್ತಿತ್ತು.

೫

ಎರಡು ಮೂರು ದಿವಸಗಳು ಕಳೆದಮೇಲೆ ಹೀಗೆಯೆ ಮಾತ ನಾಡುತ್ತ ಮಾತನಾಡುತ್ತ ಇಂದುಮತಿಯು ಇದ್ದಕ್ಕಿದ್ದಂತೆಯೇ ಬಹು ಕೋಪದಿಂದ “ನಿಜವನ್ನು ಹೇಳುತ್ತೇನೆಂದು ಕೋಪಮಾಡಿ ಕೊಳ್ಳುವುದಿಲ್ಲಾಂತ ಹೇಳಿದರೆ ಹೇಳುತ್ತೇನೆ, ವಿಮಲ, ಮದುವೆ ಮಾಡಿಕೊಂಡಿದ್ದು ನಿಮ್ಮಣ್ಣನಿಗಾಗಲಿ, ಅಂಬಿಕಾಬಾಬುಗಳಿ ಗಾಗಲಿ ಉಚಿತವಲ್ಲ” ಎಂದು ಹೇಳಿದಳು,

“ ಏತಕ್ಕೆ ?” ಎಂದು ವಿಮಲೆಯು ಕೇಳಿದಳು.

“ಸಂಸಾರವನ್ನು ತೂಗಿಸುವ ಶಕ್ತಿಯು ಯಾವಾಗ ಇಲ್ಲವೋ ಆಗ ಹೀಗೆ ಮಾಡುವುದು ದೊಡ್ಡ ಪಾಪ.”

ಉತ್ತರವನ್ನು ಕೇಳಿ ವಿಮಲೆಯು ಮರ್ಮಾಹತಳಾದಳು. ಅವಳು ಇಂದುಮತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ಕೊಂಚ ಹೊತ್ತಾದಮೇಲೆ, “ಅಂಬಿಕಾಬಾಬುಗಳು ತುಂಬ ಅನ್ಯಾಯಮಾಡಿದ್ದಾರೆಂದು ಹೇಳಬಹುದು. ಆದರೆ ಇದರಿಂದ ಆತನ ಹೆಂಡತಿಯು ತನ್ನ ಕರ್ತವ್ಯವನ್ನು ಮಾಡಬಾರದೇ ? ಸಾಯುವವರೆಗೂ ಹೆಂಗಸಾದವಳು ಪತಿಸೇವೆಯನ್ನು ಮಾಡಿಯೇ ತೀರಬೇಕು.” ಎಂದು ವಿಮಲೆಯು ಹೇಳಿದಳು.

“ಏತಕ್ಕೆ ಮಾಡಿಯೇ ತೀರಬೇಕು ? ಗಂಡಸರು ಅನ್ಯಾಯ ವನ್ನು ಮಾಡುತ್ತಾರೆ. ಯಾವ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲವೋ ಅದನ್ನೇ ಮಾಡುತ್ತಾರೆ. ಆದರೆ

ಅದರ ಫಲವನ್ನು ಮಾತ್ರ ನಾವು ಅನುಭವಿಸಬೇಕೇನು? ನೀನು ಇಂಗ್ಲಿಷ್ ಓದಲಿಲ್ಲ. ಅದೂ ಅಲ್ಲದೆ ಬೇರೆ ಸಮಾಜಗಳ ರೀತಿ, ನೀತಿ, ನಡತೆಗಳ ತಿಳಿವಳಿಕೆ ನಿನಗಿಲ್ಲ. ಆ ವಿಚಾರಗಳು ನಿನಗೆ ಗೊತ್ತಿದ್ದಿದ್ದರೆ ಕರ್ತವ್ಯಪಾಲನೆಯು ನಡೆಯಬೇಕಾದದ್ದು ಒಂದೇ ಭಾಗದಿಂದಲ್ಲ ಅನ್ನುವುದನ್ನು ತಿಳಿಯಪಡಿಸುತ್ತಿದ್ದೆ. ಆ ಕರ್ತವ್ಯ ಪಾಲನೆಯು ಇಬ್ಬರಿಂದಲೂ ಆಗಬೇಕು. ಇಲ್ಲದೆ ಹೋದರೆ ಯಾವ ಪಾಲನೆಯೂ ಇಲ್ಲ. ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಸಹ ಗಂಡಸರು ನಮಗೆ ಅವಕಾಶವನ್ನು ಕೊಡುವುದೇ ಇಲ್ಲ—ಇದಕ್ಕೆ ಕಾರಣವೇನು ಗೊತ್ತೆ? ಅಂಬಿಕಾಬಾಬುಗಳ ಹೆಂಡತಿಯ ಹಾಗೆ, ಜೀವದ ಪರಿವೆಬಿಟ್ಟು ತಮ್ಮ ಸೇವೆ ಮಾಡುತ್ತಾ ಇರುತ್ತೇವೆಂದು.''

ವಿಮಲೆಯು ಒಂದು ಕ್ಷಣ ಹಾಗೆಯೇ ನೋಡುತ್ತಿದ್ದು ಮತ್ತೆ, "ಇಲ್ಲದೆ ಹೋಗಿದ್ದರೆ ನಾವು ಸೇವೆಯನ್ನು ಮಾಡುತ್ತಲೇ ಇರಲಿಲ್ಲವೇ? ಅತ್ತಿಗೆ! ಸೇವೆಮಾಡುವುದು ಸ್ತ್ರೀಯರಿಗೆ ಅತ್ಯಂತ ದುಃಖದಾಯಕವಾದ ಕೆಲಸವೆಂದು ತಿಳಿದುಕೊಂಡಿದ್ದೀಯಾ? ಅಂಬಿಕಾಬಾಬುಗಳ ಹೆಂಡತಿಯ ಹೊರಗಿನ ಕ್ಲೇಶವು ಮಾತ್ರ ನಿನಗೆ ಕಂಡುಬರುತ್ತದೆ; ಆದರೆ ಆಕೆಯ ಅಂತರ್ಯದ ಆನಂದವೆಷ್ಟೆಂಬುದನ್ನೂ ತಿಳಿದುಕೊಳ್ಳಬಲ್ಲೆಯಾ?'' ಎಂದಳು.

''ನನಗೆ ತಿಳಿದುಕೊಳ್ಳುವ ಇಷ್ಟವಿಲ್ಲ''

''ಪತಿಯ ಪ್ರೇಮವೇನೆಂಬುದನ್ನು ಸಹ ತಿಳಿದುಕೊಳ್ಳಬೇಕೆಂಬ ಇಷ್ಟವಿಲ್ಲವೆಂದು ಕಾಣುತ್ತದೆ.''

''ಇಲ್ಲ, ವಿಮಲ! ಅದೂ ನಿಸ್ಸಾರವಾಗಿದೆ. ಅದರ ಬದಲು ಪ್ರೇಮ ಕಡಿಮೆಮಾಡಿ ನನ್ನ ಕರ್ತವ್ಯವನ್ನು ಮಾಡುವುದಕ್ಕೆ ಸಾಧ್ಯವಾದರೆ ನಾನು ಗೆದ್ದಹಾಗೆ.''

ವಿಮಲೆಯು ಇಷ್ಟುಹೊತ್ತೂ ನಿಂತಿದ್ದಳು. ನಿಟ್ಟುಸಿರುಬಿಟ್ಟು ನಿಧಾನವಾಗಿ ಕುಳಿತುಬಿಟ್ಟಳು. "ಅತ್ತಿಗೆ! ಹೀಗೆಯೇ

ಹಿಂದೊಂದು ಸಲ ಕೂಡ ನೀನು ಹೇಳಿದ್ದೆ. ಆಗಲೂ ನನಗೆ ಅರ್ಥವಾಗಲಿಲ್ಲ ; ಈಗಲೂ ಸಹ ಅರ್ಥವಾಗಲಿಲ್ಲ,–ನಮ್ಮಣ್ಣ ತನ್ನ ಯಾವ ಕರ್ತವ್ಯಪಾಲನೆಯನ್ನು ಮಾಡಿಲ್ಲವೆನ್ನುವುದು. ಅದಿನ್ಯಾವ ಅಂತಹ ಕರ್ತವ್ಯವೋ ನಿನಗೇ ಗೊತ್ತು ! ಅನೇಕ ಪುಸ್ತಕಗಳನ್ನು ಓದಿದ್ದೀಯೆ, ಅನೇಕ ದೇಶಗಳ ಪದ್ಧತಿ ವಿಚಾರಗಳ ಮಾಹಿತಿಯೂ ಚೆನ್ನಾಗಿದೆ—ನಿನ್ನ ಜೊತೆಯಲ್ಲಿ ತರ್ಕಿಸುವುದು ನನ್ನಂತಹವಳಿಗೆ ಶೋಭಿಸುವುದಿಲ್ಲ. ಪತಿಯಾದವನು ನ್ಯಾಯವನ್ನೇ ಮಾಡಲಿ, ಅಥವಾ ಅನ್ಯಾಯವನ್ನೇ ಮಾಡಲಿ, ಪತಿಪ್ರೇಮವನ್ನು ಉಪೇಕ್ಷೆಮಾಡುವುದಾಗಲಿ, ಅಥವಾ ಅವರೊಡನೆ ಸ್ಪರ್ಧಿಸುವುದಾಗಲಿ ಯಾವ ದೇಶದ ಸ್ತ್ರೀಯರಲ್ಲಿಯೂ ಇಲ್ಲವೆಂಬ ದೃಢವಾದ ವಿಶ್ವಾಸ ನನಗಿದೆ. ನನಗಂತೂ ಪತಿಪ್ರೇಮ ಕಳೆದುಕೊಳ್ಳುವುದಕ್ಕಿಂತಲೂ ಸಾಯುವುದು ಸಾವಿರಪಾಲು ಉತ್ತಮವೆಂದು ತೋರುತ್ತದೆ. ಆ ಪ್ರೇಮವು ಕಳೆದುಹೋದಮೇಲೂ ಸಹ ಜೀವಿಸಿರುವುದು ಬರೀ ವಿಡಂಬನೆ, ಅಷ್ಟೆ !''

''ನಾನು ಇದನ್ನೊಪ್ಪುವುದಿಲ್ಲ.''

''ಖಂಡಿತ ಒಪ್ಪುತ್ತಿ'' ಎಂದು ವಿಮಲೆಯು ನಗತೊಡಗಿದಳು. ಇದೆಲ್ಲ ಬರೀ ಹಾಸ್ಯವೆಂಬ ಭಾವನೆಯು ಅವಳಲ್ಲಿ ಇದ್ದಕ್ಕಿದ್ದಂತೆಯೇ ಉತ್ಪನ್ನವಾಯಿತು. ಇಂತಹ ಮಾತುಗಳು ಹೆಂಗಸಿನ ಬಾಯಿಂದ ಬಂದರೆ ಅದು ಪರಿಹಾಸ್ಯವಲ್ಲದೆ ಬೇರೇನು ! ಪುನಃ ಅವಳು, ''ನೋಡು ಅತ್ತಿಗೆ ಈಗ ನನ್ನ ಮುಂದೆ ನಿನ್ನ ಬಾಯಲ್ಲಿ ಏನೇನು ಬಂತೋ, ಏನೇನು ಹೇಳಿದೆಯೋ ಅದನ್ನೆಲ್ಲ ಹೋಗಿ ಸದ್ಯ ಅಣ್ಣನ ಮುಂದೆಯೂ ಹೇಳಿಬಿಡಬೇಡ. ಹೇಳಿ ನಿನ್ನ ಬುದ್ಧಿವಂತಿಕೆ ಪ್ರದರ್ಶಿಸುವುದಕ್ಕೆ ಹೋಗಬೇಡವೆಂದು ಸಾರಿಸಾರಿ ಹೇಳುತ್ತೇನೆ. ಏತಕ್ಕೆಂದರೆ, ಅವರು ಗಂಡಸರು. ಎಷ್ಟು ಬುದ್ಧಿವಂತರಾದರೆ ತಾನೆ

ಏನು ; ಅಕಸ್ಮಾತ್—'' ಎಂದು ಹೇಳಿದಳು.

''ಅಕಸ್ಮಾತ್ ಏನು ?''

"ಹುಡುಗಾಟ ಅನ್ನುವುದು ಅವರಿಗೆ ಗೊತ್ತಾಗುವುದಿಲ್ಲ."

''ಅವರ ಕೆಲಸವೇ ಅದು. ಅದಕ್ಕಾಗಿ ನಾನೇನು ಚಿಂತಿಸುವುದಿಲ್ಲ.''

''ಆದರೆ ನನ್ನಿಂದ ಮಾತ್ರ ಚಿಂತಿಸದೆ ಇರುವುದಕ್ಕೆ ಸಾಧ್ಯವಾಗುವುದಿಲ್ಲ ಅತ್ತಿಗೆ."

ಇಂದುಮತಿಯು ಬಲವಂತದ ನಗೆ ನಕ್ಕು, ''ಏತಕ್ಕೋ ?" ಎಂದು ಕೇಳಿದಳು.

ವಿಮಲೆಯು ಕೊಂಚ ಯೋಚಿಸಿ, ವಿಚಾರಮಾಡಿ, ''ಕೋಪ ಮಾಡಿಕೊಳ್ಳಬೇಡ, ಅತ್ತಿಗೆ! ನೋಡು, ಅಣ್ಣನಿಗೆ ಖಾಯಿಲೆಯಾಗಿದ್ದ ಸಮಯದಲ್ಲಿ ಕೆಲವೊಂದು ವೇಳೆ ನಿನ್ನನ್ನು ನೋಡಬೇಕೆಂದು ಹುಚ್ಚನಾಗಿದ್ದನೆಂದು ನನಗೆ ಗೊತ್ತಾಯಿತು—ಕಾಲಿಗೆ ಮುಳ್ಳು ಚುಚ್ಚಿದರೆ ಅಲ್ಲೇ, ಆಗಲೇ ಕಣ್ಣು ಬಿಟ್ಟು ನೋಡು ಅಂತ ಹೇಳುತ್ತಾರಲ್ಲ ಹಾಗೆ—ಆದರೆ ಈಗ ಆ ಭಾವ ಅವನಲ್ಲಿ ಉಳಿದಿಲ್ಲ'' ಎಂದು ಹೇಳಿದಳು.

ಇಂದುಮತಿಯ ಮುಖವು ಒಡನೆಯೇ ಮಸಿಬಳಿದಂತೆ ಕಪ್ಪಿಟ್ಟಿತು. ಆ ಮೇಲೆ ಅವಳು ಬಲವಂತದ ಒಣ ನಗುವಿನಿಂದ, "ನಿನಗೆ ಸಹಸ್ರ ಧನ್ಯವಾದಗಳು, ವಿಮಲ, ನಿಮ್ಮಣ್ಣನಿಗೆ ಹೇಳಿಬಿಡು. ನಾನಿತ್ತಕಡೆ ಕಣ್ಣೆತ್ತಿ ಸಹ ನೋಡುವುದಿಲ್ಲ. ಅಲ್ಲದೆ ನನ್ನ ಒಳ್ಳೆಯದನ್ನು, ಕೆಟ್ಟದ್ದನ್ನು ಸುಧಾರಿಸಿಕೊಳ್ಳುವುದಕ್ಕೆ ನನಗೂ ಗೊತ್ತಿದೆ ; ನನಗಾಗಿ, ನಾನು ಬೇರೊಬ್ಬರಿಗೆ ಕಣ್ಣು ಕೆಂಪಗೆ ಮಾಡುವ ಅವಶ್ಯಕತೆ ಇಲ್ಲವೆಂದು ಸಹ ನನಗೆ ಚೆನ್ನಾಗಿ ಗೊತ್ತಿದೆ. ಅದನ್ನು ನೀನೂ ಚೆನ್ನಾಗಿ ತಿಳಿದುಕೋ'' ಎಂದಳು.

* * *

ಮನೆಗೆ ಹಿಂತಿರುಗಿ ಇಂದುಮತಿಯು ಪತಿಯ ಕೊಠಡಿಯನ್ನು ಪ್ರವೇಶಿಸುತ್ತಲೇ, "ನಾನು ಮೇದಿನೀಪುರಕ್ಕೆ ಹೊರಟು ಹೋದಮೇಲೆ ನಿಮಗೆ ಖಾಯಿಲೆ ಆಗಿತ್ತೇನು?" ಎಂದು ಕೇಳಿದಳು.

ನರೇಂದ್ರನು ಟೇಬಲ್ಲಿನಿಂದ ಮುಖವೆತ್ತಿ ನಿಧಾನವಾಗಿ "ಇಲ್ಲ—ಅಂತಹ ಖಾಯಿಲೆಯೇನೂ ಆಗಿರಲಿಲ್ಲ—ಅದೇ ಕೊಂಚ ಎದೆನೋವು" ಎಂದು ಹೇಳಿದನು.

"ಖರ್ಚು ಉಳಿಸಬೇಕೆಂದು ತಂಗಿಯ ಮನೆಗೆ ಸವಾರಿ ದಯಮಾಡಿಸಿತ್ತೇನು?" ಹೆಂಡತಿಯ ಈ ಅತ್ಯಂತ ಕಟುವಾಕ್ಯದಿಂದ ನೊಂದು ಟೇಬಲ್ ಮೇಲೆ ತಲೆತಗ್ಗಿಸಿ ಒಂದು ಕ್ಷಣ ಸುಮ್ಮನಿದ್ದು ಮೃದುಸ್ವರದಲ್ಲಿ, "ವಿಮಲೆಯು ಬಂದು ಕರೆದುಕೊಂಡು ಹೋಗಿದ್ದಳು" ಎಂದು ಹೇಳಿದನು.

"ಆದರೆ ನನಗೇನಾದರೂ ಸಮಾಚಾರ ತಿಳಿದ್ದಿದ್ದರೆ, ಅಸಮರ್ಥರಿಗಾಗಿ, ಆಸ್ಪತ್ರೆಗಳನ್ನು ಕಟ್ಟಿದ್ದಾರೆ; ಇತರರಿಗೆ ಭಾರವಾಗದೆ ಅಂತಹವರು ಆಸ್ಪತ್ರೆಗೇ ಹೋಗಬೇಕೆಂದು ಸ್ಪಷ್ಟವಾಗಿ ಹೇಳಿಬಿಡುತ್ತಿದ್ದೆ."

ಈಗ ಮಾತ್ರ ನರೇಂದ್ರನು ಮುಖವನ್ನೆತ್ತಲೂ ಇಲ್ಲ; ಏನೊಂದು ಉತ್ತರವನ್ನೂ ಕೊಡಲಿಲ್ಲ.

ಇಂದುಮತಿಯು ರಭಸದಿಂದ ಪರದೆಯನ್ನು ಓರೆಮಾಡಿಕೊಂಡು ಹೊರಹೊರಟಳು. ಹೋಗುವ ರಭಸದಲ್ಲಿ ಒಂದು ಟೀಪಾಯಿಯು ಫ್ಲವರ್‌ವೇಸ್ ಸಮೇತ ಉರುಳಿಬಿತ್ತು. ಅವಳು ಹಿಂತಿರುಗಿ ಸಹ ನೋಡಲಿಲ್ಲ.

ಐದಾರು ನಿಮಿಷಗಳ ನಂತರ ಪುನಃ ಅದೇ ರೀತಿ ರಭಸದಿಂದ ಪರದೆಯನ್ನು ಓರೆಮಾಡಿಕೊಂಡು ಒಳಕ್ಕೆ ಬಂದು, "ನನಗೆ ಸಮಾಚಾರವನ್ನು ತಿಳಿಸಬೇಕೆಂದು ವಿಮಲೆಯು ಇಷ್ಟಪಟ್ಟದ್ದಕ್ಕೆ ನೀವು ಬೇಡವೆಂದು ತಡೆದದ್ದು ಏತಕ್ಕೆ? ಬಂದುಬಿಟು

ಔಷಧಿ ಜೊತೆಯಲ್ಲಿ ವಿಷ ಬೆರೆಸಿಕೊಟ್ಟುಬಿಟ್ಟೇನೆಂದು ಯೋಚಿಸಿ ದಿರೀಂತ ಕಾಣುತ್ತದೆಯಲ್ಲವೇ ?''

ನರೇಂದ್ರನು ಮುಖವೆತ್ತಿ ಹೇಳಿದ—"ಇಲ್ಲ. ಹಾಗೇನೂ ಯೋಚಿಸಲಿಲ್ಲ ; ನಿನ್ನ ಶರೀರಸ್ಥಿತಿ ಚೆನ್ನಾಗಿರಲಿಲ್ಲ—''

"ಚೆನ್ನಾಗಿಯೇ ಇತ್ತು. ಒಂದು ವೇಳೆ ಸಮಾಚಾರ ಗೊತ್ತಾದಮೇಲೂ ಸಹ ನಾನು ಬರುತ್ತಾ ಇರಲಿಲ್ಲಾ ಅನ್ನು ವುದು ಖಂಡಿತ. ಖಾಯಿಲೆಯಿಂದ ಸಾಯುತ್ತಾ ಇದ್ದೇನೆಂದು ನಾನೇನು ನಿಮಗೆ ಕಾಗದ ಬರೆದಿರಲಿಲ್ಲವಲ್ಲ. ವ್ಯರ್ಥವಾಗಿ ಸುಳ್ಳು ಹೇಳಿ ವಿಮಲೆಯನ್ನು ತಡೆಯಬೇಕಾದ ಅವಶ್ಯಕತೆ ಏನೂ ಇರಲಿಲ್ಲವಲ್ಲ" ಎಂದು ಹೇಳಿ, ಹೇಗೆ ಬಂದಿದ್ದಳೋ ಹಾಗೆಯೇ ಹೊರಟುಹೋದಳು. ನರೇಂದ್ರನೂ ಸಹ ಮೊದಲಿ ನಂತೆಯೇ ಟೇಬಲ್ ಮೇಲೆ ತಲೆತಗ್ಗಿಸಿದನು—ಆದರೆ ಅವನ ಬರವಣಿಗೆಯೆಲ್ಲಾ ಕಣ್ಣುಮುಂದೆ ಮಂಜುಮಂಜಾಗಿ ಏಕಾ ಕಾರವಾಗಿ ಕಂಡಿತು.

* * *

ಇಂದುಮತಿಯು ಪರದೆಯನ್ನು ಓರೆಮಾಡಿ, ''ಗನನಬಾಬು ಗಳ ಮನೆಯಲ್ಲಿ ನಮ್ಮ ಯಜಮಾನರಿಗೆ ಔಷಧಿ ಕೊಟ್ಟವರು ತಾವೇ ಏನು ?" ಎಂದು ಡಾಕ್ಟರನ್ನು ಕೇಳಿದಳು. ಆ ವೃದ್ಧ ಡಾಕ್ಟರವರು ಮುಖವೆತ್ತಿ, ಉದ್ವೇಗದಿಂದ ಮಲಿನವಾದ ಇಂದು ಮತಿಯ ಮುಖವನ್ನು ನೋಡಿ ತಲೆಹಾಕಿ, ''ಹುಂ'' ಎಂದು ಒಪ್ಪಿಕೊಂಡರು.

"ಆದರೆ ಅವರಿಗೆ ಸಂಪೂರ್ಣವಾಗಿ ವಾಸಿಯಾದಂತೆ ಕಾಣು ವುದಿಲ್ಲ. ನೋಡಿ, ಇಗೋ ಇಲ್ಲಿದೆ ನಿಮ್ಮ ಫೀಜು—ಇವತ್ತು ಒಂದು ಸಲ ಮಿತ್ರಭಾವದಿಂದ ಅವರನ್ನು ನೋಡಿದರೆ ತುಂಬ ಉಪಕಾರಮಾಡಿದಂತಾಗುತ್ತದೆ'' ಎಂದು ಇಂದುಮತಿಯು ಹೇಳಿದಳು.

ಡಾಕ್ಟರವರು ಕೊಂಚ ವಿಸ್ಮಿತರಾದರು. ಇದನ್ನು ಇಂದು ಮತಿಯು ಕಂಡುಕೊಂಡು "ಅವರ ಸ್ವಭಾವವೇ ಹಾಗೆ. ಅವರಿಗೆ ಔಷಧೋಪಚಾರ ಬೇಕಿಲ್ಲ. ಔಷಧಿಯ ಚೀಟಿಯನ್ನು ಗುಟ್ಟಾಗಿ ನನಗೆ ಕೊಟ್ಟು, ಅವರಿಗೆ ಸ್ವಲ್ಪ ಔಷಧಿಯ ಅವಶ್ಯಕತೆಯ ವಿಚಾರ ತಿಳಿಯಹೇಳಿ" ಎಂದು ಹೇಳಿದಳು.

ಡಾಕ್ಟರವರು ಇದಕ್ಕೆ ಒಪ್ಪಿಕೊಂಡು ಹೊರಟುಹೋದರು.

"ಅಮ್ಮಾ, ಅಕ್ಕಸಾಲೆ ವಲ್ಲಭ ಬಂದಿದ್ದಾನೆ" ಎಂದು ರಾಮಟಹಲನು ಬಂದು ಹೇಳಿದನು.

"ಬಂದನೇ? ಇಲ್ಲಿಗೆ ಕರೆದುಕೊಂಡು ಬಾ"

"ವಲ್ಲಭ, ಕೊಂಚ ಕೆಲಸ ಇತ್ತು. ಅದಕ್ಕಾಗಿಯೆ ನಿನ್ನನ್ನು ಕರೆಸಿದ್ದು. ನೀನು ಬಹಳ ವಿಶ್ವಾಸಿ. ಈ ಬಳೆಗಳನ್ನು ಮಾರಬೇಕು. ಬಹಳ ಹಳೆಯಕಾಲದ ತರಹ ಬಳೆಗಳು. ಈಗಿನಕಾಲದಲ್ಲಿ ಇದನ್ನು ತೊಟ್ಟುಕೊಳ್ಳುವುದಕ್ಕೆ ಮನಸ್ಸು ಒಪ್ಪುವುದಿಲ್ಲ. ಮಾರಿ ಬಂದ ದುಡ್ಡಿನಿಂದ ಹೊಸ ಮಾದರಿಯ ಬಳೆಗನ್ನು ಳಕೊಂಡುಕೊಳ್ಳಬೇಕೆಂದು ಮನಸ್ಸಿನಲ್ಲಿದೆ."

"ಒಳ್ಳೆಯದರಮ್ಮ ಮಾರುತ್ತೇನೆ."

"ತಕ್ಕಡಿ ತಂದಿದ್ದೀಯಲ್ಲ? ತೂಗಿನೋಡು ಎಷ್ಟಿದೇಂತ. ಹಣಮಾತ್ರ ನನಗೆ ನಾಳೆಯೇ ಬೇಕು. ನಿಧಾನವಾದರೆ ತಡೆಯುವ ಹಾಗಿಲ್ಲ."

"ಆಗಲೀಮ್ಮ ಕೊಟ್ಟುಬಿಡುತ್ತೇನೆ."

"ಇದು ಇನ್ನೂ ಹೊಸಾ ಹೊಸ ಮಾಲುಕಣ್ರಮ್ಮ. ಮಾರುವುದರಿಂದ ಏನಾದರೂ ಕೊಂಚ ನಷ್ಟ ಆಗೇ ಆಗುತ್ತದೆ" ಎಂದು ಕೈಯಲ್ಲಿ ಬಳೆಗಳನ್ನು ಹಿಡಿದುಕೊಂಡು ವಲ್ಲಭನು ಹೇಳಿದನು.

"ಆಗಲೇಳು. ನೋಡು, ನನಗೆ ಯಾಕೋ ಈ ಮಾದರಿ ಮನಸ್ಸಿಗೊಪ್ಪಲಿಲ್ಲ. ಆದರೆ, ವಲ್ಲಭ, ಇದರ ವಿಚಾರ ಮಾತ್ರ

ಯಜಮಾನರ ಹತ್ತಿರ ಏನೂ ಹೇಳಕೂಡದು. ಗೊತ್ತಾಯಿತೋ ?"

ಮನೆಯ ಮಾಲೀಕರಿಗೆ ತಿಳಿಸದಂತೆ ಮುಚ್ಚಿಟ್ಟು ಒಡವೆ ವಸ್ತುಗಳನ್ನು ಮಾರುವ, ಅಥವಾ ಕೊಳ್ಳುವ ಪ್ರಕರಣವು ವಲ್ಲಭನಿಗೇನೂ ಹೊಸದಾದುದಾಗಿರಲಿಲ್ಲ. ಅವನು ಕೊಂಚ ನಕ್ಕು ಬಳೆಗಳನ್ನು ತೆಗೆದುಕೊಂಡು ಹೊರಟುಹೋದನು.

## ೬

"ಡಾಕ್ಟರೇ ಐದಾರು ಶೀಷೆ ಔಷಧಿಯನ್ನು ಕುಡಿದುದಾಯಿತು. ಆದರೂ ಅವರ ಎದೆನೋವು ಮಾತ್ರ ಹೋಗಲಿಲ್ಲ."

"ಹೋಗಲಿಲ್ಲವೇ ? ಅವರೇನು ಹೇಳಲಿಲ್ಲವಲ್ಲ."

"ನಿಮಗೆ ಗೊತ್ತೇ ಇದೆ. ಅವರ ಸ್ವಭಾವವೇ ಹಾಗೆ. ಆದರೆ ಅವರ ಖಾಯಿಲೆ ವಾಸಿಯಾಗಿಲ್ಲಾಂತ ನನಗೆ ಖಂಡಿತ ಗೊತ್ತು. ಅಲ್ಲದೆ ಶರೀರ ಸ್ಥಿತಿ ಕೂಡ ಸುಧಾರಿಸಿಲ್ಲ."

ಡಾಕ್ಟರು ಯೋಚಿಸಿ, "ನೋಡಿ ನನಗೂ ಆಗಿಂದಾಗ್ಗೆ ಸಂದೇಹ ಉತ್ಪನ್ನವಾಗುತ್ತದೆ ; ಬರೀ ಔಷಧಿಯಿಂದ ಏನೂ ಆಗಲಾರದೂಂತ. ಒಂದು ಸಲ ನೀರು—ಹವಾ ಬದಲಾಯಿಸಬೇಕಾದುದು ಅತ್ಯಾವಶ್ಯಕವಾಗಿದೆ" ಎಂದು ಹೇಳಿದರು.

"ಹಾಗೆಂದು ಅವರ ಹತ್ತಿರ ಏತಕ್ಕೆ ಹೇಳುವುದಿಲ್ಲ?"

"ಒಂದು ದಿವಸ ಹೇಳಿದೆ. ಆದರೆ ಅವರು ಇದರ ಅವಶ್ಯಕತೆಯನ್ನು ಒಪ್ಪಿಕೊಳ್ಳುವುದಿಲ್ಲ ?"

"ಅವರು ಒಪ್ಪದೆ ಇದ್ದರೆ ಏನಾಗುತ್ತೆ ? ನೀವು ಡಾಕ್ಟರು. ನೀವು ಏನನ್ನು ಹೇಳುವಿರೋ ಅದು ಆಗಲೇ ಬೇಕು" ಎಂದು ಇಂದುಮತಿಯು ನಿಷ್ಠುರತೆಯಿಂದ ಹೇಳಿಬಿಟ್ಟಳು.

ವೃದ್ಧ ಡಾಕ್ಟರು ಕೊಂಚ ಮುಸಿನಗೆ ನಕ್ಕರು.

ಇಂದುಮತಿಯು ತನ್ನ ಉದ್ವೇಗಕ್ಕಾಗಿ ನಾಚಿದಳು. "ನೋಡಿ, ನಾನು ತುಂಬಾ ವ್ಯಾಕುಲಳಾಗಿದ್ದೇನೆ. ನೀವು ಅವರಿಗೆ ತುಂಬಾ ಹೆದರಿಕೆ ಹುಟ್ಟಿಸಿಬಿಡಿ'' ಎಂದಳು.

ಡಾಕ್ಟರವರು ತಲೆಯಾಡಿಸಿ ನಿಧಾನವಾಗಿ, ''ಇಂತಹ ಖಾಯಿಲೆಗಳು ಎಂದರೆ ಭಯವಿದ್ದೇ ಇರುತ್ತದೆ'' ಎಂದರು.

ಇಂದುಮತಿಯ ಮುಖವು ಬಿಳುಪೇರಿತು. "ನಿಜವಾಗಿಯೂ ಭಯವೇ !" ಎಂದಳು.

ಅವಳ ಮುಖದ ಕಡೆ ನೋಡಿ ಡಾಕ್ಟರಿಗೆ ಒಡನೆಯೇ ಯಾವ ಉತ್ತರವನ್ನೂ ಕೊಡಲಾಗಲಿಲ್ಲ.

ಇಂದುಮತಿಯ ಕಣ್ಣುಗಳಲ್ಲಿ ನೀರು ತುಂಬಿತು. ''ನಾನು ನಿಮ್ಮ ಮಗಳಂತೆ ಇದ್ದೇನೆ, ಡಾಕ್ಟರೆ. ನನ್ನಿಂದ ಮುಚ್ಚಿಡ ಬೇಡಿ. ಏನಾಗಿದೆ, ಎಲ್ಲವನ್ನೂ ನನಗೆ ಬಿಡಿಸಿ ಹೇಳಿ" ಎಂದು ಬೇಡಿಕೊಂಡಳು.

ಇಂತಹುದೇ ಆಗಿದೆಯೆಂದು ಡಾಕ್ಟರಿಗೇ ಗೊತ್ತಿರಲಿಲ್ಲ. ಅವರು ಏನೇನೋ ಹೇಳಿ, ಹಾಗೆ–ಹೀಗೆ ಎಂದು ತಿಳಿಸಲು ಪ್ರಯತ್ನಪಟ್ಟರೂ ಇಂದುಮತಿಯ ಭಯವು ದೂರವಾಗಲಿಲ್ಲ. ಅವಳು ತನ್ನ ಕೊಠಡಿಯನ್ನು ಸೇರಿ ಅಳಲುಪಕ್ರಮಿಸಿದಳು.

ಸಂಜೆಗೆ ಕೊಂಚ ಮುಂಚೆ ನರೇಂದ್ರನು ಕೈಯಲ್ಲಿನ ಲೇಖನಿಯನ್ನು ಕೆಳಗಿಟ್ಟು ಶೂನ್ಯದೃಷ್ಟಿಯಿಂದ ಹೊರಗಡೆ ನೋಡುತ್ತಿದ್ದನು. ಇಂದುಮತಿಯು ಕೊಠಡಿಯೊಳಕ್ಕೆ ಪ್ರವೇಶಿಸಿ ಒಂದು ಸ್ಟೂಲನ್ನು ಎಳೆದುಕೊಂಡು ಕುಳಿತುಕೊಂಡಳು. ನರೇಂದ್ರನು ಒಮ್ಮೆ ದೃಷ್ಟಿ ಹೊರಳಿಸಿ ಅವಳನ್ನು ನೋಡಿ ಪುನಃ ಮೊದಲಿನಂತೆಯೇ ನೋಡತೊಡಗಿದನು.

ಕೆಲವು ದಿವಸಗಳಿಂದ ಇಂದುಮತಿಯು ಅವನಿಂದ ದುಡ್ಡನ್ನು ತೆಗೆದುಕೊಂಡಿರಲಿಲ್ಲ. ಇಂದು ಅವಳು ಯಾವುದಕ್ಕಾಗಿ ಬಂದು ಕುಳಿತಿರುವಳೆಂಬುದರ ಕಲ್ಪನೆಯಿಂದ ನರೇಂದ್ರನ

ಹೃದಯವು ಢನಢನನೆ ಹೊಡೆದುಕೊಳ್ಳಲಾರಂಭಿಸಿತು.

ಇಂದುಮತಿಯು ದುಡ್ಡನ್ನು ಕೇಳಲಿಲ್ಲ. "ಖಾಯಿಲೆ ಯಾವಾಗ ಔಷಧೋಪಚಾರಗಳಿಂದ ಕಡಿಮೆಯಾಗಲಿಲ್ಲವೋ ಆಗ ನೀರು-ಹವಾ ಬದಲಾಯಿಬೇಕಾದ ಅವಶ್ಯಕತೆ ಇದೆ ಯೆಂದು ಡಾಕ್ಟರು ಹೇಳುತ್ತಾರೆ" ಎಂದಳು.

ಕೊಂಚ ಸುಮ್ಮನಿದ್ದು ಮತ್ತೆ, "ಒಂದು ಸಲಹ ವಾ ಬದಲಾ ಯಿಸಲು ಹೊರಗಡೆ ಹೋಗಿ ಏಕೆ ಸುತ್ತಾಡಿ ಬರಬಾರದು?" ಎಂದು ಅವಳು ಕೇಳಿದಳು.

ನರೇಂದ್ರನಿಗೆ ವಾಸ್ತವವಾಗಿ ಆಶ್ಚರ್ಯವಾಯಿತು. ಬಹು ದಿವಸಗಳಿಂದ ಅಜ್ಞಾತಭಾವದಲ್ಲಿದ್ದ, ಸ್ನೇಹವು ಎಲ್ಲಿಂದಲೋ ಬಚ್ಚಿಟ್ಟುಕೊಂಡು ಅವನನ್ನು ಕೂಗಿ ಎಚ್ಚರಿಸಿತು. ಇಂದು ಮತಿಯ ಈ ಕಂಠಸ್ವರದ ಜ್ಞಾಪಕವು ಸಹ ಅವನಲ್ಲಿ ಉಳಿದಿರ ಲಿಲ್ಲ. ಅದರಿಂದ ಮುಖ ತಿರುಗಿಸಿ ಹತಬುದ್ಧನಾಗಿ ಅವಳಕಡೆ ಒಂದು ಕ್ಷಣ ನೋಡಿ ತನ್ನಲ್ಲಿಯೇ ಏನನ್ನೋ ಹುಡುಕುವವ ನಂತೆ ಎದ್ದು ತಿರುಗಾಡಲಾರಂಭಿಸಿದನು.

"ಏನು ಹೇಳುತ್ತೀರಿ? ಹಾಗಾದರೆ ನಾಳೆಯೇ ಎಲ್ಲಾ ಸಿದ್ಧ ಮಾಡಿಕೊಂಡು ಹೋಗಿಬಿಡುವುದು ತಾನೆ? ಬಹಳ ದೂರ ಹೋಗಬೇಕಾದ ಅವಶ್ಯಕತೆ ಏನೂ ಇಲ್ಲ. ಇಲ್ಲೇ ಆಜು ಬಾಜಿನ ಪ್ರದೇಶಗಳಲ್ಲಿ ನಾವಿಬ್ಬರು, ಕಮಲ ಮತ್ತು ಒಬ್ಬ ಕೆಲಸದವಳು, ಇಷ್ಟು ಜನ ಹೋದರೆ ಸಾಕು. ರಾಮಟಹ ಲನು ಬಹಳ ಹಳೆಯ ಕೆಲಸಗಾರ; ನಂಬಿಕಸ್ಥ. ಅವನು ಮನೆಯಲ್ಲಿಯೇ ಇದ್ದುಬಿಡಲಿ. ಅಲ್ಲಿ ಒಂದು ಸಣ್ಣ ಮನೆ ಯನ್ನು ಬಾಡಿಗೆಗೆ ತೆಗೆದುಕೊಂಡುಬಿಟ್ಟರೆ ನಮ್ಮಿಷ್ಟುಮಂದಿಗೆ ಸಾಕೇ ಸಾಕು.—ಸರಿ ಹಾಗಾದರೆ ಇವತ್ತಿನಿಂದಲೇ ಸಾಮಾನು ಕಟ್ಟುವುದಕ್ಕೆ ಷುರುಮಾಡಿಬಿಡುವುದು ತಾನೆ?"

ಯಾವ ತರಹದ್ದಾದರೂ ಖರ್ಚಿನ ಬಾಬತ್ತು ಎಂದರೆ ನರೇಂ

ದ್ರನಿಗೆ ಭಯವಾಗುತ್ತಿತ್ತು. ಇಂತಹ ಭಾರಿ ವಿಚಾರದಿಂದ ಅವನ ಮನಸ್ಸು ತುಂಬ ಕೆಟ್ಟುಹೋಯಿತು. "ಈ ಡಾಕ್ಟರನ್ನು ಇಲ್ಲಿಗೆ ಬಾ ಎಂದು ಯಾರು ಹೇಳಿದ್ದರು?" ಎಂದನು.

ಇಂದುಮತಿಯು ಜವಾಬನ್ನು ಕೊಡುವುದಕ್ಕೆ ಮುಂಚೆಯೇ ಅವನೇ ಪುನಃ, "ವಿಮಲೆಗೆ ಹೇಳು. ಸುಮ್ಮನೆ ನನ್ನ ಹಿಂದೆ ಹಿಂದೆ ಹೀಗೆ ಡಾಕ್ಟರನ್ನು ಬಿಟ್ಟು ನನ್ನನು ತೊಂದರೆಗೀಡು ಮಾಡಬೇಕಾದ ಅವಶ್ಯಕತೆ ಇಲ್ಲ. ನಾನು ಚೆನ್ನಾಗಿಯೇ ಇದ್ದೇನೆ" ಎಂದುಬಿಟ್ಟನು.

ವಿಮಲೆಯೇ ಕಳ್ಳತನದಿಂದ ಡಾಕ್ಟರನ್ನು ಕಳುಹಿಸುತ್ತಾಳೆ– ವಿಮಲೆಯೇ ಸರ್ವಸ್ವ! ಇಂದುಮತಿಯ ಹೃದಯದಲ್ಲಿ ದಾರುಣವಾದ ವೇದನೆಯಾಯಿತು. ಆದರೆ ಅದನ್ನು ತಡೆದು ಮರೆಸಿಕೊಂಡು, "ಆದರೆ ನೀವು ನಿಜವಾಗಿಯೂ ಆರೋಗ್ಯವಾಗಿಲ್ಲ– ನೋವು ಇನ್ನೂ ವಾಸಿಯಾಗಿಯೇ ಇಲ್ಲ" ಎಂದಳು.

"ಎಲ್ಲಾ ಸರಿಯಾಗಿದೆ."

"ಆದರೂ ಕೂಡ ಶರೀರಸ್ಥಿತಿ ಇನ್ನೂ ಸುಧಾರಿಸಿಲ್ಲ— ಸ್ಪಷ್ಟವಾಗಿ ಕಾಣಿಸುತ್ತಾ ಇದೆ. ಒಂದು ಸಲ ಸುತ್ತಾಡಿ ಬಂದರೆ ಅದರಿಂದ ಅಂತಹ ಒಳ್ಳೆಯದೇನೂ ಆಗದೆ ಇದ್ದರೂ ಕೆಡುಕೇನೂ ಆಗುವುದಿಲ್ಲವಲ್ಲ?" ನರೇಂದ್ರನು ಒಳಗೆ–ಹೊರಗೆ ಎರಡು ಕಡೆಯಿಂದಲೂ ನೋವನ್ನು ಸಹಿಸಲು ನಿರ್ಬಲನಾಗಿಬಿಟ್ಟನು. ಆದರೂ ಸಹ ಈ ಪೆಟ್ಟನ್ನು ಅತಿ ಕಷ್ಟದಿಂದ ಸಹಿಸಿಕೊಳ್ಳುತ್ತಾ. "ನನ್ನಲ್ಲಿ ಸುತ್ತಾಡಿ ಬರುವಷ್ಟು ಶಕ್ತಿ ಇಲ್ಲ" ಎಂದು ಹೇಳಿದನು.

"ಹಾಗೆಂದಿಗೂ ಸಾಧ್ಯವಿಲ್ಲ. ಪ್ರಾಣವನ್ನಂತೂ ಉಳಿಸಲೇಬೇಕು" ಎಂದು ಇಂದುಮತಿಯು ಒತ್ತಿ ಹೇಳಿದಳು.

ಅವಳ ಈ ಬಲವತ್ತರವಾದ ಮಾತು ತೀರ ಹೊಸದಾದುದಾಗಿತ್ತು. ನರೇಂದ್ರನು ತಪ್ಪು ತಿಳಿದುಕೊಂಡ. ತನಗೆ

ಕ್ಲೇಶವನ್ನುಂಟುಮಾಡಲೆಂದೇ ಈ ಹೊಸ ಯೋಚನೆಯನ್ನು ಹೂಡಿರುವಳೆಂದು ಅವನು ಮನಸ್ಸಿನಲ್ಲಿ ನಿಷ್ಕರ್ಷಿಸಿದನು.

ಇಷ್ಟು ದಿವಸಗಳಿಂದ ತಡೆಗಟ್ಟಿದ್ದ ಅವನ ಮನಸ್ಸಿನ ಸ್ಥೈರ್ಯವು ಇಂದು ಒಡೆದುಹೋಯಿತು. ಅವನು ಗಟ್ಟಿಯಾಗಿ ಒದರಿದ—''ಪ್ರಾಣವನ್ನು ಉಳಿಸಿಯೇ ತೀರಬೇಕೆಂದು ಯಾರು ಹೇಳುತ್ತಾರೆ? ಇಲ್ಲ, ಯಾವ ಅವಶ್ಯಕತೆಯೂ ಇಲ್ಲ—ನೂರು ಬಾರಿ ಹೇಳುತ್ತೇನೆ, ಯಾವ ಅವಶ್ಯಕತೆಯೂ ಇಲ್ಲ. ಇಂದೂ! ನಿನ್ನ ಕಾಲಿಗೆ ಬೀಳುತ್ತೇನೆ. ನನಗೆ ಅವಕಾಶ ಕೊಡು – ನಾನು ಉಸಿರಾಡಿಯಾದರೂ ಬದುಕೇನು."

ಪತಿಯ ಬಾಯಿಂದ ಇಂತಹ ಕಟುವಾಕ್ಯಗಳನ್ನು ಕೇಳುವೆನೆಂದು ಇಂದುಮತಿಯು ಕಲ್ಪಿಸಿಕೊಳ್ಳಲಾರದಾಗಿದ್ದಳು. ಅವಳು ಮುಖ ಗಂಟಿಟ್ಟಳು. ತುಂಬ ಹತಬುದ್ಧಳಾದಳು. ಆದರೆ ನರೇಂದ್ರನಿಗೆ ಇದು ಗೊತ್ತಾಗಲಿಲ್ಲ. ಅವನು ಹೇಳುತ್ತಲೇ ಇದ್ದ—"ನಿನಗೆ ಚೆನ್ನಾಗಿ ಗೊತ್ತೇ ಇದೆ, ನಾನೆಷ್ಟು ಸಂಕಟದಿಂದ ದಿವಸಗಳನ್ನು ತಳ್ಳುತ್ತಿದ್ದೇನೆಂದು. ಅದೆಲ್ಲ ಮರೆತು ಸುಮ್ಮನೆ ನನಗೆ ತೊಂದರೆ ಕೊಡುವುದಕ್ಕಾಗಿಯೇ ನೀನು ದಿವಸಗಳನ್ನು ಎಣಿಸುತ್ತಿರುವೆಯಾ? ನಿನಗೆ ನಾನೇನು ಕೆಡಕು ಮಾಡಿದ್ದೇನೆ? ನಿನಗೇನು ಆಗಬೇಕು ಹೇಳು."

ಇಂದುಮತಿಯು ಹೆದರಿಕೆಯಿಂದ ಬೆಪ್ಪಾಗಿ ಹಾಗೆಯೇ ನೋಡುತ್ತಿದ್ದಳು. ಅವಳ ಬಾಯಿಂದ ಒಂದು ಮಾತೂ ಸಹ ಹೊರಬೀಳಲಿಲ್ಲ.

ಕೂಗುವುದು ಉದ್ರೇಕಗೊಳ್ಳುವುದು ತನಗೆ ಎಷ್ಟು ಅಸ್ವಾಭಾವಿಕವಾದದ್ದೆಂದು ನರೇಂದ್ರನಿಗೆ ಈಗ ತಾನೆ ಗೊತ್ತಾಯಿತು. ಅವನು ಧ್ವನಿಯನ್ನು ಕೊಂಚ ಕಡಿಮೆ ಮಾಡಿಕೊಂಡು,—"ಸರಿ, ನನಗಾಗಿ ಹವಾ ಬದಲಾಯಿಸುವುದು ಅವಶ್ಯಕವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಹೇಗೆ ಹೋಗಬೇಕು?

ದುಡ್ಡೆಲ್ಲಿಂದ ಬಂದೀತು? ಮನೆಯ ಸಂಸಾರದ ಖರ್ಚಿಗೆ ಜೊತೆಮಾಡುವುದಕ್ಕೇ ನನ್ನ ಪ್ರಾಣ ಹಿಂಡಿಹೋಗುತ್ತಾ ಇದೆ" ಎಂದು ಹೇಳಿದನು.

ಇಂದುಮತಿಯು ಯಾವಾಗಲೂ ಅಧೈರ್ಯಪಟ್ಟು, ಧೈರ್ಯ ಪಡೆಯಲು ಅಭ್ಯಾಸ ಮಾಡಿದವಳಲ್ಲ. ತಲೆ ತಗ್ಗಿಸಿ ನಡೆ ಯುವುದು ಅವಳ ಅಭ್ಯಾಸಕ್ಕೆ ವಿರುದ್ಧವಾದುದು. ಆದರೆ ಇಂದು ಅವಳೂ ಹೆದರಿಬಿಟ್ಟಳು. "ರೂಪಾಯಿ ಇಲ್ಲದಿದ್ದರೆ ಪರವಾಗಿಲ್ಲ. ತುಂಬ ಬೆಲೆ ಬಾಳುವ ಒಡವೆ ವಸ್ತುಗಳು ನನ್ನ ಬಳಿ ಇವೆ—" ಎಂದು ನಮ್ರಕಂಠದಿಂದ ಅವಳು ಹೇಳಿದಳು.

"ಇವೆ. ಆದರೆ ಅವು ನನ್ನವಲ್ಲ—ನಿನ್ನವು! ಅವನ್ನು ನಿನ್ನ ತಂದೆಯವರು ನಿನಗಾಗಿ ಕೊಟ್ಟಿದ್ದಾರೆ. ಅದರ ಮೇಲೆ ಲೇಶಮಾತ್ರವೂ ನನ್ನ ಅಧಿಕಾರವಿಲ್ಲ. ಇದರ ವಿಷಯವಾಗಿ ನನಗಿಂತ ನಿನಗೇ ಹೆಚ್ಚಾಗಿ ಗೊತ್ತಿದೆಯಲ್ಲ."

"ಒಳ್ಳೆಯದು. ಅವನ್ನು ತೆಗೆದುಕೊಳ್ಳಬೇಡಿ—ನಾನು ನಗದು ಹಣವನ್ನೇ ಕೊಡುತ್ತೇನೆ."

"ಎಲ್ಲಿಂದ ಬಂತು? ಸಂಸಾರದ ಖರ್ಚಿನಲ್ಲಿ ಉಳಿಸಿದ್ದೇ?"

"ಹೌದು"

ಅದು ಬಳೆಗಳಿಂದ ಮಾರಿ ಬಂದ ದುಡ್ಡು. ಇಂದುಮತಿಯು ಬಾಯಿಂದ ಸುಳ್ಳು ಸುಲಭಸಾಧ್ಯವಾಗಿ ಹೊರಬೀಳುತ್ತಿರಲಿಲ್ಲ. ಆದರೆ ಈ ದಿವಸ ಮಾತ್ರ ಅವಳು ಸುಳ್ಳು ಹೇಳಲೇಬೇಕಾದ ಪ್ರಸಂಗ ಬಂದಿತು. ನರೇಂದ್ರನ ಮುಖದ ಭಾವವು ಬಹಳ ಕಠೋರವಾಗಿ ಕಂಡು ಬಂತು. ಅವನು ಮುಂದುವರಿಸಿದ "ಸರಿ, ಹಾಗಾದರೆ ಅದನ್ನು ಹಾಗೆಯೇ ಇಟ್ಟುಕೊಂಡಿದ್ದು, ಅದರಿಂದ ಒಡವೆಗಳನ್ನು ಮಾಡಿಸಿಕೋ. ನನ್ನ ದೇಹದ ರಕ್ತವನ್ನೆಲ್ಲಾ ಬಸಿದು ಸಂಪಾದಿಸಿದ ಈ ದುಡ್ಡನ್ನು ಈ ರೀತಿ ಪ್ರಯಾಣಕ್ಕಾಗಿ

ಎಂದೆಂದಿಗೂ ನಷ್ಟಮಾಡಲು ಸಾಧ್ಯವಿಲ್ಲ. ಇಂದೂ, ನಾನು ನಿನಗೆಂದೂ ಕಟುವಚನವನ್ನಾಡಿದವನಲ್ಲ. ಸದಾ ನಿನ್ನ ಮಾತನ್ನೇ ಕೇಳುತ್ತಾ ಬರುತ್ತಿದ್ದೇನೆ. ಆದರೆ ಆ ದಿವಸ, ನೀನೇ ಹೆಮ್ಮೆಯಿಂದ ನಾನೆಂದಿಗೂ ಸುಳ್ಳು ಹೇಳುವುದಿಲ್ಲವೆಂದು ಹೇಳಿದ್ದೆಯಲ್ಲ? ರಾಮ, ರಾಮ——"

ಕಮಲೆಯು ಪರದೆಯ ಹಿಂದಿನಿಂದ, "ಅಮ್ಮಾ, ಅತ್ತಿ ಬಂದಿದಾರೆ" ಎಂದು ಕೂಗಿದಳು.

"ಏನು ಸಮೇತಾ ಇದೆ ಅತ್ತಿಗೆ?" ಎನ್ನುತ್ತಾ ವಿಮಲೆಯು ಒಳಕ್ಕೆ ಪ್ರವೇಶಿಸಿದಳು. ಇಂದುಮತಿಯು ಕಮಲೆಯನ್ನು ಒಳಕ್ಕೆ ಕರೆದುಕೊಂಡು ಬಂದು ಅವಳ ಕಂಠಾಹಾರವನ್ನು ಎರಡು ಕೈಯಿಂದಲೂ ಥಟ್ಟನೆ ಹರಿದು ತನ್ನ ಪತಿಯ ಮುಂದೆ ಸೆದು, "ನನಗೆ ಸುಳ್ಳುಹೇಳಲು ಬರುತ್ತಿರಲಿಲ್ಲ. ಅದನ್ನ ನಿಮ್ಮಿಂದಲೇ ಕಲಿತುಕೊಂಡೆ. ಆದರೂ ಸಹ ಇದುವರೆಗೂ ಕಂಡ ಕಂಡಹಾಗೆಯೇ ಹಿತ್ತಾಳೆಯನ್ನು ಬಂಗಾರವೆಂದು ಹೇಳುವಷ್ಟು ಕಲಿತುಕೊಂಡಿಲ್ಲ. ಯಾರು ಹೆಂಡತಿಗೆ ಮೋಸ ಮಾಡುತ್ತಾರೆಯೋ, ಯಾರು ತಮ್ಮ ಅರಿಯದ ಹಸುಮಗಳಿಗೆ ಮೋಸಮಾಡುತ್ತಾರೋ ಅಂತಹವರಿಗೆ ಇನ್ನು ಬೇರೆ ಏನಿದೆ? ಅಂತಹವರೇ ಇನ್ನೊಬ್ಬರನ್ನು ಸುಳ್ಳು ಹೇಳುವವರು ಎಂದು ಹೇಗೆ ಹೇಳುತ್ತಾರೋ?" ಎಂದಳು.

ನರೇಂದ್ರನು ಹರಿದು ಬಿದ್ದಿದ್ದ ಹಾರವನ್ನು ಕೈಗೆ ತೆಗೆದು ಕೊಳ್ಳುತ್ತಾ ಪ್ರಶ್ನೆಮಾಡಿದ. "ಇದು ಹಿತ್ತಾಳೆಯೆಂದು ಹೇಗೆ ತಿಳಿದುಕೊಂಡೆ? ಪರೀಕ್ಷೆಮಾಡಿಸಿದೆಯೇನು?"

"ನಿಮ್ಮ ತಂಗಿಗೆ ಪರೀಕ್ಷೆಮಾಡಿಸುವುದಕ್ಕೆ ಹೇಳಿ" ಎಂದು ಅವಳು ತನ್ನೆರಡು ಕಣ್ಣುಗಳನ್ನು ವಿಮಲೆಯ ಕಡೆಗೆ ಹೊರಳಿಸಿ ದಳು.

ವಿಮಲೆಯು ಎರಡು ಹೆಜ್ಜೆ ಹಿಮ್ಮೆಟ್ಟಿ, "ಈ ಕೆಲಸ ನನ್ನದಲ್ಲ—ಅಣ್ಣನಿಗೆ ನೀನೀಗ ಕೊಟ್ಟಿರುವ ಈ ಒಡವೆಯನ್ನು ಬಂಗಾರವೆಂದು ಕರೆದು ಪರೀಕ್ಷೆಮಾಡಿಸುವುದು" ಎಂದಳು.

''ಇಂದು, ನಿನಗೂ ಸಹ ನಾನು ಒಂದೆರಡು ಒಡವೆಗಳನ್ನು ಕೊಟ್ಟಿದ್ದೆ. ಅವನ್ನು ಪರೀಕ್ಷಿಸಿನೋಡಿದೆಯಾ?''

''ಇಲ್ಲ ನೋಡಿಲ್ಲ. ಆದರೆ ಈಗ ನೋಡಲೇ ಬೇಕಾಯಿತು."

''ಅದಕ್ಕೇನು ನೋಡು. ಅವು ಹಿತ್ತಾಳೆಯಲ್ಲ'' ಎಂದು, ನರೇಂದ್ರನು ಪುನಃ ತಂಗಿಯ ಕಡೆ ನೋಡಿ ಹಾರವನ್ನು ತೋರಿಸಿ, "ಇದು ಬಂಗಾರವಲ್ಲ ವಿಮಲ, ಹಿತ್ತಾಳೆ! ತಂದೆಯಾದ ನಾನು ಯಾವ ದುಃಖದಿಂದ ನನ್ನ ಏಕಮಾತ್ರ ಪುತ್ರಿಯ ಹುಟ್ಟಿದ ಹಬ್ಬದ ದಿವಸ ಮೋಸಮಾಡಿದೆನೆಂಬುದು ನೀನೊಬ್ಬಳೇ ತಿಳಿದುಕೊಳ್ಳಬಲ್ಲೆ. ಮಗಳಿಗೆ ಮೋಸಮಾಡಲು ಸಾಧ್ಯವಾಗಿದೆ. ಆದರೆ ನನ್ನ ಹೆಂಡತಿಗೆ ಮೋಸಮಾಡುವ ಪ್ರಯತ್ನಮಾಡಿಲ್ಲ'' ಎಂದನು.

೭

''ನಾನು ಹೇಳುವ ಮಾತು ಕೇಳು ಅತ್ತಿಗೆ. ಒಂದು ಸಲ ಹೋಗಿ ಕಾಲಿಗೆ ನಮಸ್ಕರಿಸಿ ಕ್ಷಮಾಪಣೆ ಕೇಳಿಕೋ."

''ಏತಕ್ಕೆ? ಯಾವದುಃಖಕ್ಕಾಗಿ? ನನ್ನ ತಲೆ ಕತ್ತರಿಸಿದರೂ ಸರಿ ನನ್ನಿಂದ ಹಾಗೆ ಮಾಡುವುದು ಸಾಧ್ಯವಿಲ್ಲ.''

"ಮಾಡಲು ಸಾಧ್ಯವಿಲ್ಲವೇಕೆ? ಪತಿಯ ಪಾದಕ್ಕೆ ನಮಸ್ಕರಿಸುವುದು ನಾಚಿಕೆಗೇಡಿನ ಕೆಲಸವೇ? ನಿನ್ನದೇನೂ ತಪ್ಪಿಲ್ಲಾಂತಲೇ ಒಪ್ಪಿಕೊಳ್ಳೋಣ—ಆದರೂ ಅವರನ್ನು ಪ್ರಸನ್ನರನ್ನಾಗಿ ಮಾಡುವುದು ಬೇರೆ ಎಲ್ಲಾ ಕೆಲಸಗಳಿಗಿಂತಲೂ ಹೆಚ್ಚಿನದು.''

"ಇಲ್ಲ ನನ್ನ ಭಾಗಕ್ಕೆ ಹಾಗಿಲ್ಲ. ದೇವರ ಮುಂದೆ ಶುದ್ಧವಾಗಿರುವುದೇ ನನಗೆಲ್ಲಕ್ಕಿಂತಲೂ ದೊಡ್ಡ ಕೆಲಸ. ಎಲ್ಲಿಯ

ವರೆಗೆ ದೇವರ ಹತ್ತಿರ ಅಪರಾಧಮಾಡುವುದಿಲ್ಲವೋ ಅಲ್ಲಿಯ ವರೆಗೆ ನನಗೆ ಯಾವ ಭಯವೂ ಇಲ್ಲ."

ವಿಮಲೆಗೆ ಕೋಪ ಬಂದಿತು. "ಅತ್ತಿಗೆ, ಇಂತಹ ಭಾರಿ ಭಾರಿ ಮಾತುಗಳನ್ನು ಆಡುವುದಕ್ಕೆ ನನಗೂ ಬರುತ್ತದೆ. ಇವೆಲ್ಲ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಸುಮ್ಮನೆ ಕಣ್ಣು ತಿಕ್ಕಿ ಕೊಂಡರೆ ಬಂದಿರುವ ವಿಪತ್ತಿನಿಂದ ಪಾರಾಗುವುದಕ್ಕೆ ಸಾಧ್ಯವೆ ? ಅಣ್ಣ ಖಂಡಿತ ನಿನ್ನಿಂದ ವಿರಕ್ತನಾಗಿದ್ದಾನೆ"

ಇಂದುಮತಿ ಉದಾಸೀನತೆಯಿಂದ "ಅವರಿಷ್ಟ !" ಎಂದಳು.

ವಿಮಲೆಯು ಮನದೊಳಗೇ ಕಿಡಿಕಿಡಿಯಾದಳು. ಯಾವೊತ್ತು ಸರ್ವನಾಶವಾಗುತ್ತದೋ ಆವೊತ್ತೇ ಗೊತ್ತಾಗುವುದು, ಆ ಇಷ್ಟ ಏನೆನ್ನುವುದು. ಅಣ್ಣನ ಮನಸ್ಸು ಎಷ್ಟು ಸಭ್ಯ, ಕೋಮಲ ವಾಗಿದೆಯೋ ಅಷ್ಟೇ ಕಠೋರವೂ ಆಗಿದೆ. ಅವನನ್ನು ನೀನು ಒಂದೇ ದೃಷ್ಟಿಯಿಂದ ನೋಡಿದ್ದೀಯೆ. ಇನ್ನೊಂದು ದೃಷ್ಟಿ ಯಿಂದ ನೋಡಬೇಕಾದದ್ದು ಇನ್ನೂ ಬಾಕಿ ಇದೆ—ಈಗಲೇ ಅದನ್ನು ನಿನಗೆ ತಿಳಿಯ ಹೇಳಿದ್ದೇನೆ ನೋಡು."

'ಒಳ್ಳೆಯದು. ನೋಡಿ ನಿನಗೆ ಸಮಾಚಾರ ತಿಳಿಸುತ್ತೇನೆ "

ವಿಮಲೆಯು ಮುಂದೇನನ್ನೂ ಹೇಳಲಿಲ್ಲ. ಕೊಂಚ ಹೊತ್ತು ಸುಮ್ಮನಿದ್ದು ಒಂದು ದೀರ್ಘಶ್ವಾಸವನ್ನು ತೆಗೆದುಕೊಂಡು ನಿಧಾನವಾಗಿ, "ನೀನು ಪತಿಪ್ರೇಮ, ಸ್ನೇಹಗಳಿಂದ ಎಂದಾ ದರೂ ವಂಚಿತಳಾಗುತ್ತಿ. ಈ ಮಾತಿನ ಮೇಲೆ ನಿನಗೆ ವಿಶ್ವಾಸ ವಿಲ್ಲ. ಆದರೆ ಅಣ್ಣನು ಅಂತಹ ಮನುಷ್ಯನಲ್ಲ—ಖಾಯಿಲೆ ಬಿದ್ದಿದ್ದಾಗ ಅವನ ಸ್ವಭಾವವನ್ನು ನಾನು ಚೆನ್ನಾಗಿ ತಿಳಿದು ಕೊಂಡೆ. ಅವನ ಹೃದಯಮಂದಿರದ ಕವಾಟವು ಒಂದು ಸಲ ಮುಚ್ಚಿತೆಂದರೆ ಪುನಃ ಅದು ತೆರದದ್ದನ್ನು ನೀನು ನೋಡಲಾರೆ" ಎಂದು ಹೇಳಿದಳು.

ಈ ಸಲ ಇಂದುಮತಿಯ ಚಹರೆಯು ಗಂಭೀರವಾಯಿತು.

"ತೆರವದ್ದನ್ನು ನೋಡದಿದ್ದರೆ ಹೊರಗಡೆಯೇ ಇರುತ್ತೇನೆ. ತೆಗೆಯಿಸುವುದಕ್ಕೆ ಅವರ ಕಾಲಿಗೆ ಬಿದ್ದು ಬೇಡಿಕೊಳ್ಳುವುದೂ ಇಲ್ಲ ; ಶಿಫಾರಸುಮಾಡೆಂದು ನಿನ್ನನ್ನು ಕರೆಕಳಿಸುವುದೂ ಇಲ್ಲ. ಇದೇನು ?—ಕೋಪಿಸಿಕೊಂಡು ಹೊರಟು ಹೋಗುತ್ತೀಯಾ ?

ವಿಮಲೆಯು ಅಲ್ಲೇ ಹಾಗೆಯೇ ನಿಂತಳು. "ಕೋಪದಿಂದಲ್ಲ ಅತ್ತಿಗೆ—ದುಃಖದಿಂದ ಹೋಗುತ್ತಿದ್ದೇನೆ. ನನ್ನ ಅಕ್ಕನಿಗಿಂತ ಹೆಚ್ಚೆಂದು ನಿನ್ನನ್ನು ನಾನು ಪ್ರೀತಿಸುತ್ತೇನೆ. ಅದಕ್ಕಾಗಿ ನನ್ನ ಹೃದಯವು ಅತ್ತೂ ಅತ್ತೂ ಕರಗಿಹೋಗುತ್ತಾ ಇದೆ. ಅಣ್ಣನು ಕೂಡ ಯಾವಾಗಲಾದರೂ ಇಂತಹ ಮಾತನ್ನೇ ಹೇಳುತ್ತಿದ್ದ. ಆದರೆ ನಾನು ಕಣ್ಣಿನಿಂದ ನೋಡದಿದ್ದಿದ್ದರೆ ಖಂಡಿತ ಆ ಮಾತಿನಲ್ಲಿ ವಿಶ್ವಾಸಪಡುತ್ತಿರಲಿಲ್ಲ."

"ಇಷ್ಟು ದೀರ್ಘ ಉಪನ್ಯಾಸವನ್ನು ಅವರ ಬಾಯಿಂದ ಇನ್ನೆಂದೂ ಕೇಳಲಾರೆ" ಎಂದು ಇಂದುಮತಿಯು ಕೊಂಚ ನಕ್ಕು ಹೇಳಿದಳು.

"ನೀನೂ ಏನೂ ಕಮ್ಮಿ ಉಪನ್ಯಾಸಮಾಡಿಲ್ಲ ಅತ್ತಿಗೆ. ಆದರೆ ಅವನು ಪುನಃ ಆ ವಿಚಾರವಾಗಿ ಉಪನ್ಯಾಸಮಾಡುವುದಿಲ್ಲ ಅನ್ನುವುದು ಗೊತ್ತಿದೆ. ಒಂದೇ ಮಾತನ್ನು ಪುನಃ ಪುನಃ ನೂರಾರು ಸಲ ಒತ್ತಿ ಒತ್ತಿ ಹೇಳುವ ಮನುಷ್ಯನವನಲ್ಲ."

ಇಂದುಮತಿಯು ಪುನಃ ನಕ್ಕು ಹೇಳಿದಳು—"ಅದೇನೋ ಸರಿಯೆ—ಹೌದು ನೋಡು, ನಿಜ—ಇನ್ನೂ ಒಂದು ಕಾರಣವಿದೆ. ಅದಕ್ಕೆ ಇನ್ನೆಂದೂ ಅವರು ಸ್ವಪ್ನದಲ್ಲಿಯೂ ಸಹ ಕಣ್ಣು ಕೆಂಪಗೆ ಮಾಡುವಷ್ಟು ಸಾಹಸಮಾಡಲಾರರು. ನಮ್ಮ ತಂದೆಯವರ ಕಾಗದ ಬಂದಿದೆ. ಅವರು ನನ್ನ ಹೆಸರಿಗೆ ಹತ್ತು ಸಾವಿರ ರೂಪಾಯಿನ ಉಯಿಲು ಬರೆದಿದ್ದಾರೆ. ಈಗಲಾದರೂ ಏನು ಹೇಳುತ್ತಿ ವಿಮಲಾ ? ಈಗಲೂ ಕಾಲಿಗೆ ಬೀಳಬೇಕಾದ ಅವಶ್ಯಕತೆ ಇದೆಯೆಂದು ಕಾಣುತ್ತದೆಯೆ ?"

ವಿಮಲೆಯ ಚಹರೆಯು ಇನ್ನೂ ಅಂಧಕಾರಮಯವಾಯಿತು. ''ಅತ್ತಿಗೆ, ಈ ಮುಂಚೆ ಅಣ್ಣನೆಂದಿಗೂ ನಿನ್ನ ವಿಷಯಕ್ಕೆ ಕಣ್ಣು ಕೆಂಪಗೆಮಾಡಿಲ್ಲ. ನೀನು ಅವನನ್ನು ಯಾವ ಸ್ಥಿತಿಯಲ್ಲಿ ಬಿಟ್ಟು ಮೇದಿನೀಪುರಕ್ಕೆ ಹೋಗಿದ್ದೆ ಎಂಬುದು ನನಗೆ ಗೊತ್ತು. ಆದರೂ ಸಹ ಎಂದೂ ಅವನು ನಿನ್ನ ನಿಂದೆಯನ್ನು ಸ್ವಲ್ಪವೂ ಮಾಡಲಿಲ್ಲ. ನಗು ನಗುತ್ತಾ ನಿನ್ನ ದೋಷಗಳನ್ನೂ ಸಹ ನನ್ನಿಂದಲೂ ಮುಚ್ಚಿಟ್ಟಿದ್ದ—ಹಾಗಾದರೆ ಅದೂ ನಿನ್ನ ದುಡ್ಡಿನ ಲೋಭದಿಂದಲೆ? ಅತ್ತಿಗೆ, ಶ್ರದ್ಧೆಯಿಲ್ಲದೆ ಪ್ರೇಮವಿರುವುದಿಲ್ಲ. ನಿನ್ನ ವೈಮರೆವಿನಿಂದ, ನಿನ್ನ ಕೋಪದಿಂದ ಯಾವ ಪದಾರ್ಥವನ್ನು ಕಳೆದುಕೊಳ್ಳುತ್ತಿರುವೆಯೋ ಆ ಪದಾರ್ಥದ ಬೆಲೆಯು, ಸಂಪೂರ್ಣವಾಗಿ ಎಂದು ನಿನ್ನಿಂದ ದೂರವಾಗುವುದೋ—ಎಂದು ಅದು ಕಳೆದು ಹೋಗುವುದೋ ಅಂದು ನಿನಗೆ ಗೊತ್ತಾಗುವುದು. ಒಂದು ಮಾತನ್ನು ಮರೆಯದೆ ಗಮನದಲ್ಲಿಟ್ಟುಕೋ ಅತ್ತಿಗೆ. ನಮ್ಮಣ್ಣ ನೀಚನಲ್ಲ. ಸಾಯಂಕಾಲ ಆಗಿ ಹೋಯಿತು. ಇನ್ನು ಸಾಕು. ನಾನು ಹೋಗುತ್ತೇನೆ. ನಾಳೆ ನಾಳಿದ್ದು ಯಾವಾಗಲಾದರೂಬಿಡುವಾದಾಗ ನಮ್ಮ ಮನೆಗೆ ಬಾ.''

"ಒಳ್ಳೆಯದು" ಎಂದು ಇಂದುಮತಿಯು ಹಿಂದೆ ಹಿಂದೆಯೇ ಬಾಗಿಲಿನವರೆಗೆ ಬಂದಳು. ಅವಳು ಬರುತ್ತಿರುವ ಶಬ್ದ ಕಿವಿಗೆ ಬಿದ್ದರೂ ಬೀಳದಂತೆ ವಿಮಲೆಯು ತೋರ್ಪಡಿಸಿಕೊಂಡಳು. ಇದು ಇಂದುಮತಿಗೆ ಗೊತ್ತಾಯಿತು. ಗಾಡಿಯಲ್ಲಿ ಕುಳಿತು ಹೊರಕ್ಕೆ ಮುಖವಿಟ್ಟು ಒಬ್ಬರಿನ್ನೊಬ್ಬರನ್ನು ಮನೆಗೆ ಬರಹೇಳಿ ನಿಮಂತ್ರಿಸಿ ನಗುನಗುತ್ತಾ ಬಾಗಿಲನ್ನು ಹಾಕಿಕೊಂಡು ಹೊರಡುವುದು ಈ ಗೆಳತಿಯರಿಬ್ಬರ ವಾಡಿಕೆಯಾಗಿತ್ತು. ಆದರೆ ಇಂದು ಗಾಡಿಯಲ್ಲಿ ಕುಳಿತುಕೊಳ್ಳುತ್ತಿದ್ದ ಹಾಗೆಯೇ ವಿಮಲೆಯು ಬಾಗಿಲನ್ನು ಮುಚ್ಚಿಕೊಂಡಳು.

ಒಳಕ್ಕೆ ಬಂದು ಇಂದುಮತಿಯು ಕಮಲೆಯನ್ನು ಎದೆಗಪ್ಪಿ

ಕೊಂಡು ಮುಗ್ಧಳಾದಳು.

ವಿಮಲೆಯೇನೋ ಹೊರಟುಹೋದಳು. ಆದರೆ ತನ್ನ ತೀಕ್ಷ್ಣ ಕಟುವಚನಗಳನ್ನು ಮಾತ್ರ ಅಲ್ಲೇ ಬಿಟ್ಟು ಹೋಗಿದ್ದಳು. ಆ ಮಾತುಗಳ ತೀಕ್ಷ್ಣತೆ, ಕಟುತ್ವ ಎಷ್ಟಿತ್ತೆಂದು ಇಂದುಮತಿಗೆ ಗೊತ್ತಾಯಿತು. ಇದರ ತಾಪದಿಂದ ಅವಳ ಅಹಂಕಾರವೆಂಬ ಮೇಘಮಾರ್ಗವನ್ನು ಅತಿಕ್ರಮಿಸಿರುವ ಮಂಜಿನ ಸ್ತಂಭವು ಕರಗಿ ಹರಿಯಲಾರಂಭಿಸಿದಂತೆಲ್ಲಾ, ಅವಳ ಕಣ್ಮುಂದೆ ಒಂದಾಗುತ್ತಲೂ ಒಂದು ಹೊಸ ಹೊಸ ಪದಾರ್ಥವು ನಿಲ್ಲುತ್ತಿತ್ತು. ಗುಂಡಿಯಲ್ಲಿ ಬಂದು ನಿಂತ ನೀರಿನ ತಳದಲ್ಲಿ ತುಂಬ ಕೆಸರು, ಕೊಳೆ, ಕಸಕಡ್ಡಿಗಳು ತುಂಬಿ ಅದು ಅಸಹ್ಯವಾಗಿರುವುದೆಂದು ಅವಳು ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ.

ಇದ್ದಕ್ಕಿದ್ದಂತೆಯೇ ಅವಳ ಹೃದಯಾಂತರಾಳದಿಂದ ಯಾರೋ ಪ್ರಶ್ನೆಮಾಡಿದಂತಾಯಿತು. "ಹೇಗೆ ಸಾಧ್ಯ ಇಂದುಮತಿ? ಒಂದು ವೇಳೆ ಅವರು ಮನದಲ್ಲಿ ಆಗಲೇ ನಿನ್ನನ್ನು ತ್ಯಾಗಮಾಡಿದ್ದರೆ? ನೀನು ಒಂದು ವೇಳೆ ಅವರ ಬಳಿ ಹೋಗಿ ಕುಳಿತರೆ ಅವರು ತಿರಸ್ಕಾರದಿಂದ ದೂರ ಸರಿದರೆ?"

ಅವಳ ಶರೀರವೆಲ್ಲ ರೋಮಾಂಚವಾಯಿತು.

ಕಮಲೆಯು, "ಏನಮ್ಮ?" ಎಂದು ಕೇಳಿದಳು.

ಇಂದುಮತಿಯು ಅವಳನ್ನು ಬಿಗಿಯಾಗಿ ಅಪ್ಪಿಕೊಂಡು ಅವಳ ಮುಖಕ್ಕೆ ಮುತ್ತಿಟ್ಟು ಹೇಳಿದಳು— "ನಿಮ್ಮಮ್ಮನಿಗೆ ಹೆದರಿಸುವುದಕ್ಕೆ ಎಷ್ಟೋಂದು ಬರುತ್ತೆ——"

"ಏನು ಹೆದರಿಕೆಯಮ್ಮ?"

ಇಂದುಮತಿಯು ಮಗಳನ್ನು ಮತ್ತೊಮ್ಮೆ ಮುತ್ತಿಟ್ಟಳು. "ಏನೂ ಇಲ್ಲ ಮಗು, ಬರೀ ಸುಳ್ಳು ಸುಳ್ಳು–ಎಲ್ಲಾ ಸುಳ್ಳು ಸುಳ್ಳು. ನೋಡು, ನಿಮ್ಮ ತಂದೆ ಏನು ಮಾಡುತ್ತಿದಾರೆಯೋ ಹೋಗಿ ನೋಡಿಕೊಂಡು ಬಾ!-ಹುಂ, ಹೋಗು ಮಗು."

ಹುಡುಗಿಯು ತನ್ನ ತಂದೆಯ ಬಳಿಗೆ ಓಡಿಹೋದಳು. ಈಗೆರಡು ದಿನಗಳಿಂದ ಪತಿಪತ್ನಿಯರಲ್ಲಿ ಮಾತುಕತೆ ನಿಂತು ಹೋಗಿದೆ. ಕಮಲೆಯು ಹಿಂತಿರುಗಿ "ಅಮ್ಮ, ಅಪ್ಪ ಸುಮ್ಮನೆ ಮಲಗಿಕೊಂಡು ನಿದ್ದೆಮಾಡುತ್ತಿದ್ದಾರೆ" ಎಂದಳು.

"ಸುಮ್ಮನೆ? — ನೀನು ಇಲ್ಲಿಯೇ ಇರು. ನಾನು ನೋಡಿ ಕೊಂಡು ಬರುತ್ತೇನೆ." ಎಂದು ಸ್ವಯಂ ಇಂದುಮತಿಯೇ ಹೋಗಿ, ಪರದೆಯ ಸಂದಿಯಿಂದ ನೋಡಿದಳು—ಮಗು ಸರಿಯಾಗಿ ಹೇಳಿದ್ದಳು. ಅವನು ಮೇಲಕ್ಕೆ ನೋಡುತ್ತಾ ಸೋಫಾದ ಮೇಲೆ ಮಲಗಿದ್ದಾನೆ. ಐದಾರು ನಿಮಿಷಗಳವರೆಗೆ ಅಲ್ಲಿ ನಿಂತಿದ್ದು ಇಂದುಮತಿಯು ಹಿಂತಿರುಗಿದಳು. ಅವಳಿಗೆ ಇಂದು ಕೊಠಡಿಯನ್ನು ಪ್ರವೇಶಿಸುವ ಸಾಹಸವಾಗಲಿಲ್ಲ. ಇದರಿಂದ ಅವಳಿಗೇ ಆಶ್ಚರ್ಯವಾಗತೊಡಗಿತು.

"ಕಮಲಾ!"

"ಏನಮ್ಮ?"

"ನಿಮ್ಮ ತಂದೆಯವರಿಗೆ ತುಂಬ ತಲೆನೋಯುತ್ತಾ ಇರಬಹುದು. ಹೋಗಿ ಹತ್ತಿರ ಕುಳಿತುಕೊಂಡು ತಲೆಯಮೇಲೆ ಕೈಯಾಡಿಸು ಮಗು."

ಹುಡುಗಿಯನ್ನು ಕಳುಹಿಸಿಕೊಟ್ಟು ಇಂದುಮತಿಯು ಮರೆಯಲ್ಲಿ ನಿಂತು ಉತ್ಸಾಹದಿಂದ ಇಬ್ಬರ ಮಾತನ್ನೂ ಕೇಳತೊಡಗಿದಳು.

"ತಲೆ ಇಷ್ಟೊಂದು ಯಾತಕ್ಕೆ ನೋಯುತ್ತಾ ಇದೆ ಅಪ್ಪ?"

"ಎಲ್ಲಿ? ನೋವಿಲ್ಲವಲ್ಲ ಮಗೂ!"

"ಮತ್ತೆ ಅಮ್ಮ ತುಂಬಾ ನೋಯುತಾ ಇದೇಂದಳು."

ತಂದೆಯು ಕೊಂಚಹೊತ್ತು ಸುಮ್ಮನಿದ್ದು ಮಗಳ ಚಹರೆಯ ಕಡೆ ಈಕ್ಷಿಸಿ ಆಮೇಲೆ, "ನಿಮ್ಮಮ್ಮನಿಗೆ ಗೊತ್ತಿಲ್ಲ" ಎಂದನು.

ಪರದೆಯನ್ನು ಓರೆಮಾಡಿಕೊಂಡು ಇಂದುಮತಿಯು ಸ್ವಾಭಾವಿಕತೆಯಿಂದ ಕೊಠಡಿಯೊಳಕ್ಕೆ ಬಂದಳು. ಟೇಬಲ್

ಮೇಲಿದ್ದ ದೀಪದ ಬತ್ತಿಯನ್ನು ಕೊಂಚ ಇಳಿಸಿ, "ದುರ್ಬಲ ಶರೀರವು ಇಷ್ಟೊಂದು ನೋವು ಸಹಿಸುವುದಕ್ಕೆ ಹೇಗೆ ಸಾಧ್ಯ. ಹೋಗಮ್ಮ ಕಮಲು, ಮೇಲಿಂದ 'ಯುಡಿಕುಲಾನ್' ಶೀಷೆ ಕೊಂಚ ತೆಗೆದುಕೊಂಡು ಬಾ—ರಾಮಟಹಲನಿಗೆ ಕೊಂಚ 'ಐಸ್' ತೆಗೆದುಕೊಂಡು ಬರುವುದಕ್ಕೆ ಹೇಳು" ಎಂದಳು.

ಮಗಳನ್ನು ಅಲ್ಲಿಂದೆಬ್ಬಿಸಿ ತಾನೇ ತಲೆಯಬಳಿ ಕುಳಿತು ತಲೆಯ ಮೇಲೆ ಕೈಯಿಟ್ಟು, "ಬೆಂಕಿಯಾಗಿದೆ" ಎಂದಳು.

ನರೇಂದ್ರನು ಹಾಗೆಯೇ ಕಣ್ಣು ಮುಚ್ಚಿಕೊಂಡು ಮಲಗಿದ್ದ. ಏನನ್ನೂ ಹೇಳಲಿಲ್ಲ. ಇಂದುಮತಿಯು ಹಾಗೆಯೇ ಕೈಯಾಡಿ ಸುತ್ತಾ ಕೊಂಚ ಬಗ್ಗಿ ಸ್ನೇಹಪೂರ್ಣಕಂಠದಿಂದ, "ಎದೆನೋವು ಇವತ್ತು ಹೇಗಿದೇಂದ್ರೆ" ಎಂದು ಕೇಳಿದಳು.

"ಹಾಗೆಯೇ ಇದೆ."

"ಹಾಗಾದರೆ ಕೋಪಮಾಡಿಕೊಂಡು, ಎರಡು ದಿವಸದಿಂದ ಔಷಧಿ ಕುಡಿಯದೆ, ಸುಮ್ಮನೆ ಖಾಯಿಲೆ ಜಾಸ್ತಿಮಾಡಿಕೊಂಡರೆ ಏನಾದ ಹಾಗೆ ಆಗುತ್ತೆ ನೀವೇ ಹೇಳಿ."

ನರೇಂದ್ರನು ಕಣ್ಣು ಬಿಟ್ಟು ಶ್ರಾಂತಕಂಠದಿಂದ, "ನನ್ನ ಶರೀರಸ್ಥಿತಿ ಚೆನ್ನಾಗಿಲ್ಲ—ಕೊಂಚ ಸುಮ್ಮನೆ ಹಾಗೆಯೇ ಬಿದ್ದಿರ ಬೇಕೆಂದು ನನ್ನ ಇಷ್ಟ ಇಂದೂ" ಎಂದನು.

ಆ ಮಾತಿಗೆ ಈ ಉತ್ತರ!

ಇಂದುಮತಿ ಮಿಂಚಿನಂತೆ ಎದ್ದು ನಿಂತಳು. "ಒಳ್ಳೆಯದು ಬಿದ್ದಿರಿ. ಕೊಠಡಿಯೊಳಕ್ಕೆ ಬಂದದ್ದು ನನ್ನದೇ ತಪ್ಪು."

ಬಾಗಿಲಿನವರೆಗೂ ನಡೆದು ಒಮ್ಮಲೇ ನಿಂತು, "ನೀವು ನಿಮ್ಮ ಪ್ರಾಣಕ್ಕೆ ಹಾನಿಮಾಡಿಕೊಂಡು ನನಗೆ ಖಂಡಿತ ಸಜ ಕೊಡಲಾರಿರಿ—ಈ ಕಾಗದವನ್ನು ಓದಿನೋಡಿ. ನಮ್ಮಪ್ಪ ನನ್ನ ಹೆಸರಿನಲ್ಲಿ ಹತ್ತುಸಾವಿರ ರೂಪಾಯಿಗಳ ಉಯಿಲು ಮಾಡಿದ್ದಾರೆ." ಎಂದು ಹೇಳಿ ಎಡಗೈಯಿಂದ ಕಾಗದವನ್ನು

ಸೋಫಾದ ಬಳಿಗೆ ಎಸೆದು ಹೊರಗೆ ಬಂದು ನಿಂತಳು. ಆ ಮೇಲೆ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಒತ್ತರಿಸಿ ಬರುತ್ತಿದ್ದ ಅಳುವನ್ನು ತಡೆಯುತ್ತಾ ತನ್ನ ಕೊಠಡಿಗೆ ಬಂದು ಬಾಗಿಲನ್ನು ಮುಚ್ಚಿ ಮಲಗಿದಳು.

ಇನ್ನೊಬ್ಬರು ಆಡಿದ ಮಾತನ್ನು ಸಹಿಸುವುದಾಗಲಿ, ಅಥವಾ ಸೋಲನ್ನು ಒಪ್ಪಿಕೊಳ್ಳುವುದಾಗಲಿ ಅವಳು ಕಲಿತುಕೊಂಡಿರಲಿಲ್ಲ—ಸಾಧಾರಣವಾಗಿ ಹೆಂಗಸರು ಕಲಿಯುವುದಿಲ್ಲ—ಆದರಿಂದ ಅವಳ ಮನಸ್ಸಿನಲ್ಲಿ ಉದ್ಭವವಾದ ಒಳ್ಳೆಯ ಸಂಕಲ್ಪವು ಕೂಡ ವ್ಯರ್ಥವಾಯಿತು. ಅವಳು ಏನು ಮಾಡಲು ಹೋಗಿದ್ದಳು? ಆದರೆ ಏನು ಮಾಡಿಕೊಂಡು ಹಿಂತಿರುಗಿದಳು!

## ೮

"ಇದೇನು ವಿಮಲ—ನೀವು ಅಳುತ್ತಿದ್ದೀರೇನು? ನಿಮ್ಮ ಕಣ್ಣುಗಳಂತು ಗುಲಾಬಿಗಿಂತ ಕೆಂಪಾಗಿವೆ."

ಅಂಬಿಕಾಬಾಬುಗಳ ಹೆಂಡತಿಯು ಕೇಳುತ್ತಿದ್ದಳು. ವಿಮಲೆಯು ಬೋರಲಾಗಿ ಮಲಗಿ ಪುಸ್ತಕವನ್ನು ಓದುತ್ತಿದ್ದಳು. ಅವಳು ಕೂಡಲೆ ಎದ್ದು ಕಣ್ಣೊರಸಿಕೊಳ್ಳುತ್ತಾ ನಗತೊಡಗಿದಳು—"ಅಬ್ಬಾ! ದುರ್ಗಾಮಣಿಯ ದುಃಖದಿಂದ ಎದೆ ಒಡೆದು ಹೋಗುತ್ತೆ, ಅತ್ತಿಗೆ!"

"ದುರ್ಗಾಮಣಿ ಯಾರು?" ಇಂದುಮತಿ ಕೇಳಿದಳು.

"ಗೊತ್ತಿಲ್ಲದವಳಂತೆ ಆಡಬೇಡ, ಅತ್ತಿಗೆ. ದುರ್ಗಾಮಣಿ ಯಾರೆಂದು ಗೊತ್ತಿಲ್ಲವೇ? ನಾಲ್ಕುಕಡೆಯೂ ಇಷ್ಟೊಂದು ಮಾತುಕತೆಯಾಗುತ್ತಾ ಇದೆ. ಆದರಿಂದ ಗೊತ್ತಾಗೇ ಆಗುತ್ತೆ."

ಕೇವಲ ಯಾವುದೋ ಪುಸ್ತಕಕ್ಕೆ ಸಂಬಂಧಪಟ್ಟ ಮಾತುಕತೆ ಇರಬಹುದೆಂದು ಇಂದವಮತಿಯು ತಿಳಿದುಕೊಂಡಳೇ ವಿನಹ

ಅವಳಿಗೆ ಇನ್ನೇನೂ ತಿಳಿಯಲಿಲ್ಲ. ಕೈಯನ್ನು ಮುಂಚೆ ಚಾಚಿ, "ನೋಡೋಣ ಯಾವ ಪುಸ್ತಕ?" ಎಂದಳು.

ಕೈಗೆ ತೆಗೆದುಕೊಂಡು ಪುಸ್ತಕವನ್ನು ನೋಡಿದಳು. ಅದರ ಕರ್ತೃವು ತನ್ನ ಪತಿ. ಹಾಳೆಗಳನ್ನು ತಿರುವಿಹಾಕುತ್ತಾ ವಿಮಲೆಗೆ ಸಮರ್ಪಣ ಮಾಡಿರುವುದು ದೃಷ್ಟಿಗೆ ಬಿತ್ತು. ಇಂದುಮತಿಯು ಪುಸ್ತಕವನ್ನು ಮೊದಲಿನಿಂದ ಕೊನೆಯವರೆಗೂ ತಿರುವಿಹಾಕಿ ಹಾಗೆಯೇ ಇಟ್ಟುಬಿಟ್ಟಳು. ಬರೆದದ್ದಾಗಿದೆ! ಮುದ್ರಿತವಾಗಿದೆ! ಅರ್ಪಿಸಲ್ಪಟ್ಟಿದೆ!—ಆದರೂ ಸಹ ಅದರ ಅ, ಆ, ಇ, ಈ, ಕೂಡ ಅವಳಿಗೆ ಗೊತ್ತಿಲ್ಲ! ಅವಳ ಚಹರೆಯನ್ನು ನೋಡಿ ವಿಮಲೆಯು ಅವಳನ್ನು ಏನನ್ನೂ ಕೇಳುವ ಸಾಹಸ ಮಾಡಲಿಲ್ಲ. ಆಗ ಇಂದುಮತಿಯು ತಾನೇ, "ನಾಟಕ, ಕಾದಂಬರಿಗಳನ್ನು ಓದುವ ಇಷ್ಟವೂ ಇಲ್ಲ, ಓದುವುದು ಮನಸ್ಸಿಗೆ ಹಿತವಾಗಿಯೂ ಕಾಣುವುದಿಲ್ಲ. ಏನಾದರೂ ಆಗಲಿ ಒಳ್ಳೆಯದೇ ಆಯಿತು; ತಿಳಿದುಕೊಂಡು ನನಗೆ ಸಂತೋಷವಾಯಿತು." ಎಂದು ಹೇಳಿದಳು.

ಅಂಬಿಕಾಬಾಬುಗಳ ಜವಾನನು ಬಂದು ಅಂಬಿಕಾಬಾಬುಗಳ ಹೆಂಡತಿಯೊಡನೆ, "ಇವತ್ತು ನೀವು ತಮಾಷೆಬಂಗಲೆ ನೋಡುವುದಕ್ಕೆ ಹೋಗಬೇಕೆಂದು ಇದ್ದಿರಂತಲ್ಲ. ಹೋಗುತ್ತೀರೋ—ಹೇಗೋ ಕೇಳಿಕೊಂಡುಬಾಂತ ಯಜಮಾನರು ಹೇಳಿದರು, ತಾಯಿ" ಎಂದು ಹೇಳಿದನು.

ಈಕೆಯು ಅಲ್ಲಿದ್ದವರಲ್ಲಿ ಕಿರಿಯವಳು, ಆದುದರಿಂದ ನಾಚಿ ತಲೆತಗ್ಗಿಸಿ ಮೃದುಸ್ವರದಲ್ಲಿ, "ಇಲ್ಲ, ಅವರ ಶರೀರಸ್ಥಿತಿ ಇನ್ನೂ ಚೆನ್ನಾಗಿ ಸುಧಾರಿಸಿಲ್ಲ—ಇವತ್ತು ಹೋಗುವುದಕ್ಕೆ ಸಾಧ್ಯವಿಲ್ಲಾಂತ ಹೇಳಬಿಡು" ಎಂದಳು.

ಜವಾನನು ಹೊರಟುಹೋದಮೇಲೆ ಇಂದುಮತಿಯು ಬಾಯಿತೆರೆದು ಹಾಗೆಯೇ ನೆಟ್ಟದೃಷ್ಟಿಯಲ್ಲಿ ನೋಡುತ್ತಿದ್ದಳು.

ಇಂತಹ ಆಶ್ಚರ್ಯದ ಸುದ್ದಿಯನ್ನು ಅವಳು ತನ್ನ ಜೀವನದಲ್ಲಿ ಎಂದೂ ಕೇಳಿರಲಿಲ್ಲವೆಂದುಕೊಂಡಳು.

"ಯಜಮಾನರು ಆಫೀಸಿನಿಂದ ಜವಾನನನ್ನು ಕಳುಹಿಸಿದ್ದಾರೆ. ದೊಡ್ಡ ಡ್ರಾಯರ್ ಇರುವ ಒಂದು 'ಬೀರು' ಹರಾಜಿಗೆ ಬಂದಿದೆ. ದೊಡ್ಡ ಕೊಠಡಿಗೆ ಹಾಕುವುದಕ್ಕೆ ತೆಗೆದುಕೊಳ್ಳೋಣವೇ ಕೇಳಿಕೊಂಡುಬಾರೆಂದು ಹೇಳಿದರೆಂದು ಹೇಳುತ್ತಾನೆ" ಎಂದು ಭೋಲಾ ಬಂದು ವಿಮಲೆಗೆ ತಿಳಿಸಿದನು.

"ಕೊಂಡುಕೊಳ್ಳಬೇಡಿ, ಎಂದು ಹೇಳಿಕಳುಹಿಸಿಬಿಡು. ಒಂದು ಸಣ್ಣ 'ಬುಕ್‌ಕೇಸೆ' ಸಾಕು" ಎಂದು ವಿಮಲೆಯು ಹೇಳಿದಳು.

ಭೋಲಾ ಹೊರಟು ಹೋದನು. ಇಂದುಮತಿಯು ಆಶ್ಚರ್ಯದಿಂದ ಅವಾಕ್ಕಾಗಿ ಕುಳಿತೇ ಇದ್ದಳು. ಗಂಡಂದಿರ ಪಕ್ಷಿಗಳಲ್ಲಿ ಹೆಚ್ಚಿನ ಪ್ರಭುತ್ವವಾಗಲಿ, ಅಥವಾ ಈ ಹೆಂಗಸರಿಬ್ಬರ ಉತ್ತರಗಳಲ್ಲಿ ದಾಸೀ ಮನೋವೃತ್ತಿಯಾಗಲಿ ಅವಳಿಗೆ ಕಂಡು ಬರಲಿಲ್ಲ. ಒಡನೆಯೇ, ಹೇಗೋ ಗೊತ್ತಿಲ್ಲ, ಅವಳ ಮನಸ್ಸಿನಲ್ಲಿ ಒಂದು ರೀತಿಯ ವ್ಯಥೆಯು ಚುಚ್ಚತೊಡಗಿತು. ತಾನು ಇವರ ಮುಂದೆ ನಿಜವಾಗಿಯೂ ತೀರ ಸಣ್ಣವಳಾಗಿ ಕಾಣಿಸುತ್ತೇನೆಂದು ಅದೇನೋ ಕಾರಣದಿಂದ ಅವಳ ಮನಸ್ಸಿನಲ್ಲಿ ಪದೇ ಪದೇ ಗೋಚರಿಸತೊಡಗಿತು.

ಹೊರಡುವ ಸಮಯದಲ್ಲಿ ವಿಮಲೆಯು ಸುಮ್ಮನೆ, "ನಿಜವಾಗಿಯೂ ನಿನಗೆ ಅಣ್ಣನ ಈ ಪುಸ್ತಕದ ವಿಚಾರ ಏನೂ ಗೊತ್ತಿಲ್ಲವೇ ಅತ್ತಿಗೆ?" ಎಂದು ಕೇಳಿದಳು.

"ಇಲ್ಲ. ಅದಕ್ಕೋಸ್ಕರ ನನ್ನ ತಲೆಯಲ್ಲಿ ಏನೂ ಕಡೀತಾ ಇಲ್ಲ. ಹಗಲು ರಾತ್ರಿ ಕುಳಿತುಕೊಂಡು ಬರೆಯುತ್ತಲೇ ಇರುತ್ತಾರೆ—ಯಾರು ಅಷ್ಟೆಲ್ಲ ಹುಡುಕಿಕೊಂಡು ಹೋದಾರೇಳು?—ನೋಡಿದೆಯಾ, ಒಂದು ಮಾತನ್ನು ಹೇಳುವುದನ್ನೇ ಮರೆತು

ಬಿಟ್ಟಿದ್ದೆ. ನಾನು ನಾಳೆ ತವರು ಮನೆಗೆ ಹೋಗುತ್ತೇನೆ'' ಎಂದು ಇಂದುಮತಿಯು ಬಹಳ ಉಪೇಕ್ಷೆಯಿಂದ ಹೇಳಿದಳು.

ವಿಮಲೆಯು ಉದ್ವಿಗ್ನಳಾಗಿ, "ಬೇಡ ಅತ್ತಿಗೆ, ಈಗಲೇ ಹೋಗಬೇಡ" ಎಂದಳು.

"ಏತಕ್ಕೆ!''

"ಏತಕ್ಕೆ? ಇದನ್ನೂ ಹೇಳಿಕೊಡಬೇಕೆ ಅತ್ತಿಗೆ, ಅಣ್ಣ ತನ್ನ ಸುಖದುಃಖದ ಯಾವ ಭಾರವನ್ನೂ ನಿನ್ನ ಮೇಲೆ ಹಾಕುವುದಿಲ್ಲ—ಇದು ಕೂಡ ನಿನ್ನ ಕಣ್ಣಿಗೆ ಕಾಣುವುದಿಲ್ಲವೇ? ಪತಿಯ ಪ್ರೇಮವನ್ನು ಕಳೆದುಕೊಳ್ಳುತ್ತಿದ್ದೀ—ಇದರ ಅರಿವು ಸಹ ನಿನಗಿಲ್ಲವೇ?''

ಇಂದುಮತಿಯು ಒಡನೆಯೇ ಕುಪಿತಳಾದಳು. "ನಾನು ನಿನ್ನ ಹತ್ತಿರ ಬೇಕಾದಷ್ಟು ಸಲ ಹೇಳಿದ್ದೇನೆ—ಈಗಲೂ ಹೇಳುತ್ತೇನೆ. ನನಗೆ ಬೇಕಿಲ್ಲ—ನನಗೆ ಬೇಕಿಲ್ಲ! ನಾನು ನಮ್ಮಣ್ಣನ ಮನೆಯಲ್ಲಿ ನಿಶ್ಚಿಂತಳಾಗಿ ಇರುತ್ತೇನೆ. ಇವರಿನ್ನೆಂದಿಗೂ ನನ್ನನ್ನು ಕರೆದುಕೊಂಡು ಬರುವುದು ಬೇಕಿಲ್ಲ—ನನ್ನನ್ನು ಸುಮ್ಮನೆ ಪೀಡಿಸುವುದೂ ಬೇಕಿಲ್ಲ!"

ಈಗ ಮಾತ್ರ ವಿಮಲೆಯು ಕೋಪಗೊಂಡಳು. "ಈ ಜಂಭವನ್ನೆಲ್ಲ ಗಂಡಸರ ಮುಂದೆ ತೋರಿಸಬೇಕು ಅತ್ತಿಗೆ. ನಾನು ಹೆಂಗಸು. ನನ್ನ ಹತ್ತಿರ ಬೇಡ. ನಿನ್ನ ತವರು ಮನೆಯವರು ದೊಡ್ಡವರು. ಅವರು ನಿನಗಾಗಿ ಎಲ್ಲಾ ಅನುಕೂಲ ಮಾಡಿಕೊಟ್ಟಿದ್ದಾರೆ—ಇಷ್ಟಕ್ಕೋಸ್ಕರ ತಾನೆ ನೀನು ಜಂಭ ಮಾಡುವುದು? ಒಳ್ಳೆಯದು. ಈಗ ಹೋಗುತ್ತಾ ಇದ್ದೀಯೆ ಹೋಗು. ಆದರೆ ಈಗ ನೀನು ಯಾವ ಪದಾರ್ಥವನ್ನು ಕಳೆದುಕೊಳ್ಳುವೆಯೋ ಅದರ ಮುಂದೆ ಈ ಅಖಂಡ ಬ್ರಹ್ಮಾಂಡವೂ ಸಣ್ಣದೆಂದು ಒಂದಲ್ಲ ಒಂದು ದಿನ ನಿನಗೆ ಗೊತ್ತಾಗುತ್ತೆ. ಅತ್ತಿಗೆ, ನಿನಗೆ ದೊರೆತಿರುವಂತಹ ವಸ್ತುವು ಸಿಕ್ಕುವುದು ಬಹಳ ಸ್ವಲ್ಪ

ಹೆಂಗಸರಿಗೆ—ಆದರೆನಿನ್ನ ದುಂದುಗಾರಿಕೆಯಿಂದ ಅಕ್ಷಯವೂ ಸಹ ಕ್ಷಯವಾಗಿ ಬಿಡುತ್ತದೆ. ನನಗೆ ಗೊತ್ತು ಹಾಗೆಯೇ ಆಗುತ್ತದೆ."

ಆ ಪುಸ್ತಕವು ವಿಮಲೆಯ ಕೈಯಲ್ಲೇಇತ್ತು. ಅದರಮೇಲೆ ದೃಷ್ಟಿಹೊರಳಿದೊಡನೆಯೇ ಇಂದುಮತಿಯ ಎದೆಯಲ್ಲಿ ಬೆಂಕಿ ಇಟ್ಟಂತಾಯಿತು. "ಜಂಭ ಕೊಚ್ಚಿಕೊಳ್ಳುವ ಸ್ಥಿತಿಯಲ್ಲಿ ಇರುವ ಹೊತ್ತಿಗೇ ಜನಗಳು ಜಂಭ ಕೊಚ್ಚಿಕೊಳ್ಳುವುದು. ನನ್ನ ಸರ್ವನಾಶವಾದರೆ ಆಗಿಹೋಗಲಿ—ಹೋದರೆ ಹಾಳಾಗಿ ಹೋಗಲಿ. ಅದಕ್ಕೋಸ್ಕರ ನೀನು ಏತಕ್ಕೆ ಇಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳಬೇಕು ವಿಮಲಾ? ಅಲ್ಲದೆ ನಾನೇಕೆ ಇರಲಾರದೆ ಇಲ್ಲಿ ನಿಂತು ಅಂತಿಂತಹ ಮಾತನ್ನು ಕೇಳಬೇಕು? ನನಗೆ ಇರುವುದಕ್ಕೆ ಇಷ್ಟವಿಲ್ಲ-ಇರುವುದಿಲ್ಲ. ಇದರಿಂದ ಏನಾಗುತ್ತೋ ಆಗಲಿ - ನಾನು ಯಾರ ಸಲಹೆ ತೆಗೆದುಕೊಳ್ಳುವುದಕ್ಕೂ ಇಷ್ಟಪಡುವುದಿಲ್ಲ - ಜಗಳ ಆಡುವುದಕ್ಕೂ ಇಷ್ಟಪಡುವುದಿಲ್ಲ."

ವಿಮಲೆಯು ಮೌನವಾಗಿದ್ದಳು. ಅವಳ ವ್ಯಥೆ ಅಂತರ್ಯಾಮಿಗೊಬ್ಬನಿಗೇ ಗೊತ್ತು. ಆದರೆ ಈ ಅಪಮಾನವಾದಮೇಲೆ ಅವಳು ಪುನಃ ತರ್ಕಿಸಲಿಲ್ಲ.

ಇಂದುಮತಿಯು ಹೊರಡಲು ಮುಂಬರಿಯುತ್ತಿದ್ದಳು. ವಿಮಲಾ, "ನಿಲ್ಲು ಅತ್ತಿಗೆ, ನೀನು ಹಿರಿಯಳು - ನಮಸ್ಕಾರ ಮಾಡುತ್ತೇನೆ" ಎಂದಳು.

## ೯

ಅಂದು ಸಂಜೆಯಾಗುವುದಕ್ಕೆ ಮುಂಚೆಯೇ ಆಕಾಶವು ಮೇಘಮಂಡಿತವಾಗಿ ಮಳೆಸುರಿಯಲಾರಂಭಿಸಿತು. ಇಂದುಮತಿಯು ತನ್ನ ಮಗಳೊಡನೆ ಬಂದು ಹಾಸಿಗೆಯಮೇಲೆ ಮುದುರಿಕೊಂಡಳು. ಅವಳ ತಂಗಿಯ ಗಂಡ ಇಂದು ಬಂದಿದ್ದಾರೆ. ಅವರ ಊಟ ಉಪಚಾರದ ಸರಬರಾಯಿ, ಸಡಗರ

ಮತ್ತು ಮಾತುಕತೆಗಳ ಅಸ್ಪಷ್ಟಧ್ವನಿಯು ಪಕ್ಕದ ಕೊಠಡಿಯಿಂದ ಕೇಳಿದಂತೆಲ್ಲಾ ಯಾವುದೋ ಒಂದು ಅವ್ಯಕ್ತ ಲಜ್ಜೆಯಿಂದ ಇಂದುಮತಿಯ ಹೃದಯವು ಭಾರವಾಗತೊಡಗಿತು.

ಮೇದಿನೀಪುರಕ್ಕೆ ಅವಳು ಬಂದು ಮೂರು ತಿಂಗಳಾಗುತ್ತಾ ಬಂತು. ಅವಳ ತಂಗಿಯೂ ಸಹ ಬಂದಿದ್ದಾಳೆ. ತಂಗಿಯ ಗಂಡ ಈ ಎರಡು ತಿಂಗಳಲ್ಲಿ ಶಾಂತಿಪುರದಿಂದ ಕನಿಷ್ಠಪಕ್ಷ ಐದಾರು ಸಲ ಬಂದು ಹೋಗಿದ್ದಾರೆ. ಆದರೆ ನರೇಂದ್ರನು ಒಂದು ಸಲವೂ ಬಂದಿಲ್ಲವಷ್ಟೇ ಅಲ್ಲ ಕ್ಷೇಮಸಮಾಚಾರಕ್ಕಾಗಿ ಒಂದು ಕಾಗದವನ್ನಾದರೂ ಬರೆದಿಲ್ಲ.

ಈ ಕೆಲವು ದಿವಸಗಳಿಂದ ಈ ವಿಚಾರದ ಮೇಲೆ ಎಲ್ಲರಗಮನ ಬಿದ್ದಿದೆ. ಅಲ್ಲದೆ ಆಗಾಗ್ಗೆ ಇವರ ಚರ್ಚೆ ಸಹ ನಡೆಯುತ್ತಿರುತ್ತದೆ. ತಂಗಿ ಗಂಡನ ಕೊಠಡಿಯಲ್ಲಿ ಎಲ್ಲರೆದುರಿಗೆ ಈ ಮಾತನ್ನು ಯಾರು ಬಿಚ್ಚಿಹೇಳುವರೋ ಎನ್ನುವ ಭಯದಿಂದ ಬಹಳ ಮುಂಚೆಯೇ ಮುಖಮುರೆಸಿಕೊಂಡು ಇಂದುಮತಿಯು ತನ್ನ ಕೊಠಡಿಗೆ ಬಂದು ಬಿಟ್ಟಿದ್ದಾಳೆ.

ಗಂಡ ಬರುವುದಿಲ್ಲ. ಅವನ ಉಪೇಕ್ಷೆಯ ವೇದನೆಯು ಎಷ್ಟು ಹೆಚ್ಚಿನದು? ಅದು ಅವಳಿಗೆ ಸ್ವತಃ ಸಂಬಂಧಿಸಿದ ವೇದನೆ—ಅದು ಹಾಗಿರಲಿ. ಆದರೆ ಇದು ಇಷ್ಟೊಂದು ನಾಚಿಕೆಗೆ ಈಡು ಮಾಡುವುದೆಂದು ಅವಳೆಂದೂ ಕಲ್ಪಿಸಿರಲಿಲ್ಲ. ಭ್ರೂಣಹತ್ಯೆ ಅಥವಾ ನರಹತ್ಯೆಯಂತೆ ಇದನ್ನು ಮುಚ್ಚಿಡಲು ಅನೇಕ ಸಲ ಮರೆಯಲ್ಲೇ ಓಡಾಡಬೇಕಾಗುತ್ತಿತ್ತು. ಪ್ರಾಣ ಹೋದರೂ ಗಂಡನಿಗೆ ತಾನು ಬೇಕಿಲ್ಲನೆಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಇದುವರೆಗೂ ತನ್ನ ಗಂಡನ ಮನೆಯಲ್ಲಿ, ಗಂಡನ ಬಳಿಯಲ್ಲಿ ಕುಳಿತು ಅವನನ್ನು ಕಾಡಿ, ವ್ಯಂಗವಾಗಿ ಚುಚ್ಚುವಮಾತುಗಳನ್ನು ಆಡಿ, ತನ್ನ ಘನತೆ ಗೌರವವನ್ನು ಹೆಚ್ಚಿಸಿಕೊಳ್ಳುವುದರಲ್ಲಿ

ಕಾಲ ಕಳೆಯುತ್ತಿದ್ದಳು. ಆದರೆ ಈಗ ಪರರ ಮನೆಯಲ್ಲಿ ತನ್ನ ಹಿಂದೆ ಎಲ್ಲರೂ ವ್ಯಂಗ್ಯವಾಗಿ ತನ್ನ ವಿಚಾರ ಚುಚ್ಚಿ ಮಾತನಾಡುವುದನ್ನು ಕೇಳಬೇಕಾದರೆ—ಅವಳು ಹೇಗೆ ಸಹಿಸಿಯಾಳು?

ಅವಳ ತಂಗಿಯ ಗಂಡ ಬಂದಮೇಲಿಂದ ಯಾರು ಇವಳನ್ನು ನೋಡಿದರೂ ಅವಳಿಗೆ ಒಡನೆಯೇ ತನ್ನನ್ನು ಮರುಕದಿಂದ ನೋಡುವರೆಂದು ಗೊತ್ತಾಗುವುದು. ಕಮಲೆಯನ್ನು ಯಾರಾದರೂ ಅವಳ ತಂದೆಯ ವಿಚಾರ ಕೇಳಿದರೆ ಇಂದುಮತಿಗೆ ಸಾಯಲೇ ಎನ್ನುವಂತೆ ಆಗುವುದು. ಯಾರಾದರೂ ಗಂಡನ ಮನೆಗೆ ಹೋಗುವ ವಿಚಾರವನ್ನು ಎತ್ತಿದರೆ ಅವಳು ಅಪಮಾನದಿಂದ ಬೆಂದವಳಾಗಿ ಪ್ರಾಣಹೋದರೆ ಲೇಸೆನ್ನುವಳು.

ಅಲ್ಲಿಂದ ಹೊರಟು ಬರುವುದಕ್ಕಿಂತ ಮುಂಚೆ ತನ್ನ ಗಂಡನಲ್ಲಿ ವ್ಯಂಗ್ಯವಾಗಿ ಮಾತನಾಡಿದ್ದಲ್ಲದೆ, "ಸರಿಯಾಗಿ ಕಾಪಾಡುವ ಯೋಗ್ಯತೆ ಬಂದಲ್ಲದೆ ಕರೆದುಕೊಂಡು ಬರಬೇಕಾದದ್ದಿಲ್ಲ" ಎಂಬ ಎದೆ ಸೀಳುವ ಮಾತುಗಳನ್ನು ಸಹ ಆಡಿ ಬಂದಿದ್ದಳು.

ಇದ್ದಕ್ಕಿದ್ದಂತೆಯೇ ಇಂದುಮತಿಯ ಮೋಹದ ಕಳವಳವು ದೂರವಾಯಿತು.

"ಏಕಮ್ಮಾ, ಕಮಲು, ಅಳುತ್ತಾ ಇದ್ದೀ"

ಕಮಲೆಯು ಬಿಕ್ಕುತ್ತಾ, "ಅಪ್ಪನಿಗೆ ಹೇಗಿದೆಯೋ ಗೊತ್ತಿಲ್ಲ" ಎಂದಳು.

ಇಂದುಮತಿಗೆ ಹೃದಯದಮೇಲೆ ಸುತ್ತಿಗೆಯಿಂದ ಹೊಡೆದಂತಾಯಿತು. ಅವಳು ಮಗಳನ್ನು ಎದೆಗವುಚಿಕೊಂಡು ಬಿಕ್ಕಿ ಬಿಕ್ಕಿ ರೋದಿಸತೊಡಗಿದಳು.

ರಭಸದಿಂದ ಸುರಿಯುತ್ತಿದ್ದ ಮಳೆಯು ಒಂದೇ ಸಮನೆ ಭೋರೆನ್ನುತ್ತಿತ್ತು. ಆದರಿಂದ ಮಗಳ ವಿನಹ ಅವಳ ಅಳುವು ಯಾರಿಗೂ ಕೇಳಿಸದೆ ಅವಳ ಮರ್ಯಾದೆ ಉಳಿಯಿತು.

ತಾಯಿಯು ಹೇಳಿಕೊಟ್ಟಿದ್ದಳೋ ಅಥವಾ ಇಲ್ಲವೋ

ಗೊತ್ತಿಲ್ಲ, ಮಾರನೆಯ ದಿವಸ ಬೆಳಗ್ಗಿನಿಂದ ಕಮಲೆಯು ತನ್ನ ತಂದೆಯನ್ನು ನೋಡಬೇಕೆಂದೂ—ಅವನ ಬಳಿಗೆ ಹೋಗಬೇಕೆಂದೂ ಹಠಹಿಡಿದಳು. ಮೊದಲು ಇಂದುಮತಿಯು ತುಂಬ ಗದರಿಸಿಕೊಂಡಳು. ಕೊನೆಗೆ ತನ್ನ ಅಣ್ಣನ ಬಳಿಗೆ ಬಂದು, "ಕಮಲಾ ಏನುಮಾಡಿದರೂ ಸುಮ್ಮನಾಗುವುದಿಲ್ಲ ಅಣ್ಣ—ಕಲ್ಕತ್ತೆಗೆ ಹೋಗಬೇಕೆಂದು ಕೂತಿದ್ದಾಳೆ'' ಎಂದಳು.

''ಅಳುವುದ್ಯಾಕಮ್ಮ, ಇಂದೂ, ನಾಳೆ ಬೆಳಗ್ಗೆಯೇ ಅವಳನ್ನು ಕರೆದುಕೊಂಡು ಹೊರಟುಬಿಡು; ನರೇಂದ್ರ ಹೇಗಿದ್ದಾನೆ? ನನಗಂತೂ ಕಾಗದ ಗೀಗದ ಕೂಡ ಬರೆಯುವುದಿಲ್ಲ" ಎಂದು ಹೇಳಿದ ಅವಳಣ್ಣ.

ಇಂದುಮತಿಯು ತಲೆತಗ್ಗಿಸಿ, ''ಹುಂ!'' ಎಂದಳು.

''ಚೆನ್ನಾಗಿದ್ದಾನೆ ತಾನೆ?''

ಅವಳು ಹಾಗೆಯೇ, ''ಹುಂ! ಇದ್ದಾರೆ!'' ಎಂದಳು.

* * *

ವಿಮಲೆಯು ಬೆಪ್ಪಾದಳು. ''ಯಾವಾಗ ಬಂದೆ ಅತ್ತಿಗೆ?''

''ಇದೇ ಈಗ ಬರುತ್ತಾ ಇದ್ದೇನೆ.''

ಜವಾನನು ಗಾಡಿಯಿಂದ ಇಂದುಮತಿಯ ಸಂದೂಕವನ್ನು ಇಳಿಸಿ ಒಳಕ್ಕೆ ತೆಗೆದುಕೊಂಡು ಬಂದನು. ವಿಮಲೆಯು ತನ್ನ ತೀವ್ರ ವಿರಕ್ತಿಭಾವವನ್ನು ಬಲವಂತದಿಂದ ಮರೆಯಿಸಿ, ''ಇನ್ನೂ ಮನೆಗೆ ಹೋಗಲಿಲ್ಲವೇ?''. ಎಂದು ಕೇಳಿದಳು.

''ಇಲ್ಲ, ಕಮಲೆಯನ್ನು ಮಾತ್ರ ಬಾಗಿಲಿನ ಹತ್ತಿರ ಇಳಿಸಿ ಬಂದೆ. ಅವಳಿಗಾಗಿಯೇ ಬರಬೇಕಾಯಿತು—ಇಲ್ಲದಿದ್ದರೆ ಬರುತ್ತಲೇ ಇರಲಿಲ್ಲ.''

ವಿಮಲೆಯು ಒಂದು ದೀರ್ಘನಿಶ್ವಾಸ ಬಿಟ್ಟು, "ಬರದೆ ಇದ್ದಿದ್ದರೇ ಒಳ್ಳೆಯದಾಗುತ್ತಿತ್ತು ಅತ್ತಿಗೆ. ಈಗ ಇಲ್ಲಿ ನಿನ್ನ ಆವಶ್ಯಕತೆ ಇಲ್ಲ'' ಎಂದಳು.

ಇಂದುಮತಿಯ ಹೃದಯವು ಡವಡವನೆ ಹೊಡೆದುಕೊಳ್ಳ ಲಾರಂಭಿಸಿತು. "ಏತಕ್ಕೆ ವಿಮಲಾ?" ಎಂದು ಆತುರದಿಂದ ಕೇಳಿದಳು.

"ಇದನ್ನು ಆಮೇಲೆ ಕೇಳುವೆಯಂತೆ. ಮೊದಲು ಬಟ್ಟೆ ಬದ ಲಾಯಿಸಿ ಕೈಕಾಲು ತೊಳೆದುಕೋ – ಏನು ಆಗಬೇಕಾಗಿತ್ತೋ ಅದಂತೂ ಆಗಿಹೋಯಿತು – ಅದನ್ನು ಇವತ್ತು ಕೇಳಿದರೂ ಒಂದೆ–ನಾಳೆ ಕೇಳಿದರೂ ಒಂದೆ" ಎಂದು ವಿಮಲೆಯು ಸ್ವಭಾ ವಿಕ ಗಂಭೀರತೆಯಿಂದ ಹೇಳಿದಳು.

ಇಂದುಮತಿಯು ಹಾಗೆಯೇ ಕುಕ್ಕರಿಸಿಬಿಟ್ಟಳು. ಅವಳ ಮುಖವು ಕಪ್ಪಿಟ್ಟಿತು. "ಹಾಗಾಗುವುದಿಲ್ಲ ವಿಮಲ, ನೀನು ಏನೆಂದು ಹೇಳದಿದ್ದರೆ ಒಂದು ತೊಟ್ಟು ನೀರನ್ನು ಸಹ ಕುಡಿಯು ವುದಿಲ್ಲ. ಅವರು ಜೀವಂತರಾಗಿದ್ದಾರೆ. ನಾನು ಈಗ ತಾನೆ ದೂರದಿಂದ ನೋಡಿಕೊಂಡು ಬಂದಿದ್ದೇನೆ – ಆದರೂ ನಾನು ಅಲ್ಲಿಗೆ ಹೋಗುವ ಅವಶ್ಯಕತೆ ಇಲ್ಲವೆ! ಏತಕ್ಕೆ?"

ವಿಮಲೆಯು ಕೊಂಚ ಹೊತ್ತು ಸುಮ್ಮನಿದ್ದಳು. ಪುನಃ ದೀರ್ಘಶ್ವಾಸವೆಳೆದು, "ನಿಜವಾಗಿ, ನಿನಗೆ ಇನ್ನು ಆ ಮನೆಯಲ್ಲಿ ಸ್ಥಾನವಿಲ್ಲ. ಈಗ ನಿನಗೆ ಇಲ್ಲಿ ಹೇಗೆಯೋ ನಿನ್ನ ತವರು ಮನೆ ಯಲ್ಲಿ ಸಹ. ಆದರೆ ನಮ್ಮಣ್ಣನ ಮನೆಯಲ್ಲಿ ಮಾತ್ರ ನೀನು ಇರಲಾರೆ" ಎಂದಳು.

ಇಂದುಮತಿಯು ತನ್ನ ಕಣ್ಣೀರನ್ನು ತಡೆಯುತ್ತಾ, "ನಾನಿನ್ನು ಸಹಿಸಲಾರೆ ವಿಮಲಾ. ಏನಾಗಿದೆ ಹೇಳು—ಎಲ್ಲಾ ಬಿಡಿಸಿ ಹೇಳು. ಬೇರೆ ಮದುವೆಮಾಡಿಕೊಂಡಿದ್ದಾರೆಯೋ?" ಎಂದಳು.

"ಈ ಮಾತಿನಲ್ಲಿ ನಿನಗೆ ವಿಶ್ವಾಸವಿದೆಯೆ, ಅತ್ತಿಗೆ?"

"ಇಲ್ಲ. ಎಂದಿಗೂ ಇಲ್ಲ. ನಾನೆಷ್ಟೇ ದೊಡ್ಡ ಅಪರಾಧ ಮಾಡಿದ್ದರೂ ಸರಿ, ಅವರು ಮಾತ್ರ ಯಾವ ಅನ್ಯಾಯವನ್ನೂ ಮಾಡುವುದಿಲ್ಲ. ಹೀಗಿದ್ದರೂ ಅವರ ಬಳಿ ನನಗೇಕೆ ಸ್ಥಾನ

ವಿಲ್ಲ? ಹೇಳುವುದಿಲ್ಲವೇ?'' ಎಂದು ಹೇಳುತ್ತ ಹೇಳುತ್ತ ಅವ ಳೆರಡು ಕಣ್ಣುಗಳಿಂದಲೂ ಕಣ್ಣೀರು ಹರಿಯತೊಡಗಿತು.

ವಿಮಲೆಯ ಕಣ್ಣುಗಳೂ ಸಹ ಮಂಜು ಮಂಜಾದವು. ಆದರೆ ಕಣ್ಣೀರುದುರಲಿಲ್ಲ. "ಅತ್ತಿಗೆ, ಅಲ್ಲಿ ನಿನಗಿನ್ನು ಸ್ಥಾನ ವಿಲ್ಲವೆಂದು ನಿನಗೆ ಹೇಗೆ ತಿಳಿಯ ಹೇಳಬೇಕೋ ಗೊತ್ತಿಲ್ಲ. ಶಂಭುಬಾಬುವು ಅಣ್ಣನನ್ನು ಜೈಲು ಸೇರಿಸಿದ್ದ."

ಇಂದುಮತಿಯು ರೋಮಾಂಚಿತಳಾದಳು. ''ಆಮೇಲೆ?"

ವಿಮಲೆಯು ಮುಂದುವರಿಸಿದಳು— "ಆ ಸಮಯದಲ್ಲಿ ನಾವು ಕಾಶಿಯಲ್ಲಿದ್ದೆವು. ಶಂಭುಬಾಬುವು ರೂಪಾಯಿಗಳನ್ನು ಹೊಂದಿಸಲು ಕೇವಲ ಎರಡು ದಿವಸಗಳ ಅವಕಾಶ ಕೊಟ್ಟಿದ್ದ. ಆದರೆ ನಾಲ್ಕುಸಾವಿರ ರೂಪಾಯಿ ಹೊಂದಿಸಲು ಸಾಧ್ಯ. ವಾಗಲಿಲ್ಲ. ಬಂಧಿಸಲ್ಪಟ್ಟ ಮೇಲೆ ಅಣ್ಣ, ಭೋಲಾನ ಸಂಗಡ ಕಾಶಿಗೆ ನನಗೆ ಹೇಳಿಕಳುಹಿಸಿದ. ಆದರೆ ಅಷ್ಟುಹೊತ್ತಿಗೆ ನಾವು ಅಲಹಾಬಾದಿಗೆ ಹೋಗಿಬಿಟ್ಟಿದ್ದೆವು. ಅವನು ವಾಪಸ್ಸು ಬಂದು ಪುನಃ ಅಲ್ಲಿ ಹೋದ. ಹೀಗೆ ಹತ್ತು ದಿವಸ ಕಳೆದು ಹೋದವು. ಆಮೇಲೆ ನಾವಿಲ್ಲಿಗೆ ಬಂದು ಸೇರಿದೆವು. ನಮ್ಮ ಹತ್ತಿರ ಕೂಡ ಅಷ್ಟೊಂದು ನಗದು ಹಣ ಇರಲಿಲ್ಲ. ಹನ್ನೆರಡ ನೆಯ ದಿವಸ ಒಡವೆವಸ್ತು ಅಡವಿಟ್ಟು, ಹೋಗಿ ಅಣ್ಣನನ್ನು ಬಿಡಿಸಿಕೊಂಡು ಮನೆಗೆ ಕರೆದುಕೊಂಡು ಬಂದರು. ನಿನ್ನ ಹತ್ತಿರ ಕೂಡ ನಾಲ್ಕೈದು ಸಾವಿರ ರೂಪಾಯಿಗಳ ಒಡವೆ ವಸ್ತುಗಳು ಇವೆ ಅತ್ತಿಗೆ – ಅಲ್ಲದೆ ಮೇದಿನೀಪುರ ಕೂಡ ಅಷ್ಟೊಂದು ದೂರ ಇಲ್ಲ. ನಿನಗೇ ಬರೆದುಬಿಟ್ಟಿದ್ದಿದ್ದರೆ ಇವೆಲ್ಲಾ ಆಗುತ್ತಲೇ ಇರಲಿಲ್ಲ. ಅಣ್ಣ ಹತ್ತುದಿವಸ ಜೈಲುಖಾನೆಯಲ್ಲಿ ಇರುವುದಕ್ಕೆ ಒಪ್ಪಿಕೊಂಡ—ಆದರೆ ನಿನ್ನ ಹತ್ತಿರ ಕೈಯೊಡ್ಡ ಲಿಲ್ಲ. ಈಗ ಅವನ ಹತ್ತಿರ ಹೋಗಿ ಏನು ಮಾಡುತ್ತಿ? ಅವನಿಗೆ ತುಂಬ ಸುಖ ಕೊಟ್ಟಿದ್ದೀಯೇ ಇನ್ನು ತರ್ಪಣಬಿಟ್ಟು ಮುಕ್ತಿ

ಕೊಟ್ಟುಬಿಡು—ಅವನನ್ನೂ ಜೀವಿಸಿರುವುದಕ್ಕೆ ಬಿಟ್ಟು, ನೀನೂ ಜೀವಿಸಿರು.''

ಇಂದುಮತಿಯು ಒಂದು ಕ್ಷಣ ತಲೆ ತಗ್ಗಿಸಿ ಕುಳಿತಿದ್ದಳು. ಆಮೇಲೆ ಒಂದೊಂದಾಗಿ ತನ್ನ ಮೈಮೇಲಿದ್ದ ಒಡವೆಗಳನ್ನೆಲ್ಲಾ ತೆಗೆದು ವಿಮಲೆಯ ಪಾದದ ಬಳಿ ಇಟ್ಟು, ''ಇದರಿಂದ ನಿನ್ನ ಒಡವೆಗಳನ್ನು ಬಿಡಿಸಿಕೋ ವಿಮಲ. ನಾನು ಅವರ ಹತ್ತಿರಕ್ಕೆ ಹೋಗುತ್ತೇನೆ. ನನಗಿಲ್ಲಿ ಸ್ಥಾನವಿಲ್ಲವೆಂದು ನೀನು ಹೇಳುತ್ತಿ. ಆದರೆ ಈ ಸಲ ನನಗೆ ಅವರ ಬಳಿ ಯಥಾರ್ಥಸ್ಥಾನವಿದೆ ಯೆಂದು ಹೇಳುತ್ತೇನೆ. ಯಾವುದು ಇಷ್ಟು ದಿವಸಗಳವರೆಗೆ ನನ್ನನ್ನು ಅವರಿಂದ ಬೇರೆ ಮಾಡಿತ್ತೊ ಅದನ್ನು ಇವತ್ತು ನಿನ್ನ ಬಳಿ ಚೆಲ್ಲಿ ನನ್ನ ಸ್ಥಾನವನ್ನು ಪಡೆಯಲು ಹೋಗುತ್ತಿದ್ದೇನೆ. ನಾಳೆ ಒಂದು ಸಲ ಬರಬೇಕು,—ಬಂದು ನಿನ್ನ ಅಣ್ಣ—ಅತ್ತಿಗೆಯನ್ನು ಒಂದು ಸಲ ನೋಡಬೇಕು. ಇನ್ನು ಹೊರಡುತ್ತೇನೆ'' ಎಂದು ಹೇಳುತ್ತಾ ಇಂದುಮತಿಯು ಗಾಡಿಯ ವ್ಯವಸ್ಥೆಯನ್ನೂ ಸಹ ಮಾಡದೆ ಹೊರಕ್ಕೆ ಹೊರಟಳು.

''ಬೋ, ಭೋಲಾ ಜೊತೆಯಲ್ಲೇ ಹೋಗು'' ಎನ್ನುತ್ತಾ ವಿಮಲೆಯು ಕಣ್ಣೊರಸಿಕೊಂಡು ಹಿಂದೆ ಹಿಂದೆಯೇ ಬಾಗಿಲಿನ ವರೆಗೂ ಬಂದು ಅಲ್ಲೇ ನಿಂತಿದ್ದಳು.

---

ಬೆಂಗಳೂರು ಸಿಟಿ ಟೌನ್ ಪ್ರೆಸ್ಸಿನಲ್ಲಿ ಹೆಚ್. ಎಲ್. ಪ್ರಸಾದರಿಂದ ಮುದ್ರಿಸಲ್ಪಟ್ಟಿತು.

# ಶರತ್ ಸಾಹಿತ್ಯ

**ಅನುವಾದಕರು: ಸಿ. ಕೆ. ನಾಗರಾಜರಾವ್**

| | | |
|---|---|---|
| ೧. ಪ್ರೇಮಯೋಗಿನಿ | : | ನಾಲ್ಕಾಣೆ |
| ೨. ದರ್ಪಚೂರ್ಣ | : | ಎಂಟಾಣೆ |
| ೩. ಅರಕ್ಷಣೀಯ | : | ಹನ್ನೆರಡಾಣೆ |
| ೪. ಕಾಶೀನಾಥ | : | ಆರಾಣೆ |

---

**ಜಿ. ಸದಾಶಿವಯ್ಯನವರ**

| | | | | | |
|---|---|---|---|---|---|
| ರಹಸ್ಯ (ನಾಟಕ) | : | ರೂ. | ೦ | ೪ | ೦ |
| ಜಯಶ್ರೀ (ನಾಟಕ) | : | ರೂ. | ೧ | ೧೨ | ೦ |
| ಸ್ವಾಮಿ ರಾಮತೀರ್ಥ | : | ರೂ. | ೧ | ೪ | ೦ |

---

ಸಿ. ಕೆ. ನಾಗರಾಜರಾವ್‌ರವರ

| | | |
|---|---|---|
| ಕಾಡುಮಲ್ಲಿಗೆ (ಕಥಾಸಂಗ್ರಹ) | : | ಎಂಟಾಣೆ |
| ನಾಯಿಕೊಡೆ (ವಿಡಂಬನ ಚಿತ್ರಗಳು) | : | ಎರಡಾಣೆ |

---

ದೊರೆಯುವ ಸ್ಥಳ:

**ಶರತ್ ಏಜನ್ಸೀಸ್**

ಬೆಂಗಳೂರು ನಗರ

**ಸತ್ಯಶೋಧನ ಪುಸ್ತಕ ಭಂಡಾರ**

ಕೋಟೆ, ಬೆಂಗಳೂರು ನಗರ